ಕರ್ಣಾಟಕ ಕಾವ್ಯಕಲಾನಿಧಿ- ಸಂ ॥೧೩.

ಶ್ರೀಮನ್ಮಹೀಶೂರ ಮಹಾಸಂಸ್ಥಾನಾಧೀಶ

ಶ್ರೀಮದ್ರಾಜಾಧಿರಾಜ

ಶ್ರೀ ಚಿಕದೇವ ಮಹಾರಾಜ ವಿರಚಿತಮಪ್ಪ

ದಿವ್ಯಪ್ರಬಂಧಂಗಳೊಳ್

ಶ್ರೀ ಗೀತಗೋಪಾಲಂ.

ಎಸ್. ಜಿ. ನರಸಿಂಹಾಚಾರ್ಯ್ರ್

ಗೌರ್ನಮೆಂಟ್ ಕನ್ನಡ ಟ್ರಾನ್ಸ್ಲೇಟರ್, ಎಜುಕೇಷನ್ ಡಿಪಾರ್ಟ್‌ಮೆಂಟ್
ಮೈಸೂರು,

ಮತ್ತು

ಮ. ಅ. ರಾಮಾನುಜಯ್ಯಂಗಾರ್

ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್ ಮಿಷನ್ ಹೈಸ್ಕೂಲ್, ಮೈಸೂರು—

ಇವರುಗಳಿಂದ ಪರಿಶೋಧಿಸಲ್ಪಟ್ಟು

ಮೈಸೂರು :

ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

1915.

ಶ್ರೀ ಗೀತಗೋಪಾಲಂ.

ಪೀಠಿಕೆ.

ಕರ್ಣಾಟಕ ಮಂಡಲಾಧೀಶ್ವರ ಶ್ರೀಚಿಕದೇವ ಮಹಾರಾಜ ವಿರಚಿತವಾದ "ದಿವ್ಯಪ್ರಬಂಧಗಳಲ್ಲಿ" ಈ ಗ್ರಂಥವು ಒಂದಾಗಿದೆ. ಈ ಗ್ರಂಥದ ರಚನೆಯ ವಿಷಯವಾಗಿ ಕವಿಯು ತನ್ನ ಉದ್ದೇಶವನ್ನು ಗ್ರಂಥಾದಿಯಲ್ಲಿ ಈರೀತಿ ಹೇಳಿಕೊಳ್ಳುತ್ತಾನೆ:—

ಕಂ॥ ಅನವಧಿದಯದಿಂದೀಪರಿ ।
ಜನಮನಿತುಮನರಸುಗೆಯ್ತದಿಂ ಪೊರೆದಿಹದೊಳ್ ॥
ನೆನೆದಂ ಪರಸುಖಮನವ ।
ರ್ಗನುಗೊಳಿಪಿರವಾವುದೆಂದು ಚಿಕದೇವೇಂದ್ರಂ ॥

ಪಱಿಕಿಸೆ ಪರಿಕಿಸೆ ಕಿವಿಯೊಳ್ ।
ಪರಾಶರವ್ಯಾಸಮುಖ್ಯಮುನಿಸಮ್ಮತದಿಂ ॥
ಹರಿಸಂಕೀರ್ತನವೊಂದೇ ।
ಪರಗತಿಗನುಕೂಲಮೆಂದು ನಿರವಿಸಿ ನೆಗಳ್ದಂ ॥

ಪಾಲಂ ಬಯಸಿದ ರೋಗಿಗೆ ।
ಪಾಲಿಂದೌಷಧಮನೀವ ವೈದ್ಯನ ತೆಱದಿಂ ॥
ದೀಲೋಗರೊಲ್ವ ಗೀತದ ।
ಮೂಲದೊಳೇ ಮುಕ್ತಿಗತಿಯ ಮೊಗದೋಱಿಸಿದಂ ॥

ತೊಡರ್ದಿರೆ ನುಡಿನುಣ್ಬರಗಳ ।
ಬೆಡಂಗು ಮನಮೊಲ್ದು ಗೀತಗೋಪಾಲವೆಸ ॥
ರ್ಗಡೆದೊಳ್ಗನ್ನಡಗಬ್ಬಮ ।
ನೊಡಱಿಸಿ ಚಿಕದೇವರಾಯನುನ್ನತಿವೆತ್ತಂ ॥

"ಗೀತಗೋಪಾಲ ಮಹಾಪ್ರಬಂಧಂ" ಎಂದು ಕವಿಯು ತಾನೇ ಹೇಳುವುದಱಿಂದ ಈ ಗ್ರಂಥವನ್ನು ಮಹಾ ಪ್ರಬಂಧಗಳ ಗಣನೆಯಲ್ಲಿ ಸೇರಿಸುತ್ತಾನೆಂದು ತೋರುತ್ತದೆ. ಕವಿಯು ಈ ಗ್ರಂಥದಲ್ಲಿ ಪ್ರಸಿದ್ಧವಾದ ಜಯದೇವನ ಗೀತಗೋವಿಂದಕಾವ್ಯದ ಕ್ರಮವನ್ನು ಅನುಸರಿಸಿ, "ಗೋಪಿಕಾವೃತ್ತಾಂತನಿರೂಪಣವ್ಯಾ

ಜದಿಂ ಭಗವದ್ಗುಣಂಗಳಂ," "ಮೋಕ್ಷೋಪಾಯಮಂ ಸಾಧಿಸುವುದರ್ಕೆ ಉಪಾಯಮಾದ ಪ್ರಪತ್ತಿಸ್ವರೂಪಮಂ" ಕೀರ್ತನೆಗಳ ದ್ವಾರಾ ನಿರೂಪಿಸಿ, ತನ್ಮೂಲಕ ವೇದಾಂತತಾತ್ಪರ್ಯಾರ್ಥವನ್ನು ಸಂಗ್ರಹಿಸಿ ಹೇಳಿರುತ್ತಾನೆ.

ಈ ಗ್ರಂಥದಲ್ಲಿ ಪೂರ್ವ ಉತ್ತರ ಎಂಬದಾಗಿ ಎರಡು ಭಾಗಗಳಿವೆ. ಪ್ರತಿ ಭಾಗದಲ್ಲಿಯೂ ಏಳೇಳು ಖಂಡಗಳಿವೆ. ಆ ಪ್ರತಿಯೊಂದು ಖಂಡದಲ್ಲಿಯೂ ಏಳೇಳು ಪದಗಳಿವೆ. ಹೀಗಿರುವುದರಿಂದ ಪ್ರತಿ ಖಂಡಕ್ಕೂ "ಸಪ್ತಪದಿ" ಎಂಬ ಹೆಸರನ್ನು ಕವಿಯು ಕೊಟ್ಟಿರುತ್ತಾನೆ. ಒಂದೊಂದು ಸಪ್ತಪದಿಯಲ್ಲಿ ಒಂದೊಂದು ವಿಷಯವು ಹೇಳಲ್ಪಟ್ಟಿದೆ. ಆಯಾ ವಿಷಯಗಳ ಸಾರಾಂಶವು ಆಯಾ ಸಪ್ತಪದಿಗಳ ಆದಿಯಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿದೆ. ಈ ಗ್ರಂಥದ ಕೀರ್ತನೆಗಳಲ್ಲಿ ಇತಿಹಾಸ ಪುರಾಣಾದಿಗಳಲ್ಲಿ ಕಂಗೊಳಿಸುವ ಭಾಗವತೋತ್ತಮರ ಸೂಕ್ತ್ಯಭಿಪ್ರಾಯಗಳೂ, "ಆಳ್ವಾರ್" ಎಂಬ ನಾಮದಿಂದ ಪ್ರಸಿದ್ಧರಾದ ಭಕ್ತಾಗ್ರಗಣ್ಯರ ಶ್ರೇಷ್ಠವಾದ ಅಭಿಪ್ರಾಯಗಳೂ ಸಹ ಅಡಕವಾಗಿ ಇವೆ.

ಪ್ರತಿಯೊಂದು ಕೀರ್ತನೆಯಲ್ಲಿಯೂ ಪಲ್ಲವಿ ಚರಣಗಳು ಇವೆ. ಕೀರ್ತನೆಗಳನ್ನು ಹಾಡಲು ಅನುಕೂಲಿಸುವುದಕ್ಕೆ ಆಯಾ ಕೀರ್ತನೆಗಳ ಮೇಲೆ ತಾಳರಾಗಗಳನ್ನು ಕವಿಯು ಕೊಟ್ಟಿರುತ್ತಾನೆ. ಅಲ್ಲದೆ ಆ ಕೀರ್ತನೆಗಳ ತಾತ್ಪರ್ಯವು ಸುಗಮವಾಗುವುದಕ್ಕೆ ಆಯಾ ಕೀರ್ತನೆಗಳ ಆದಿಯಲ್ಲಿ ಒಂದೊಂದು ಕಂದಗಳನ್ನು ಬರೆದಿರುತ್ತಾನೆ. ಈ ಗ್ರಂಥದ ಪದ್ಯಗಳು ಹಳಗನ್ನಡದ ಶೈಲಿಯನ್ನು ಅನುಸರಿಸಿದ್ದರೂ ಕೀರ್ತನೆಗಳು ಮಾತ್ರ ಹೊಸಗನ್ನಡದ ಶೈಲಿಯನ್ನನುಸರಿಸಿವೆ. ಇದರಿಂದ ಸ್ತ್ರೀಬಾಲ ಸಾಮಾನ್ಯವಾಗಿ ಪಂಡಿತ ಪಾಮರರೆಲ್ಲರಿಗೂ ಉಪಯೋಗವಾಗಬೇಕೆಂಬುದೇ ಕವಿಯ ಉದ್ದೇಶವೆಂದು ತೋರುತ್ತದೆ.

ಈ ಗ್ರಂಥದಲ್ಲಿರುವ ಅನೇಕ ಪದ್ಯಗಳು ತಿರುಮಲೆಯಾರ್ಯಕೃತವಾದ "ಅಪ್ರತಿಮವೀರಚರಿತ" "ಚಿಕದೇವರಾಜವಿಜಯ" ಇವೇ ಮೊದಲಾದ ಗ್ರಂಥಗಳಲ್ಲಿ ಸಿಕ್ಕುತ್ತವೆಯಾದುದರಿಂದ, ಧಾವಕಕವಿಯಂತೆ ತಿರುಮಲೆಯಾರ್ಯನೂ ಕೂಡ ಈ ಗ್ರಂಥವನ್ನು ಬರೆದು ಚಿಕದೇವಮಹಾರಾಜರ ಹೆಸರಲ್ಲಿ ಪ್ರಸಿದ್ಧಿಪಡಿಸಿದನೆಂದು ಊಹಿಸಲು ಅವಕಾಶವುಂಟು.

ಮತಾಭಿಪ್ರಾಯಗಳನ್ನು ತಿಳಿಯಲಾಸಕ್ತಿಯುಳ್ಳವರಿಗೆ ಅತ್ಯಾದರಣೀಯವಾಗಿರುವುದರಿಂದಲೂ, ಭಜನೆ ಮಾಡಲು ಅಪೇಕ್ಷೆಯುಳ್ಳ ಭಕ್ತರಿಗೆ ಉಪಯೋಗವಾಗುವುದರಿಂದಲೂ, ಸುಲಭವಾದ ಮಾತುಗಳಿಂದ ಮಹತ್ತಾದ ವಿಷಯಗಳು ಸಂಗೀತಸರಣಿಯಲ್ಲಿ ಹೇಳಲ್ಪಟ್ಟಿರುವ ಕಾರಣ ಹೆಣ್ಣುಮಕ್ಕಳ ಸಂಗೀತ ವಿದ್ಯೆಯಲ್ಲಿ ಅಭಿಮಾನವುಳ್ಳ ಹಿತೈಷಿಗಳಿಗೆ ಸಹಾಯವಾಗಬಹುದಾದುದರಿಂದಲೂ, ಈ ಗ್ರಂಥವನ್ನು ಮುದ್ರಿಸಿರುತ್ತೇವೆ.

ವಿಷಯ ವಿವರಣ.

ಪೂರ್ವ ಭಾಗ.

ಉತ್ತರ ಭಾಗ.

ಭಗವದ್ಗೀತಾರ್ಥ ಪ್ರತಿಪಾದಕ ಕೀರ್ತನಂ.

ಉಪೋದ್ಘಾತ.

ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈ ಶ್ಶಾಸ್ತ್ರವಿಸ್ತರೈಃ।
ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಸೃತಾ ॥

ಎಂಬ ಮರ್ಯಾದೆಯಲ್ಲಿ ಗೀತಾಶಾಸ್ತ್ರವು ಆಸ್ತಿಕಶಿರೋಮಣಿಗಳಿಗೆಲ್ಲಾ ಉಪಾದೇಯ ಗ್ರಂಥವಾಗಿದೆ. ಈ ಶಾಸ್ತ್ರದ ಮುಖ್ಯಾರ್ಥ ಪ್ರತಿಪಾದಕವಾದ ಕೆಲವು ಶ್ಲೋಕಗಳನ್ನು ಶ್ರೀ ಜಯದೇವನ "ಗೀತಗೋವಿಂದ"ದಂತೆ ಗಾನರೂಪದಲ್ಲಿ ರಚಿಸಿದರೆ ಭಜನಮಾಡಲಾಸಕ್ತಿಯುಳ್ಳ ಭಕ್ತರಿಗೆ ಉಪಯೋಗವಾಗಬಹುದೆಂದು ಯಾವನೋ ಒಬ್ಬ ಮಹಾತ್ಮನು ಆಲೋಚಿಸಿ, ಅನುಗ್ರಹಬುದ್ಧಿಯಿಂದ ಗೀತಾಶ್ಲೋಕಸ್ಥವಾದ ಪದಗಳನ್ನೇ ಕೀರ್ತನರೂಪವಾಗಿ ಪರಿವರ್ತಿಸಿ ರಚಿಸಿರುವನು. ಆದುದರಿಂದ ಈ ಗ್ರಂಥವು ಸಂಗೀತಸರಣಿಯನ್ನು ಮಾತ್ರವೇ ಅಲ್ಲದೆ ವಿಷಯವೈಲಕ್ಷಣ್ಯವನ್ನೂ ಪಡೆದುಕೊಂಡಿದೆ. ಆದ ಪ್ರಯುಕ್ತ ಸ್ತ್ರೀಬಾಲಸಾಮಾನ್ಯವಾಗಿ ಎಲ್ಲರಿಗೂ ಪರಿಗ್ರಾಹ್ಯವಾಗಿರುವುದು. ಆದಕಾರಣ ಮುಖ್ಯವಾಗಿ ಹೆಣ್ಣುಮಕ್ಕಳ ಸಂಗೀತವಿದ್ಯೆಯಲ್ಲಿ ಅಭಿಮಾನವುಳ್ಳ ದೇಶಹಿತೈಷಿಗಳಿಗೆಲ್ಲಾ ಈ ಗ್ರಂಥವನ್ನು ಉಪಾಯನವಾಗಿ ಅರ್ಪಿಸುತ್ತೇವೆ.

ಈ ಗೀತಗಳ ಅರ್ಥವು ವಿಶದವಾಗಿ ತಿಳಿಯುವಂತೆ ಆ ಗ್ರಂಥಕಾರನೇ ಲಲಿತವಾದ ಕನ್ನಡನುಡಿಗಳಿಂದ ಟೀಕನ್ನು ಮಾಡಿರುವನು. ಅರ್ಥವನ್ನು ತಿಳಿಯಲು ಕುತೂಹಲವುಳ್ಳವರ ಸೌಕರ್ಯಕ್ಕಾಗಿ ಆಯಾ ಕೀರ್ತನಗಳ ಕೆಳಗೆ ಆಯಾ ಟೀಕುಗಳನ್ನು ಮುದ್ರಿಸಿರುತ್ತೇವೆ.

"ಪಾಲಂ ಬಯಸಿದ ರೋಗಿಗೆ।
ಪಾಲಿಂದೌಷಧಮನೀವ ವೈದ್ಯನ ತೆಱದಿಂ ॥
ದೀಲೋಗರೊಲ್ವ ಗೀತದ।
ಮೂಲದೊಳೇ ಮುಕ್ತಿಗತಿಯ ಮೊಗದೋಱಿಸಿದಂ ॥"

ವಿಷಯವಿವರಣಂ.

|| ಶ್ರೀರಸ್ತು ||

ಶ್ರೀ ಗೀತಗೋಪಾಲಂ.

ರಾಗ || ಭೈರವಿ ||

ಕಂದ || ಶ್ರೀಯಂ ತನ್ನೆರ್ದೆವನೆಯೊಳ್ |
ಭೂಯುವತಿಯನಡಿಯೊಳಂಬುಗೊಳಿಸಿದ ಸರಸೋ ||
ಪಾಯಂ ಮಂಗಳಕಾಯಂ |
ಶ್ರೇಯಂ ಮಿಗೆ ನೆಗೞ್ಗೆ ಚದುರಗೋವಳರಾಯಂ || ೧

ಆಯುವನಬ್ಧಿಮಿತಸಕಲ |
ಶ್ರೀಯುಮನೊಡನಖಿಳಧರಣಿಮಂಡಲವಿಜಯ ||
ಶ್ರೀಯಂ ಚಿಕದೇವಮಹಾ |
ರಾಯಂಗೊಲ್ದೀಗೆ ಚದುರಗೋವಳರಾಯಂ || ೨

ರಾಗ || ಕಾಂಬೋಧಿ ||

ಚದುರಂ ಚಾಗಿಯಲಂಪುಗಾಣಿನೆಸಿಯುಂ ಸಂಗೀತಸಾಹಿತ್ಯಕೋ |
ವಿದನುತ್ಸಾಹಿ ವಿವೇಕಶಾಲಿ ನಯಶೀಲಂ ನೇಮಗಾಱಂ ಕಲಾ ||
ವಿದನೊಳ್ಪಾತುಗನೋಜೆಗಾಱನುಚಿತಜ್ಞಂ ಭಾವುಕಂ ಭಾಮಿನೀ |
ಹೃದಯಗ್ರಾಹಿ ದಯಾಪಯೋಧಿ ಚಿಕದೇವೇಂದ್ರಂ ಮಹೀಚಂದ್ರಮಂ || ೩

ಮತ್ತಂ,

ಬಳೆಗುಂ ಸಂತಸಮುಣ್ಮುಗುಂ ಬಗೆಯರಲ್ಗುಂ ಪ್ರಜ್ಞೆ ಸಲ್ಗುಂ ವಚಂ |
ಪಳಿಕುಂ ಗೆಯ್ಮೆ ಮಡಲ್ಗುವೊಳ್ಜಸಮರಂ ಪೊಮ್ಪೇಱುಗುಂ ಮತ್ತಮೇಂ ||
ಕೆಳೆಗೊಳ್ಗುಂ ನೆನವಿಲ್ಲದೆಲ್ಲ ಜಗಮುಂ ತಾಳ್ಗೆಯ್ಗುಮಾದ್ಯೈವಮುಂ |
ತಳರ್ವನ್ನಂ ಚಿಕದೇವರಾಯನ ದಯಾಂಕೂರಂ ಕಟಾಕ್ಷಾಂತದೊಳ್ || ೪

ರಾಗ | ಕೇತಾರಗೌಳ ||

ಜಗದೊಳ್ ಶ್ರೀಚಿಕದೇವನಿಂ ಪಿರಿಯರಿಲ್ಲೆತ್ತಾನುಮುಂಟಾದೊಡಂ |
ಬಗೆಗೊಳ್ಗುಂ ಪಟುವಾತಿನೊಳ್ ದೊರೆಯುಮಿಲ್ಲೆತ್ತಾನುಮುಂಟಾದೊಡಂ ||
ಬಗೆಗೊಳ್ಗುಂ ಪ್ರತಿಬಿಂಬದೊಳ್ ಮಲೆಪರಿಲ್ಲೆತ್ತಾನುಮುಂಟಾದೊಡಂ |
ಬಗೆಗೊಳ್ಗುಂ ಪ್ರಣಯಾಪರಾಧವಿಧಿಯೊಳ್ ಮೆಯ್ದೋಱುವಿನ್ನಿಲ್ಲಿಯುಂ || ೫
ಅರಸಂ ನೇಹಿಗನೊಲ್ಮೆಗಂ ನೆಱವಿಗಂ ಕಾವಂ ಹಿತಂ ತೆತ್ತಿಗಂ |
ಸರಸಂ ಮನ್ನಿಪನಾವಗಂ ತಿರುಮಲಾರ್ಯಂಗೆಂಬಿನಂ ಕೋವಿದರ್ ||
ಪೊರೆದೋತೊಲ್ದೊಡನಾಡಿಯೋವಿಪುದಿದಿತ್ತಟ್ಕತ್ತು ಪೆಂಪೇಱುಗುಂ |
ಬಿರುದಂತೆಂಬರ ಗಂಡನಪ್ರತಿಮವೀರಂ ಬಲ್ಲರೊಳ್ ಬಲ್ಲಹಂ || ೬

ಮತ್ತಂ,

ರಾಗ || ಆಸಾವೇರಿ ||

ನವಮಿಸಿತಿಲ್ಲದೊಳ್ಗುವೊಸೆಗುಂ ನೆನೆಗುಂ ಬರಿಕುಂ ದಯಾರಸಂ |
ಕವಿತರೆ ಸಿಟ್ಟಿಕುಂ ನಲಿಗುಮಾದರಿಕುಂ ಮನವಾಱ ಮನ್ನಿಕುಂ ||
ಸವಿನುಡಿದೋಱುಗುಂ ತಿರುಮಲಾರ್ಯನೊಳಪ್ರತಿಮಪ್ರಭಾವದಿಂ |
ದವನಿಯನಾಳ್ಗೆ ಬಾಳ್ಗೆ ಸತತಂ ಚಿಕದೇವನರೇಂದ್ರಚಂದ್ರಮಂ || ೭
ಅನವಧಿದಯದಿಂದೀಪರಿ |
ಜನಮನಿತುಮನರಸುಗೆಯ್ತುದಿಂ ಪೊರೆದಿಹದೊಳ್ ||
ನೆನೆದಂ ಪರಸುಖಮನವ |
ರ್ಗನುಗೊಳಪಿರವಾವುದೆಂದು ಚಿಕದೇವೇಂದ್ರಂ || ೮

ರಾಗ || ಮುಖಾರಿ ||

ಪರಿಕಿಸೆ ಪರಿಕಿಸೆ ಕಿವಿಯೊಳ್ |
ಪರಾಶರವ್ಯಾಸಮುಖ್ಯಮುನಿಸಮ್ಮತದಿಂ ||
ಹರಿಸಂಕೀರ್ತನವೊಂದೇ |
ಪರಗತಿಗನುಕೂಲಮೆಂದು ನಿರವಿಸಿ ನೆಗೞ್ದಂ* || ೯

ರಾಗ || ಶಂಕರಾಭರಣಂ ||

ಪಾಲಂ ಬಯಸಿದ ರೋಗಿಗೆ |
ಪಾಲಿಂದೌಷಧಮನೀವ ವೈದ್ಯನ ತೆಱದಿಂ |

ದೀಲೋಗರೊಲ್ವ ಗೀತದ |
ಮೂಲದೊಳೇ ಮುಕ್ತಿಗತಿಯ್ತು ಮೊಗದೋಱಿಸಿದಂ ‖ ೧೦

ತೊಡರ್ದಿರೆ* ನುಡಿನುಱ್ಱರಗಳ |
ಬೆಡಂಗು ಮನವೊಲ್ದು ಗೀತಗೋಪಾಲವೆಸ ‖
ರ್ವಡೆದೊಳ್ಗನ್ನಡಗಬ್ಬಮ |
ನೊಡರಿಸಿ ಚಿಕದೇವರಾಯನುನ್ನತಿವೆತ್ತಂ ‖ ೧೧

ರಾಗ ‖ ನಾಟಿ ‖ ತಾಳ—ಜಂಪೆ ‖

ಗೆಲವುಗೆಲವು । ಗೆಲವು ಗೆಲವಾನತರಿಗೆಲ್ಲಮನೀವ ।
ಬಲವದಪ್ರತಿಮಗೋಪಾಲರಾಯನಿಗೆ ‖ ಪಲ್ಲವಿ ‖

ಚರಣ ‖ ಮನವೊಲಿದು ಸಜ್ಜನರ ಮನ್ನಣೆಯೊಳೋವಿ ದು ।
ರ್ಜನರ ಕೊತ್ತಟದುಱಿದು ಜಾತಿಧರ್ಮವನು ‖
ಅನುಗೊಳಿಸಲವತರಿಸಿ ಯದುಕುಲದಿ ನಂದಗೋ ।
ಪನ ಭಾಗ್ಯಫಲವೆನಿಸಿ ಬಳೆವ ಗೋವಳಗೆ ‖ ೧

ಬಱಿಕ ಪೂತನಿಯುಸುವ ಪಾಲ್ವೆರಸು ಸವಿದೀಂಟಿ ।
ಸುಱಿಗಾಳಿರಕ್ಕಸನ ಸೊಕ್ಕಮುಱಿವಿಕ್ಕಿ ‖
ಕಳೆದು ಶಕಟನ ಜೀವಕಳೆಯನೆಣೆವರವನುಡಿ ।
ದಿಳೆಯೊಳಡಗೆಡಹಿ ನಗುವೆಳೆಯ ಗೋವಳಗೆ ‖ ೨

ಪುಸಿಗಱುವ ಮಡುಪಿ ಬೊಸಬಸವನನು ಬಸವಱಿಸಿ ।
ಮಸಗಿ ಖರತುರಗವೆನಿಪಸುರರನು ಗೆಲಿದು ‖
ಬಿಸದ ಮಡುವನು ಕಲಕಿ ಪೆಡೆಮೆಟ್ಟಿ ಕಾಳಿಯನ ।
ವಸರಿಸಿದ ಕಾೞ್ಗಿಚ್ಚ ಪರಿದ ಗೋವಳಗೆ ‖ ೩

ತನಗೊಡರಿಸದ ಪೂಜೆ ತಪ್ಪಿದಱಲಿಂದೆ ಕಡು ।
ಗನಲಿಯೆಡೆವಿಡದೆ ಮಱಿಗಱಿವ ವಾಸವನ ‖
ತನಿಗೊರ್ವು ತಳಕಿಱಿಯೆ ತಳೆದು ಗೋವರ್ಧನ ।
ವನನುಗೊಳಿಸಿ ಕಱುತುಱುವನಾಳ್ದ ಗೋವಳಗೆ ‖ ೪

ಕೊಳಲ ದನಿಯಿಂದೆ ಗೋವಳಗುವರಿಯರ ಬಗೆಯ ।
ನೊಳಗುಗೆಯ್ದೊಡನಾಟಕೆಳಸಿಂದೊಡವೆರಸಿ ‖
ಕೆಳೆಯೊಡಂಬಡೆ ರಾಸಕೇಳಿಯೊಳು ಸೊಗವಡಿಸಿ ।
ಸುಱಿಸುೞಿದು ನಲಿನಲಿವ ಸೊಬಗುಗೋವಳಗೆ ‖ ೫

ರಾಗ ॥ ಮಾಳವಿ ॥ ತಾಳ—ತ್ರಿವುಡೆ ॥

ಗೋವಳರಾಯಾ ಪರಾಕು, ದೇವಾದಿದೇವಾ ॥ ಪಲ್ಲವಿ ॥

ಚರಣ ॥ ಪರಮರಕ್ಷಕ ನಿನ್ನ ಪಾದಾರವಿಂದವ ।
ಸಿರದೊಳು ಪೊಱಲವಸರವೆಳಸಿ ॥
ಪರಭಕ್ತಿಯೊಳು ನಿಂದ ಬ್ರಹ್ಮಾದಿಸುರರೊಳು ।
ಕರುಣಕಟಾಕ್ಷವ ಕಡೆಗೋಡಿಸೊಮ್ಮೆ ॥ ೧

ಜಲಜಲೋಚನ ನಿನ್ನ ಸರಸಗುಣಾಮೃತ ।
ಕಲೆಗಳ ಸವಿದೆರ್ದೆಗರಗಿ ಸೊರ್ಕಿ ॥
ಬಲಿದು ನಾರದಾದಿಗಳೊಗ್ಗಿರಲೊಳು ನಲಿ ।
ನಲಿದು ಪಾಡುವ ಗಾನವ ಕಿವಿಗೊಳಿಸೊಮ್ಮೆ ॥ ೨

ಎಳೆಸಿರಿನೀಳೆಯುರೆಱೆಯ ನಿನ್ನಾಳ್ತನ ।
ದೊಳು ನೆಲೆ ನಿಂದೆವೆಂದೋಜೆಯಿಂದೆ ॥
ಬಳಸಿ ಪರಾಂಕುಶಪರಕಾಲಾದಿಗಳೆಂತು ।
ಬಳೆಯಿಸುವೂೞಿಗಂಗಳ ಬಗೆಗೊಳಿಸೊಮ್ಮೆ ॥ ೩

ರಾಗ ॥ ಕಾಂಬೋಧಿ ॥ ಆದಿತಾಳ ॥

ಬಿರಿಮುಗುಳನು ಮಿಗೆ ಬೀಱಿದರು ।
ಸರಿಮಿಗಿಲೆನೆ ಸಿರಿಯುರಸನೊಳಸಿಯರು ॥ ಪಲ್ಲವಿ ॥

ಚರಣ ॥ ಮುಗುಳುನಗೆಯ ಬೆಳಗೊ ಶೀಲುವ ಮುದ್ದುನೋಟದ ಬೆಳಗೊ ।
ತಳತಳಿಸುವ ಮಣಿತಾಟಂಕದೊಳುೞಿ ಬಿಗಿದ ಮುತ್ತಿನ ತನಿಬೆಳ್ವೆಳಗೋ ಎನೆ ॥ ೧

ಸೊಗಸುಕಮ್ಮಲರ್ಗಳ ಸೂಸಿದರು ।
ಬಗೆಗಾತಿಯರು ಗೋಪಾಲನ ಮೆಯ್ಯೊಳು ॥ ಪಲ್ಲವಿ ॥

ಚರಣ ॥ ಕರರುಹಗಳವೊಗರೊ ಮುತ್ತಿನುಂಗುರಗಳ ಕುಡಿವೊಗರೊ ।
ಕರಕಮಲದ ಮಣಿಕಡಗದೊಳೊಪ್ಪುವ ವರವಜ್ರಂಗಳ ಬಳ್ವೊಗರೋ ಎನೆ ॥ ೨

ಮೊಲ್ಲೆಮಲ್ಲಿಗೆಗಳ ಚೆಲ್ಲಿದರು ।
ಚೆಲ್ಲಗಾತಿಯರು ಚೆಲುವ ಗೋವಳನೊಳು ॥ ಪಲ್ಲವಿ ॥

ಚರಣ ॥ ಸೊಗಸುಗೋಪಾಲನೊಳು ಸಜ್ಜನಸನ್ನುತಶೀಲನೊಳು ।
ತಿರುಮಲೆಯಾರ್ಯರ ದೇವರೆನಿಸಿ ಭೂವರಚಿಕದೇವನ ಪೊಱೆದು ಮೆಱೆವನೊಳು ॥ ೩

ವೃ ॥ ಶ್ರೀಮಂತಂ ಯದುಶೈಲವಲ್ಲಭಪದಾಂಭೋಜಾತಭೃಂಗಂ ಗುಣಾ|
ರಾಮಂ ಪಶ್ಚಿಮರಂಗಧಾಮನಗರೀಸಿಂಹಾಸನಾಧೀಶನು ॥
ದ್ದಾಮಶ್ರೀಯದುವಂಶಕಲ್ಪಕತರುಪ್ರೌಢಪ್ರವಾಳಂ ಜಗ |
ತ್ಪ್ರೀಮಂಜೆತ್ತು ನೆಗಳ್ಗೆ ಬಾಳ್ಗೆ ಚಿಕದೇವೇಂದ್ರಂ ಮಹೀಚಂದ್ರಮಂ॥೧೦

ರಾಗ ॥ ವಸಂತಭೈರವಿ ॥

ಸಿಗುರಿಸಿ ಗೋಣ್ಗಳಂ ದಿಗಿಭಸಂತತಿ ಸಂತಸವಿರ್ಪಿನಂ ಮಹೋ |
ರಗಪತಿ ವಿಶ್ರಮಂಬಳೆದು ಮೆಯ್ಮುಱಿಮಂ ತಲೆಯೆತ್ತಿ ಬಾಳ್ವಿನಂ ॥
ಸೊಗವಿಡಿದಾಳ್ವಿನಂ ಕಳೆದು ಜೆಂಜೆಮರಂ ಕಮಠಂ ಧರಿತ್ರಿಯಂ |
ಬಗೆಗೊಳೆ ಬಾಹುಪೂರದೆಸಕಂ ತಳೆದೈ ಚಿಕದೇವಭೂವರಾ ॥ ೧೩

ಅಕ್ಕರವೋದುವಂದೆ ಕುಱಿಪಾದುದು ರೂಢಿಯ ಸತ್ಯವಾಕ್ಯಮೂ |
ರ್ಮಕ್ಕಳೊಳಾಡುವಂದೆ ಕುಱಿಪೊದುದು ಸಂದ ಪರಾಕ್ರಮಂ ಕರಂ ॥
ತಕ್ಕುದು ಚಿಕ್ಕದೇವವಿಭುಗಗ್ಗದ ಸತ್ಯಪರಾಕ್ರಮಾಂಕಮೇ |
ನಕ್ಕುಮೆ ಮಿಕ್ಕ ಸೊರ್ಕಿನರಮಕ್ಕಳ ಮೊಕ್ಕಳಕಿಂತು ಪೆರ್ಗಳಂ ॥ ೧೪

ವಚನಂ ॥ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪಾಪ್ರತಿಮವೀರ ಶ್ರೀನರಪತಿ ಚಿಕದೇವಮಹಾರಾಯರೀಗೀತಗೋಪಾಲ ಮಹಾಪ್ರಬಂಧದೆರಡುಂ ಭಾಗದೊಳ್ ಶ್ರೀಮನ್ನಾರಾಯಣನ ಗುಣಾನುಭವಮಾದ ನಿತ್ಯಫಲಮಂ ಅವನಡಿದಾವರೆಯೊಳ್ ನಂಬುಗೆಯೆಂಬ ತದುಪಾಯಮುಮಂ ನಿರೂಪಿಸುವರ್. ಅದಱೊಳ್ ಪ್ರಥಮಭಾಗದೀಱುಂ ಸಪ್ತಪದಿಗಳೊಳಂ ಪಲವುಂ ತೆಱದ ಕಲ್ಯಾಣಗುಣಂಗಳನನುಭವಿಸುವರ್. ಇದಱೊಳೊರ್ಮೊದಲ ಸಪ್ತಪದಿಯೊಳ್ ಯಶೋದಾವೃತ್ತಾಂತವ್ಯಾಜದಿಂ ಶ್ರೀಕೃಷ್ಣನ ಬಾಲ್ಯಕೌಮಾರಲೀಲೆಗಳಂ ನಿರೂಪಿಸುವರ್. ಅದೆಂತೆನೆ ;—

ರಾಗ ॥ ಭೂಪಾಳಿ ॥

ಕಂ ॥ ಜಗದುದಯಸ್ಥಿತಿವಿಲಯಮಾ |
ದಿಗಳಿಂದಂ ಲೀಲೆಗೆಯ್ವನಂ ಗೋಪಿ ದಿಟಂ ॥
ಮಗುವೆಂದಪ್ಪಿಕೊತ್ತೊಡಸಮು |
ರ್ಮ್ಮಗುವಾತಿಂ ನಿದ್ದೆದಿಳಿವಿನಂ ನಿರವಿಸಿದಳ್ ॥ ೧೫

॥ ಆದಿತಾಳ ॥

ಮೂಡವೆಳಗಾಯಿತೆೞ್ಚಱು ಮುದ್ದುಗೋಪಾಲಾ ।
ಆಡುವ ಮಕ್ಕಳು ನಿನ್ನನಱಸುತ್ತೆ ಬಂದಿವೆ ನೋಡು ॥ ಪಲ್ಲವಿ ॥
ಚ॥ ಮಂಗಳಮೂರುತಿಯೆಳಮಕ್ಕಳ ಮಾಣಿಕವೆ ।
ತಂಗಾಳಿಯು ತಣ್ಪೆ ನೆರೆದಿಂಗಳ ಸೊಂಪೆ ॥
ಮುಂಗುರುಳನೋಸರಿಸಿ ಮೋಹನತಿಲಕವಿಟ್ಟು ।
ಸಿಂಗರಿಪೆ ನಿನ್ನ ಮಱಿಸಿಂಗವೆಯೆೞ್ಚಱು ಬೇಗ ॥ ೧
ಕಟ್ಟಾಣಿಮಣಿಯೆಯೆನ್ನ ಕಂದ ಕಣ್ಣ ಪುಣ್ಯವೆ ।
ಪಟ್ಟದ ಕುವರ ಭೂಮಿಭಾಗ್ಯಫಲವೆ ॥
ಕಟ್ಟಿದ ಪೊನ್ಗೆಜ್ಜೆ ಕಾಲ ಕಡಗ ಘಲಿಘಲಿರೆನೆ ।
ದಟ್ಟಡಿಯಿಡುವ ಕುಲಧನವೆ ನೀನೆೞ್ಚಱು ಬೇಗ ॥ ೨
ಪೊನ್ನ ಪುತ್ತಳಿಯೆ ಪೊಚ್ಚ ಪೊಸಪೂವಿನ ಸೆಂಡೆ ।
ಕನ್ನಡಿಕಳಸವೆಯೆನ್ನ ರನ್ನದೊಡವೆ ॥
ಪೊನ್ನುಡೆಯನುಡಿಸಿ ಮೆಯ್ಯ ಪೊಗರ ಪೊಸತೆನಿಸುವೆ ।
ಎನ್ನೆಳಗೋವಳರಾಯುಯೆನ್ನಾನೆಯೆೞ್ಚಱು ಬೇಗ ॥ ೩ —೧—

ರಾಗ ॥ ಮಲಹರಿ ॥

ಕಂ ॥ ವಸುಧೆಯ ಭಾರಮನಿೞಪದೆ ।
ಸಿಸುತನದಿಂ ಪೊೞ್ತುಗಳೆವ ಪುಣ್ಯಂ ಕಂಡೆ ॥
ಬಿಸಿಬಿಸರುಹನಾಭನೊಳಿಂ ।
ತುಸಿರ್ದರ್ ಬಿಡುಗಣ್ಣ ರುಚಿತಕಾರ್ಯೋದಯಮಂ ॥ ೧೬ ॥

॥ ಧ್ರುವತಾಳ ॥

ಎತ್ತಣ ನಿದ್ದೆಯೇೞೇೞು ಗೋಪಾಲಾ ।
ನಿತ್ಯನಿರ್ಮಲ ನಿನಗೇನು ಬಿನದವಿ। ದೆತ್ತಣನಿದ್ದೆಯೇೞೇೞು ಗೋಪಾಲಾ ॥ ಪ॥
ಪೊಡವಿಯಾಣ್ಮರೆನಿಸಿ ಪುಟ್ಟಿದ ದಾನವರ ।
ಮಡುಹಿ ಪ್ರೇಮದೊಳು ಮನ್ನಿಸಿ ಸಜ್ಜನರ ॥
ಪೊಡನೆ ಸದ್ಧರ್ಮಂಗಳನುನ್ನತಿಗೊಳಿಸಿ ಬಂ ।
ದೊಡನಾಡಿಗೋವಳರೊಳೊಡಲುಮಱೆವರೆ ॥ ೧
ಪೊತ್ತಪೊೞೆಯಿೞುಹಿ ಭೂಮಿಯು ಪೊರೆವನೆಂ ।
ದಿತ್ತ ನಂಬುಗೆವಾತನೀಡೇಱಿಸದಿಂತು ॥
ಪತ್ತುಗೆಗೆಯ್ದು ಗೋಪಾಲಕರೊಡನಾಡಿ ।
ಯುತ್ತಮಪುರುಷ ನೀನೊಡಲುಮಱೆವರೆ ॥ ೨

ಮಾಯೆಗೆ ಸಿಲುಕಿ ಮೆಯ್ಮಱೆದಿರ್ಪ ಮಾನವ ।
ರಾಯುಸವಡಗಿಸಲವತಾರವೆಸಗಿ ॥
ಬಾಯು ತೆಱೆದು ಮುಕ್ತಿಪದವ ಬಣ್ಣಿಸದೆ ನೀ ।
ನೀಯೆಡೆಯೊಳು ಮಲಗಿರುವುದುಚಿತವೇ ॥೩ —೨—

ರಾಗ ॥ ಮಾಳವಶ್ರೀ ॥

ಕಂ ॥ ಮುಡಿಯಿಂದಡಿವರೆಗಂ ನ ।
ಲ್ದೊಡವುಗಳಂ ತುಡಿಸಲೆಂದು ದಾದಿ ಮನಗೊಂ ॥
ಡೊಡನಾಡಿಗುವರರೊಗ್ಗಿನೊ ।
ಳೊಡೆವೆರೆದೆಬ್ಬಿಸಿ ನುಡಿದಳಿಂತಚ್ಯುತನಂ ॥ ೧೩

ತಾಳ ॥ ತ್ರಿವುಡೆ ॥

ಮಱೆದೊಱಗದಿರೇಳು ಮೊಗುವೆ ಈ ।
ಕಱುಗಾವ ಮಕ್ಕಳು ಬಂದಿವೆ ಕೃಷ್ಣಾ ॥ ಪಲ್ಲವಿ ॥

ಕುರುಳುಪಜ್ಜೆಯ ಸುಣ್ಣಗೊಳಿಸಿ ಚಂಡಿಕೆಗಟ್ಟಿ ।
ತರವೇಱಿಸುವ ತಾತಿಸರವ ಸುತ್ತಿ ॥
ಅರಳೆಲೆಯನು ಪಣೆಗಮರಿಸಿ ಸೊಗಸೆನೆ ।
ತಿರುಮಣಿತಿಲುಕವ ತಿದ್ದಿ ಕಳಿಪುವೆನು ॥ ೧

ಕಳೆವೆತ್ತ ಮುತ್ತಿನ ಕಡಕು ಮಾಗಾಯಿ ಪ ।
ಜ್ಜಳಿಪ ಬಜ್ಜರದ ಬಾವುಲಿಯನಿಟ್ಟು ॥
ತೊಳಗುವ ನುಣ್ಗಲ್ಲದೊಳು ದಿಟ್ಟಿಯ ಬೊಟ್ಟ ।
ನಳವುಗೊಳಿಸಿ ನಿನ್ನ ಘಳಿಲನೆ ಕಳಿಪುವೆ ॥ ೨

ಕೊರಲ ಸರಿಗೆ ಕಂಟಸರ ಪುಲಿಯು ।
ಗುರು ಬೊಂಜರಪಣಿ ತಾಳಿಯ ಜತೆಗೊಳಿಸಿ ॥
ಪರಿಪರಿಪದಕವ ಪವಣುಗೊಳಿಸಿ ಪೀತಾಂ ।
ಬರವನಳವಡಿಸಿ ಭರದಿ ಕಳಿಪುವೆನು ॥ ೩

ಪೊಳೆವ ರನ್ನದ ಬಾಹುಪುರಿ ಭುಜಕೀರ್ತಿ ತೋ ।
ಳ್ಬಳೆ ತಾತಿಮಣಿಗಳ ಕೆಳೆಗೊಳಿಸಿ ॥
ತೊಳಪ ಮುಂಗೈಮುಱಿ ತೋರಮುತ್ತಿನ ಸರ ।
ತಳುಕಿನುಂಗುರಗಳ ಧರಿಸಿ ಕಳಿಪುವೆನು ॥ ೪

ಒಳುರನ್ನವಿಡಿದ ಪೊನ್ನುಡೆದಾರ ಕಡೆದ ಪ।
ವಳದ ಸವಡಿಸರಗಳನು ಕಟ್ಟಿ ||
ನಳನಳಿಸುವ ಪಾದನಳಿನಕಂದುಗೆಗೆಜ್ಜೆ ।
ಗಳನನುಗೊಳಿಸಿ ಸಿಂಗರಿಸಿ ಕಳಿಪುವೆನು || ೫ —೩—

ರಾಗ || ಮಂಗಳಕೈಶಿಕೆ ||

ಕಂ || ವಾಸವಶಂಕರವಾರಿರು ।
ಹಾಸನರಂ ಮೋಸಗೆಯ್ದ ಮಾಧವನಿರವಂ ||
ಕಾಸುರಿಯುದೆಳೆಯ ಗೋವಳ ।
ರೋಸರಿಸಲ್ ನುಡಿದರೊಲ್ಮೆಬಲ್ಮೆಗಳಿಂದಂ || ೧೮

ತಾಳ || ಜಂಪೆ ||

ನಿನ್ನಿನಾಟವ ಗೆಲಿದು ನೀ ಮಲಗಿದೊಡೆ ಬಿಡುವೆನೆ।
ಇಂದೆನ್ನ ಮೈಮೆಯು ತೋರ್ಪೆನೇಟು ಗೋವಳರಾಯಾ || ಪಲ್ಲವಿ ||
ಉಜ್ಜುಗಿಸಿ ನಾವನಿಬರೊಡ್ಡುಗಾಯಾಡುತಿರೆ ।
ಬಿಜ್ಜಿಱಗಿದಂತೆ ನೀ ಬೇಗ ಬಂದು ||
ಪಜ್ಜಳಿಸುವೆರ್ದೆಯ ಕೆಂಬರಲಿಂದೆ ಗುಱಿಯನಿಟ್ಟು ।
ಗಜ್ಜುಗವ ಗೆಲಿದೆಯುದ ಗರುವರೆಣಿಸುವರೆ || ೧
ಗುಡುಗುಡಾಡುವ ನೆವದಿ ಸಂಗಡಿಗರೊಡವಾಯ್ದು ।
ಗುಡುಗುಡಿಪ ದನಿಯಿನಿಸು ಕುಂದಿ ಬರಲು ||
ಒಡನೆ ಶಂಖವನೂದಿಯುಱಿದುದನು ಪೂರೈಸಿ ।
ಕಡೆಹಾಯ್ಸಿ ಗೆಲಿದೆಯುದ ಗರುವರೆಣಿಸುವರೆ || ೨
ಮೊತ್ತವಡೆದಾವು ಕಣ್ಮುಚ್ಚಾಲೆಯಾಟದೊಳು ।
ಕತ್ತಲೆಮನೆಯೊಕ್ಕು ಕಾಣಿಸದಿರೆ ||
ಬಿತ್ತರಿಸಿ ಚಕ್ರದೊಳ್ವೆಳಗ ಮರ್ಬಿನ ಕೊರ್ಬ ।
ಕತ್ತರಿಸಿ ಗೆಲಿದೆಯುದ ಗರುವರೆಣಿಸುವರೆ || ೩ —೪—

ರಾಗ || ಬವುಳಿ ||

ಕಂ || ಪ್ರಳಯಾಂಬುಧಿಯೊಳ್ ಪವಡಿಸಿ ।
ದೆಳಮೆಯ ತೆಱನಿಂತಿದೆಂದು ನಿರವಿಸಿ ತಿಳಿದಾ ||
ಪೞೆಯರ್ ಪೞನುಡಿಯಿಂ ಗೋ ।
ವಳಗುವರನ ಕವಡುನಿದ್ದೆಯಂ ಪುಸಿಗೆಯ್ದರ್ || ೧೯

ತಾಳ ॥ ರೂಪಕ ॥

ಮಾಯದ ನಿದ್ದೆಯು ಮಟ್ಟುಗೊಳಿಸಿನ್ನು ।
ಮಾರ್ಕಂಡೇಯನಱುಹಿದನಿದಱಾಯುವದೆಮಗೆ ॥ ಪಲ್ಲವಿ ॥

ಚ॥ ಎಲ್ಲಾ ಲೋಕಂಗಳನಿತ್ತೀಯು ನುಂಗಿ ।
ಯುಲ್ಲಾಸವಡಿಸಿ ನೀನುದರದೊಳಿಟ್ಟು ॥
ಚೆಲ್ಲವಾಡಿದೆ ಗಡ ಜಲನಿಧಿಶಯನ ।
ಬಲ್ಲೆಬಲ್ಲೆವು ನಿನ್ನ ಬಾಲ್ಯದ ಬಗೆಯ ॥ ೧

ಅಂದೇಕಾರ್ಣವದೊಳಾಲದೆಲೆಯೊಳಾ ।
ನಂದದೊಳೊಱಗಿ ಕೆಯ್ಯಿಂದಿಱಿದುಯ್ದು ॥
ಒಂದು ಕಾಲುಂಗುಟವನೊಲಿದು ಬಾಯೊಳಿಟ್ಟು ।
ಕಂದನಂದದದೊಳಿರ್ದ ಕತೆಯ ಕೇಳಿದುವು ॥ ೨

ಪುಲಿದೊವಲುಡೆಯನು ಬೊಮ್ಮನುಮಂದು ।
ಬಲದ ಮೆಯ್ಯೊಳು ನಾಭಿಪದ್ಮಗರ್ಭದೊಳು ॥
ನೆಲಬಲುಮೆಯೊಳಂತು ನಿರ್ಭಯಪಡೆಯೆ ।
ಮಲಗಿದೆ ಗಡ ನಿನ್ನ ಮೆಯ್ಮೆಯಱಿಯುವೆ ॥ ೩ —೫—

ರಾಗ—ನಾರಾಯಣಿ ॥

ಕಂದ ॥ ಪಲವುಂ ಗೋವಳವನೆಯೊಳ್ ।
ಪಲಮೆಯ್ಯಿಂ ಪಲವು ಲೀಲೆಯುಂ ಪಸರಿಸಿ ಮು ॥
ನ್ನೆಲೆಯೊಳ್ ಮಗುವಿರೆ ದೂಱುವ ।
ಲಲನೆಯರಂ ಗೋಪಿ ಜಡಿದು ತಲೆವಾಗಿಸಿದಳ್ ॥ ೧೦

ತಾಳ ॥ ಝಂಪೆ ॥

ಎನ್ನಯ್ಯ ನಿದ್ದೆದಿಳಿದೇೞು ಬೇಗ ।
ಆರಯ್ಯದೀಪರಿ ನಿನ್ನ ರಕ್ಷೆಗೆಯ್ವರ ಮಾತ ಪುಯ್ಯೆನಿಸುತೆ ॥ ಪಲ್ಲವಿ ॥

ಚ ॥ ಮನೆವೊಕ್ಕು ತಡಕಿ ನೆಲವಿನೊಳು ಮಱೆಮಾಡಿದೆಳ ।
ಗೆನೆವೊಸರ ಕಂದಲನು ಕೀಱುಗಿಱುಹಿ ॥
ಮನವಾಱೆ ಸವಿದುೞಿದ ಮಡಕೆಗಳನೊಡೆದಿಟ್ಟ ।
ನೆನುತ ದೂಱುವ ಗೋಪವನಿತೆಯರು ನಾಣ್ಚಲೆನ್ನಯ್ಯ ॥ ೧

ಕಱೆವುದಕೆ ಮೊದಲೆಯೆಳಗಱುವನುಣಬಿಟ್ಟೊಡನೆ ।
ತೆಱೆದು ಪಂಜರವ ಗಿಳಿವಱಿಯ ಕೞುಬಿ ॥

ಮಱೆದೋಱಗಿದರ ಮೊಗಕೆ ಮಸಿಯ ಪೂಸಿದನೆಂದು ।
ಒಱೆದೆ ಬಂದೊದಱುವೀಭಾವೆಯರು ನಾಣ್ಗೆಲೆ ॥ ೨

ಸಿಸುಗೆಳಾಡುವ ಬೊಗರಿಸೆಂಡುಗಳನಪಹರಿಸಿ ।
ಮಿಸುಕಿಯುದಿರಿಸಲವರ ಮೆಟ್ಟ ಸದೆದು ॥
ಅಸಿಯುರದ್ದರಿಸಲವರಳವ್ರಗಿಡಿಸಿದನೆಂದು ।
ಬಸವಳಿದು ಗಳವುವೀಭಾವೆಯರು ನಾಣ್ಗೆಲೆ ॥ ೩ —೬—

ರಾಗ ॥ ದೇವಗಾಂಧಾರಿ ॥

ಕಂದ ॥ ಪರಮಪ್ರಾಸ್ಯಪ್ರಾಪಕ ।
ಮೆರಡುಂ ಸಿರಿಯರಸನಡಿಗಳೆಂದಿರ್ಪ ಮಹಾ ॥
ಪುರುಷರ್ ಪ್ರೋಲ್ತ್ಸುಱಿಯಿರವಂ ।
ದೊರೆಗೊಳಿಸಿದರಾದಿಪುರುಷನೆಱಕದ ತೆಱನಂ ॥ ೧೧

॥ ಅಟತಾಳ ॥

ನಕ್ಷೆಳಗಾದುದು ನವನೀತಚೋರಾ ।
ನಿನ್ನ ಚೆಲ್ವ ನೋಟದ ಕಡೆಸೆಱಗುದೋಱಸು ಕೃಷ್ಣಾ ॥ ಪಲ್ಲವಿ ॥

ಚರಣ ॥ ಮುಸುಕಿದ ಸಂಸಾರಮೋಹವಡೆಗೆ ನೀ ।
ನೆಸಗುವ ನಸುನೋಟದೆಚ್ಚರದಂತೆ ।
ಮುಸುಳಿಸುವಿರುಳಿನ ಮದದುರ್ಬ ಮುಗ್ಗಿಸಿ ।
ಮಿಸುಗಿತು ಮೂಡಣ ದೆಸೆ ಮೋಹನಕೃಷ್ಣಾ ॥ ೧

ಓಜಿವಡೆಯೆ ಸತ್ವದೊಡನಿರ್ದ ತಾಮಸ ।
ರಾಜಸಗಳ ಕನಿರಸವಾಱುವಂತೆ ॥
ತೇಜದುನ್ನತಿಯೊಳು ತೆರಳಿತು ಕತ್ತಲೆ ।
ರಾಜಿಪ ಸಂಧ್ಯಾರಾಗದೊಡನೆ ಕೃಷ್ಣಾ ॥ ೨

ಬಿಡದೆ ಪಸರಿಸುವ ಬಿನ್ನಣದಿಂದೊಡ ।
ಲೆಡೆಯೊಳೊಪ್ಪುವ ಜೀವದೇಱಗೆಯಂತೆ ॥
ತೊಡರಿದ ಬಿಸಿಲಿಂದ ತೊಳಗಿತು ನೇಸಱ ।
ಲ್ಲೆಡೆಯೊಳು ಚಿಕದೇವೇಂದ್ರವರದ ಕೃಷ್ಣಾ ॥ ೩ —೭—

ಪ್ರಾಬೋಧಿಕ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — II

ಶರಣಂ ಶ್ರೀ ಚಿಕದೇವ ನಿನ್ನ ಚರಣಂ ಭೀತರ್ಗೆ ಮತ್ತಂ ಭಯೋ —
ತ್ತರಣಂ ನಿನ್ನ ಪದಾಬ್ಜರೇಣುಭರಣಂ ತಾನೇ ಮಗುಳ್ದಾಪದು ॥
ತ್ಸರಣಂ ತಾವಕದಿವ್ಯನಾಮಕರಣಂ ಮತ್ತಂ ಮಗುಳ್ದಂ ಕುಲೋ ।
ದ್ಧರಣಂ ನಿನ್ನಸಘೋಂಘ್ರಿದಾಸ್ಯವರಣಂ ಬೇಱಿಲ್ಲ ಬೇಱಿಲ್ಲ ಕೇಳ್ ॥ ೨೧

ಆರಾಣ್ಮರ್ ಚಿಕದೇವನಾರ್ ನೆಗೞ್ವರಾಶ್ರೀಚಿಕ್ಕದೇವೇಂದ್ರನಿ ।
ನ್ನಾರೊಳ್ವರ್ ಚಿಕದೇವನಾರ್ ಸಲಪುವರ್ ಶ್ರೀಚಿಕ್ಕದೇವೇಂದ್ರನಿ ॥
ನ್ನಾರೀವರ್ ಚಿಕದೇವನಾರ್ ಬಳೆಯಿಪರ್ ಶ್ರೀಚಿಕ್ಕದೇವೇಂದ್ರನಿಂ ।
ತಾರಾರುಂ ಬೆಸಗೊಳ್ವ ಪೇೞ್ವ ನುಡಿಯೊಳ್ ಶ್ರೀಚಿಕ್ಕದೇವೇಂದ್ರನೇ ॥ ೨೨

ವಚನ ॥ ಇಂತು ಮೊದಲ ಸಪ್ತಪದಿಯೊಳ್ ಶ್ರೀಕೃಷ್ಣನ ಬಾಲ್ಯ ಕೌಮಾರಲೀಲೆಗಳಂ ಭಾವಿಸಿ ಮೇಗಣ್ಪದುಂ ಸಪ್ತಪದಿಯೊಳ್ ಯೌವನಾರಂಭಲೀಲೆಗಳಂ ನಿರೂಪಿಸುವರ್.

ಆದಿತಾಳ ॥ ರಾಗ—ಕಾಂಬೋಧಿ ॥

ಕಂದ॥ ಪೊಂಗುವ ಪೊಸವೇಟದ ಗೋ ।
ಪಾಂಗನೆ ತನ್ನಳವುಗಿಡಿಸಿ ಮೆಯ್ಮಱಿಯಿಸಿದಾ ॥
ಮಂಗಳಮೂರ್ತಿಯ ಸಿಂಗರ ।
ದಿಂಗಿತಮಂ ಕೆಳದಿಗಿಂತು ಬಗೆವುಗೆ ಪೇೞ್ದಳ್ ॥ ೨೩

ಸೊಗಸುವಗೆಗಳಿಗೆ ಬಗೆಸೋತೆ ಕಾಣಮ್ಮಾ ।
ನಗೆಮೊಗದ ನಲ್ನುಡಿಯ ನಲವೃಗಾಱ ಗೋಪಾಲನ ॥ ಪಲ್ಲವಿ ॥

ಚ॥ ಮೆಟ್ಟಿದ ಪಾವುಗೆಯೊಳು ಮಿನುಗುವ ಬೊಂಗೆಜ್ಜೆಗಳ ।
ಕಟ್ಟುಲಿಯಡಿಗಡಿಗೆ ಘಲಿಱುಘಲಿಱೆನೆ ॥
ನೆಟ್ಟನೆಯೊಡವರುವ ನೇಹಿಗರ ನೆರವಿಯೊಳು ।
ಕಟ್ಟಾಣಿಮಣಿಯೊರ್ವನ ಕೈಲಾಗಿನೊಳೆಯ್ತುರುವ ॥ ೧

ನಿಂದುನಿಂದಲ್ಲಿಗಲ್ಲಿಗೆ ನೆರಮನೆಮುಂಮನೆಯೊಳಿರುವ ।
ಅಂದಗಾತಿಯರ ಬಗೆಯನಳವೃಗಿಡಿಸುತ ।

ಸಂದಿಸಿದ ಕೆಳೆಯರೊಳು ಸರಸವಾಡುವ ನೆವದೊ ।
ಳಂದಚಂದಗಳ ತೋಱುತಾನಂದದೊಳೆಯ್ತರುವ ॥ ೨

ಬಟ್ಟದೊಡೆಸೋಂಕಿನೊಳು ಪರವಶಗೊಂಡಂತೆ ಬಿಗಿ ।
ದುಟ್ಟ ಪೊಂದಟ್ಟೆಯು ಸಡಿಲಗೊಯ್ಯನೊಲೆದು ।
ಕಟ್ಟಿದ ಕಾಂಚಿಯು ಘಂಟೆ ಘಣಘಣಿಱನೆ ಕಾವನ ।
ಪಟ್ಟದಾನೆಯಂತೆ ಮದಪರವಶದೊಳೆಯ್ತರುವ ॥ ೩

ಪೊಳೆವ ಪೊನ್ನ ಸರಗಳ ಪೊಗರು ಮಿಂಚಿನೊಳೊಗುವಿಂಗೆ ।
ಕಳೆವೆತ್ತ ಕಾರ ಮುಗಿಲ ಕರುವಿನಂದದಿ ॥
ಬಳಿಕನ್ನವ ಬಯಸದೇಕಭಾವದೊಳು ಬಳಸಲು ।
ವೆಳವೆಣ್ಣು ಚಾದಗೆಗಳಿಗಿಂಪುದೋಱುತೆಯ್ತರುವ ॥ ೪

ಕಡುನೇಹಗಾತಿಯವೊಲು ಕೈಸೇರಿದ ಪೊಂಗೊಳಲ ।
ನುಡಿಸಿ ನುಡಿಸಿ ಸಂತಸವಡುವಂತೆವೊಲು ॥
ಒಡನೆ ಬಾಯೊಳು ಬಾಯ್ದೆಱೆಯೊಂದಿರೆಂದೊಡಲುಮಱೆತು ।
ಕಡೆಗಣ್ಣ ತೆಱೆಯು ಮಿಗೆ ಕರೆಗಣ್ಮಿಸುತೆಯ್ತರುವ ॥ ೫ —೧—

ಕಂ ॥ ವೇಣುವ ನುಡಿಸಲ್ ಪೂಡಿದ ।
ತಾಣಕಮಂ ತನ್ನನೊಲಿಸ ಗೆಯ್ತಂಗೆತ್ತಾ ॥
ಜಾಣೆ ಜಗದೀಶನಿರವಂ ।
ಕಾಣಿಸಿ ತಿಳಿಪುತ್ತೆ ತನ್ನ ಸೊಬಗಂ ಮೆಱೆದಳ್ ॥ ೨೫

ಕೊಳಲ ನುಡಿಪುದೆನ್ನ ಕೊರ್ತು ಕಾಣಮ್ಮ ಎನ್ನ ।
ಕೆಳದಿ ನಿನಗಿದಱೊಳೊಂದೊಳವನೊರೆವೆ ಕೇಳು ॥ ಪಲ್ಲವಿ ॥

ಚ ॥ ಅಡಿಯೊಂದನೂಱಿ ನಿಂದದಱ ಮುಂದಕೆ ಮತ್ತೊಂ ।
ದಡಿಯನಡವಾಯಿಸುವಂದದಿಂದ ॥
ಕಡೆಗೆ ತೊಲಗದಂತೆನ್ನಡಿಯನಳವಳಿಸಿ ।
ಪಿಡಿದೊತ್ತಿಗೆಱೆದುಯ್ವ ಬೆಡಗ ತೋಱುವನಮ್ಮ ॥ ೧

ಸೊಗಸುಗೊಳಲನಾಂತು ಸೊಗಯಿಪ ತೋಳ್ಗಳ ।
ನೆಗಹಿಯುಮರಿಸುವ ನೆವದೊಳೆನ್ನ ॥
ಬಗೆಗರಗಿಸುತ ಮೇಲ್ವಾಯ್ದು ಪಿಡಿದು ಬಿಗಿ ।
ಬಿಗಿದಮರ್ದಪ್ಪುವ ಬೆಡಗ ತೋಱುವನಮ್ಮ ॥ ೨

ಕಡುಸೊಬಗಿಂದ ಕೊಳಲೆಡೆಯೊಳ್ಚೆಂದುಟಿಯನಿ ।
ಟ್ಟೊಡನೆ ಪೂರೈಸುವೊಂದೋಜೆಯಿಂದ ॥
ಸಡಗರ ಮಿಗೆ ಪೊಗಸಿಯು ಮೊಗದೊಳಿಟ್ಟು ।
ಬಿಡದೆ ಮುದ್ದಿಸುವೊಂದು ಬೆಡಗ ತೋರುವನಮ್ಮ ॥ ೩ —೨—

ಕಂ ॥ ಒಡವೆರೆವೆಳಮೆಯ ಜವ್ವನ ।
ದೆಡೆಯಾಟದೊಳೆಸೆವ ಕೊಳಲ ಗೋವಳನೊಡಲಂ ॥
ತೊಡರ್ದೊಳ್ವಸದನಮೆಸಗಿ ।
ನ್ನೊಡಿದಿರೆ ತನ್ನಂತೆಗೆತ್ತು ಕೆಳದಿಯನುಸಿರ್ದಳ್ ॥ ೧೩

ಕಣ್ಣಿನಲ್ಲಿ ಕಟ್ಟಿದಂತಿದೆ। ಬಣ್ಣವಾತಲ್ಲವೆನ್ನಂತೆ ಭಾವಿಸಿ ನೋಡಬಾರದೆ ॥ಪ॥

ಚ ॥ ಸೂಡಿದ ಸೋಗೆಗರಿಯು ಕಡುಸೊಂಪು ।
ಸೊಗಸುವಡೆದ ಸುಳಿಗುರುಳಿನ ಗುಂಪು ॥
ಆಡುವ ಮುರುಹುಮಾಗಾಯ್ಗಳ ಪೆಂಪು ।
ಕೂಡೆ ಕುಣಿವ ಕುಡುಪುರ್ವಿನಲಂಪು ॥ ೧

ಕೊಳಲೆಡೆಗಡೆಗಮರುವ ಕೆಂಬೆರಲು ।
ಕೊನಬುವಡೆಯೆ ಕೊಂಕುವ ಗೆಜ್ಜೆಗೊರಲು ॥
ತಳತಳಿಸುವ ತೇಲುವ ಕಣ್ಮಲರು ।
ತನಿಗಂಪನು ಸೂಸುವ ಸುಯ್ಯೆಲರು ॥ ೨

ಸಿರಿಯೆದೆಯೊಳು ತೊಳಗುವ ಪುಲಿಯುಗುರು ।
ಸಿಂಗರಿಸಿದ ಸಿರಿಗಂದದ ತಿಗುರು ॥
ಕೊರಲ ದಂಡೆಯ ತೊಳಸಿಯ ಪೊಸಚಿಗುರು ।
ತೆರೆಮುಸಗುವ ಪೊಂದುಗುಲದ ಪೊಗರು ॥ ೩

ಮುಳಿದು ಯಶೋದೆ ಕಟ್ಟಿದ ಪೊಡೆದಾರ ।
ಮುದ್ದುವಡೆದ ನೇವಳದುಡಿದಾರ ।
ಬಳಸಿದ ಪವಳಸರದ ಸಿಂಗಾರ।
ಬಣ್ಣದುಡೆಯ ಬಿಗಿದುಟ್ಟ ವೈಯ್ಯಾರ ॥ ೪

ಒಂದಡಿ ತಲದೊಳು ನಿಂದಿಹ ನಿಲವು ।
ಮತ್ತೊಂದಡಿಯನು ಸಾರ್ಚಿದ ಬಲುಗೆಲವು ॥

ಮಂದೆಯು ಪಸುಗಳ ಮನ್ನಿಪ ನಲವು ।
ಮಡವ ಸವಿವ ನಲ್ದುಱುವಿನೊಳೊಲವು ॥ ೫ — ೩ —

ಕಂದ॥ ಸಿರಿಗೆಯ್ಗೆ ಸೇರಿ ಕಿವಿಗಿಂ ।
ಚರವಂ ಕಱಿದಧರಸುಧೆಯನೀಂಟುವ ಕೊಳಲಂ ॥
ಸರಿಸವತಿಗೆತ್ತು ಕಱುಬು ।
ತೊತ್ರೆದಳ್ ತನ್ನಂತರಂಗವಂ ಕೆಳದಿಯರೊಳ್ ॥ ೧೭

ಏನು ನೇಮದೊಳಿರ್ದುದೊ ಬೊಂಗೊಳಲೇನೋಂತುದೊ ಕೆಳದಿ ।
ತಾನೊಲಿದಿನಿಯನ ದಕ್ಕುಗೊಳಿಸುತಿದೆ ॥ ಪಲ್ಲವಿ ॥

ಚ ॥ ಪಿಂದು ಮುಂದನಾರಯ್ಯದೆ ಬಿದಱು ಬೇವಸಗೊಳದೆ ।
ಮುಂದುವರಿದಿನಿಯನೊಳು ಮೋಹವಡೆದು ॥
ಕೆಂದಾವರೆಯೆಸಳ್ಗಳ ಕೆಳೆಗೊಂಡು ಮೆಱೆವ ಕೆಯ್ಯ ।
ಚೆಂದಳದ ಸೋಂಕಿನೊಳು ಸಂದು ಸೊಗವಡುತಿದೆ ॥ ೧

ಬಳಸಿದರ ಬಗೆಯದೆ ಭರದಿಂದ ಪಿಂದೆಗೆಯದೆ ।
ತಳುವದಿನಿಯನೇಱಿಸುವ ದಾರಿವಿಡಿದು ॥
ಆಳುಕದೆಯುವನ ಕಿವಿಗಮೃತರಸದ ಸೊನೆಯು ।
ನಳವುಗೊಳಿಸುತ ಮಿಗೆಯಾನಂದವಡೆಯುತಿದೆ ॥ ೨

ಇವರಿವರಿಗಳುಕದೆಯೆಡಬಲವನೇಱಿಸದೆ ।
ತವಕದಿಂದವನ ಮೊಗದಾವರೆಯೊಳು ॥
ಕವಿದು ಬಾಯೊಳು ಬಾಯಿಟ್ಟು ಪವಳದುಟಿಯೊಳುಜೇನ ।
ಸವಿದು ಸವಿದೀಂಟುತ ಮಿಗೆ ಸಂತಸವಡೆಯುತಿದೆ ॥ ೩ — ೪ —

ಕಂದ॥ ಇನಿಯಂ ತನ್ನೊಳ್ ಬಳೆಯಿಸು ।
ಮಿನಿಗೆಯ್ತು ಮನೆನಿತನೆಳಸಿದಳ್ ಮನದೊಳ್ ತಾ ॥
ನನಿತಂ ಕೊಳಲುಲಿಗಳೊಳೇ ।
ಅನುಭವಿಸಿದ ಸೊಗಸನಿಂತು ಕೆಳದಿಯೊಳುಸಿರ್ದಳ್ ॥ ೧೮

ಸೊಗಯಿಸುತಿದೆ । ಕೊಳಲುಲಿಯಿಂತು ಸೊಗಯಿಸುತಿದೆ ।
ಬಗೆಗರಗಿಸಿ ಮಿಗೆ ಪರವಶಗೊಳಿಸುತ ॥ ಪಲ್ಲವಿ ॥
ಚ ॥ ಬಿಗುಹ ಬಿಡಿಸಲೆಂದು ಬೆದಱಿಸುವಂತೊಮ್ಮೆ ।
ಬಗೆಯಱಿತೊಡನೊಡಬಡಿಸಂತೊಮ್ಮೆ ।

ಸೊಗಸುವಾತುಗಳಿಂದ ಸೊಕ್ಕುಗೊಳಿಪಂತೊಮ್ಮೆ।
ನಗುತ ನಗುತ ಮಿಗೆ ನಲ್ಲುಱಿವಂತೊಮ್ಮೆ ॥ ೧

ಮುನಿದಿದಿರೊಳು ನಿಂದು ಮೂದಲಿಪಂತೊಮ್ಮೆ।
ಮುನಿಸ ತಿಳುಹಲೆಂದು ಮುದ್ದಿಪಂತೊಮ್ಮೆ ॥
ಇನಿವಾತಿನಿಂದೆಸಗುವಿಚ್ಛಕದಂತೊಮ್ಮೆ।
ಮನಗರಗಿ ನುಡಿವ ಮಱುಕವಾತಿನಿಂತೊಮ್ಮೆ ॥ ೨

ಕರೆದು ಸಂತಸದೊಳೇಕಾಂತವಾಡುವಂತೊಮ್ಮೆ।
ಮರುಳುಗೊಳಿಪ ಮೋಹಮಂತ್ರದಂತೊಮ್ಮೆ ॥
ಎರೆಹೊರೆಯಿನಿತಿಲ್ಲದೆಱಕವಾತಿನಂತೊಮ್ಮೆ।
ಸರಸದೊಳೆಸಗುವ ಸನ್ನೆವಾತಿನಿಂತೊಮ್ಮೆ॥ ೩ —೫—

ಕಂದ॥ ನಿಟ್ಟಿಸೆಯಾಲಿಸೆ ಜಾಸಿಸೆ ।
ಬಟ್ಟಮೊಗಂ ವೇಣುನಾದಮಾಮೆಯ್ಸಿರಿಯುಂ ॥
ತೊಟ್ಟನೆ ಕಣ್ಕಿವಿಬಗೆಗಳ ।
ಬಟ್ಟೆಗೆ ಬರ್ಪಂದಮಂ ಮನಂಬುಗೆ ಪೇೞ್ದಳ್ ॥ ೫೯

ಏಪೇೞುವೆನೆನ್ನ ಬಗೆಯು ।
ಗೋಪಾಲರರಸನಿಂತು ಕೋಟಲೆಗೊಳಿಪನಮ್ಮ ॥ ಪಲ್ಲವಿ ॥

ಚ ॥ ನಿಟ್ಟಿಸಿದೆಡೆಯೆಲ್ಲಾ । ತೇಲುವ। ನಿಡಿದಾವರೆಗಣ್ಣು। ಯಿಟ್ಟ ಕತ್ತುರಿನಾಮದ ಕುಡುಪುರ್ವಿನ। ಬಟ್ಟಮೊಗದ ಬಣ್ಣಿಗೆ ಪಸರಿಸುತಿದೆ ॥ ೧

ಆಲಿಸುವೆಡೆಯಲ್ಲಾ। ಅಡಿಗಡಿಗಮೃತದ ಸೊನೆಲಂತೆ। ಲೀಲೆ ಕೈಮಿಗೆ ಕೊಳಲಿಂದುಣ್ಮುವ ರಾ। ಗಾಲಾಪದೆ ಕಿವಿಗನುಗೊಳಿಸುತಲಿದೆ ॥ ೨

ಸಂದಿಪ ನೆನಹೆಲ್ಲಾ। ಚೆಂದುಟಿಯೊಂದಿದ ಕೊಂಗೊಳಲ। ಚಂದದಿಯೂಱಿ ಮತ್ತೊಂದಡಿಯನು ಸಾರ್ಚಿ। ನಿಂದ ನೆಲೆಯನುಱೆ ಬಂದಿಗೊಳುತಲಿದೆ ॥೩ — ೬ —

ಕಂ ॥ ಎಡೆವಿಡದೆ ಜಾನದಿಂ ಸಿರಿಯೊಡ ।
ಲೆಡೆಗಳೊಳೊಂದುವೆರಸಿಯದಱದಱೆಸಕಂ ॥
ಬಡೆವೆಸೆವ ತನ್ನ ಚಿತ್ತದ ।
ಕಡುಕೂರ್ಮೆಯನೊರೆದು ಮೆಱೆದಳೊಳ್ಗೆಳದಿಯರೊಳ್॥ ೬೧

ಪಲತೆಱನಾಗುತಿದೆ। ಯೆನ್ನ ಮನಸು। ಪಲತೆಱನಾಗುತಿದೆ।
ಚೆಲುವ ಗೋಪಾಲನ ಮೆಯ್ಸಿರಿಯು ಬಱಿವಿಡಿದು ॥ ಪಲ್ಲವಿ॥

ಚ ॥ ಸುಳಿಗುರುಳಿನೊಳಱಿ ಸುತ್ತುವರಿಯುತಿದೆ ।
ತೊಳಪ ನುಣ್ಬಣೆಯೊಳು ತೊಳಗುತಿದೆ ॥
ಎಳವೆಱೆನಾಮದೊಳು ಇನಿಸು ಕೊಂಕುತಲಿದೆ ।
ತಳಿರುವ ನೋಟದೊಳು ತಣ್ಪುವಡೆಯುತಿದೆ ॥ ೧

ನಲಿವ ಪುರ್ಬಿನೊಡನೆ ನಲಿನಲಿದಾಡುತಿದೆ ।
ಉಲಿವ ಪೊಂಗೊಳಲೊಡನುಲಿಯುತಿದೆ ॥
ಅಲೆವ ಬೆರಲ್ಗಳೊಡನಲೆವಡೆಯುತಿದೆ ।
ಒಲೆವೊಳುಗೊರಲೊಡನೊಯ್ಯನೊಲೆಯುತಿದೆ ॥ ೨

ಸರಿಸದೊಳ್ಪಡಿಯಂತೆ ಸರಿಸವೆನಿಸುತಿದೆ ।
ಬೆರಲೂಱಿದಡಿಯಂತೆ ಬಿಂಕದೊಳಿರೆ ॥
ನರಪತಿ ಚಿಕದೇವನಾಥ ಶ್ರೀಗೋಪಾಲನ ।
ಸರಸಗುಣಗಳಂತೆ ಸರಸವೆನಿಸುತಿದೆ ॥ ೩ —೩—

ಪ್ರಥಮಾನುರಾಗ ಸಪ್ತಪದಿ ಸಂಪೂರ್ಣಂ.

—ಸಪ್ತಪದಿ— III

ಪಿಡಿದು ಕಚಾಗ್ರಮಂ ಸೆಳೆಯೆ ನೀಂ ಜಯಲಕ್ಷ್ಮಿಯನಾಜಿರಂಗದೊಳ್ ।
ತೊಡತೊಡರುತ್ತೆ ಮುಂಬರಿದು ನಿನ್ನಡಿಯಂ ಬಿಡದಿರ್ಪಳೊಲ್ಮೆಯಿಂ ॥
ಕುಡೆ ಚಿಕದೇವ ನೀನಭಯಮಂ ಪಗೆವರ್ನಿಜದೇಶಕೋಶಮಂ ।
ಕುಡುವರದೆಂತವರ್ ನಿನಗೆ ಸೋಲ್ದಪರಪ್ರತಿಮಾ ವಿಚಾರಿಸಾ ॥ ೩೦

ಅಡರ್ವರ್ ತಾಂ ಮೇರುಶೃಂಗಕ್ಕರಿಗಳಡರೆ ನೀಂ ತನ್ಮಹಾದುರ್ಗಮಂ ಪಾ।
ಯ್ದು ದಿವಸ್ವರ್ದ್ವಾರಮಂ ತಾಮುಡಿಯೆ ರಿಪುಪುರೀಗೋಪುರವ್ರಾತಮಂ ನೀಂ ॥
ಪಿಡಿವರ್ಬಾಂಬೆಣ್ಡಿರಂ ತಾಂ ಪಿಡಿಯೆ ಜಡಿದು ತತ್ಕನ್ಯಕಾರತ್ನಮಂ ನೀಂ ।
ನುಡಿ ನೀನಿಂತಿರ್ದುಮೆಂತಪ್ರತಿಮನೆನಿಸುವೈ ಶೂರಲೋಕೈಕವೀರಾ ॥ ೩೧

ವಚನ ॥ ಈ ಮೂಱನೆಯ ಸಪ್ತಪದಿಯೊಳ್ ಶ್ರೀಕೃಷ್ಣನಂ ಕೂಡಿ ಯಗಲ್ದ ವಿರಹಿಣಿಯರ ವಚನವ್ಯಾಜದಿಂದವನ ಗುಣಂಗಳಂ ಪೇೞ್ವರ್.

ರಾಗ—ಕಾಂಬೋಧಿ ॥ ಆದಿತಾಳ ॥

ಮಂಗಳಮೂರುತಿ ಮೆಯ್ದೋಱಿನಮ್ಮ । ಮನವಿಡಿದಿರಲಾಱೆನಮ್ಮ ॥ಪಲ್ಲವಿ॥

ಚ ॥ ನಲಿಯುತೆನ್ನಿದಿರಿಗೆ ನಡೆತಂದನಮ್ಮ । ನಡೆದು ನಾಣ್ಗೆಡಿಸಿದನಮ್ಮ ॥
ಹಲವು ಮೆಯ್ಸಿರಿಗಳ ಹರಹಿದನಮ್ಮ । ಹರಹಿ ಹದಗೆಯ್ದನಮ್ಮ ॥ ೧
ಕಡೆಗಣ್ಣ ತೆರೆಗಳ ಕವಿಸಿದನಮ್ಮ । ಕವಿಸಿ ಕೈಗಿಡಿಸಿದನಮ್ಮ ॥
ಕುಡುಪುರ್ಬುಗಳ ಮಿಗೆ ಕುಣಿಸಿದನಮ್ಮ । ಕುಣಿಸಿ ಕಗ್ಗೊಲೆಗೊಂಡನಮ್ಮ ॥
ಕೊಳಲ ನುಡಿಸಿ ಮೋಸಗೊಳಿಸಿದನಮ್ಮ । ಗೋಪಾಲನೆಸೆದಿದನಮ್ಮ ॥
ಒಳುವಗೆಯೊಳಗೆನ್ನನೊಳಗುಗೆಯ್ದನಮ್ಮ । ಒಳಗುಗೆಯ್ದೋವಿದನಮ್ಮ ॥ ೩ ॥

—೧—

ಏವೆನಮ್ಮ । ಏವೆನಮ್ಮ । ಏವೇನೀಮಾಯಕಿನ್ನೇಗೆಯ್ವೆನಮ್ಮ ॥ ಪ ॥

ಚ ॥ ಎರೆಕೊರೆಯಿಲ್ಲದವೊಲಿರುವನಮ್ಮ । ಒಡನಿರುವನಮ್ಮ ।
ಬಱಿದೆ ಬೆಱೆವುದೆ ಸರಿಯಾಗುಬೇಗೆ ಬೇಱೆಯಮ್ಮ ॥
ಪರಿಪಱಿದು ಪಡದ ಪಾಡುವಡಿಪನಮ್ಮ ।
ಕಡೆಗೆ ಪರಿಕಿಸೆ ತಾನಲ್ಲವೆಂದು ಪರಿವನಮ್ಮ ॥ ೧ ॥
ಪುಟ್ಟುಗೆಯ್ಮೆ ನಾಡಂತಲ್ಲ ಪೊಸತಮ್ಮ । ಪೊಚ್ಚೆಪೊಸತಮ್ಮ ।
ಅವನಿಟ್ಟ ಗಂಟ ಬಿಡುವರು ಬೇಱಿಲ್ಲವಮ್ಮ ॥
ಪಟ್ಟಪಗಲನಿರುಳೆನಿಪ ದಿಟ್ಟನಮ್ಮ । ಬಲು ।
ಬೆಟ್ಟವ ಪೊಟ್ಟುಗಳೆವ ಬೀರನಮ್ಮ ॥ ೨ ॥
ಮಂಗಳಾಂಗವನು ತೋಱಿ ಮಱೆಪನಮ್ಮ ।
ಜಗದ ಕಂಗಳೊಡನೆ ಮನಸ ಕಳುವನಮ್ಮ ॥
ಹೆಂಗೊಲೆಗಿನಿಸಾದರು ಹೇಸನಮ್ಮ । (ಇನಿಸುಹೇಸನಮ್ಮ) ।
ಅಲಂಗಜನ ಹವಣಲ್ಲ ಅವನ್ಯೆಯನಮ್ಮ ॥ ೩ ॥ —೨—

॥ ರಾಗ—ಯದುಕುಲಕಾಂಬೋಧಿ ॥

ಕಾಣಿರೆ ನೀವೆನ್ನಿನಿಯನನೆಲ್ಲರ ಕಣ್ಣ ಪುಣ್ಯದ ಬೆಳಸ । (ನಮ್ಮೆಲ್ಲರ ಕಣ್ಣ ಪುಣ್ಯದ ಬೆಳಸ) । ತಾಣತಾಣದೊಳು ತಡೆದು ತಡೆದು ಸವಿಗಾಣಿಸಿ ಹರಣವ ಕೋಣೆಗೊಂಬವನ ॥ ಪಲ್ಲವಿ ॥

ಚರಣ॥ ನೋಟದ ಸುಳುಹಿನೊಳೇ ಮುನ್ನಿನ ಮಾಟವ ಮಱೆಯಿಪನ ಪುದಿಗ। ನಾಟದೊಳೆಲ್ಲರನಳವುಗಿಡಿಸಿ ಮಿಗೆ ಕೋಟಲೆಗೊಳಿಸುವ ಕೊಳಲುಗೋವಳನ ॥ ೧

ಸಿರಿಮೊಗದೊಲಪಿನೊಳೇ ನೋಳ್ಪರ ಕರಣವ ಕಲಕುವನ ಮೆ । ಯ್ಸಿರಿಯೊಳಾನಂದದ ಸೆರೆಯುನಲುಗಿ ಮಿಗೆ ಹರವಸಗೊಳಿಸುವ ಹರಿಯುನೀಂಪಿಡೆಯು ॥ ೨ ॥

ಪೊಂಗೊಳಲುಲುಪಿನೊಳೇ ಲೋಕಕೆ ಮಂಗಳವೆಸಗುವನ, ತನ್ನಿಂಗಿ । ತಂಗಳೊಳಗೇಳ್ವೆಣ್ಗಳನೞ ಗುಂಗುದಿಗೊಳಿಸುವ ಕೊನಬುಗೋವಳನ ॥ ೩

—೩—

॥ ರಾಗ—ಕಾಂಬೋಧಿ ॥

ಕಂಡಿರೇನೆ । ಕಂಡಿರೇನೆ । ಕಂಡಿರೆಯೆನ್ನಿನಿಯನ ಕಂಡಿರೇನೆ ।
ಕಂಡವರು ಪೂಜದಿರಿ ಕಾಲ್ಗೆಱಗುವೆನೆನ್ನ ಪುಂಡರೀಕಾಕ್ಷನು ಪೋದ ಪೊಲಬ ತೋಱಿರೆ ॥ ಪಲ್ಲವಿ ॥

ಚ ॥ ಎಡಬಲಗಡೆಗೆ ಸಿಡಿವೆಳವೆಣ್ಣುವಕ್ಕಿಯ ಪಿಡಿವ ।
ಬಡಿವಲೆಯ ಪೋಲ್ವ ಪೊಸಬಗೆಯ ನೋಟದ ॥
ನುಡಿವ ಪೊಂಗೊಳಲ ಗತಿವಿಡಿದೆನ್ನೆರ್ದೆಯಂತಾಡುವ ।
ಕಡುವುರ್ವಿನ ಕೊಂಕುಗೊರಲ ಕೊನಬುಗಾಱನ ॥ ೧ ॥ —೪—

॥ ರಾಗ—ಕಾಂಬೋಧಿ ॥

ಏನೆಯಮ್ಮ ಏನೆಯಮ್ಮ । ಇದೇನಿಂತು ತಡವಿನ್ನೇತಕಮ್ಮ ॥ ಪ ॥

ಚ ॥ ಮುದ್ದುನಗೆಯ ಬಲೆಗೆ ಸಿಕ್ಕುಬಿದ್ದೆನಮ್ಮ । ಕೊಳಲ ।
ಸದ್ದುಗೇಳಿದಂದೆ ಬೆಲೆಗೆ ಸಂದೆನಮ್ಮ ॥
ಅದ್ದೆನು ವಿರಹಾಂಬುಧಿಯೊಳದ್ದೆನಮ್ಮ । ಅವನ ।
ಪೊದ್ದುಗೆಗೊಳಿಸಿ ಗೆಲವ ಪೋಣ್ಕೆನಮ್ಮ ॥ ೧

ಬಣ್ಣವಗೆಯ ಬವಣಿಯೊಳು ಬಂದೆನಮ್ಮ । ಯೆನ್ನ ।
ಪೆಣ್ಣುಬುದ್ಧಿಯಿಂದ ನೊಂದು ಬೆಂದೆನಮ್ಮ ॥
ತಣ್ಣಡಿನೆಬಲಿಗಾನೆದಳೆದೆನಮ್ಮ । ಕಾರು ।
ವಣ್ಣನೊಱಗದ ಸಿರಿಯನೊದವಿಸಮ್ಮ ॥ ೨

ಪೇಣುವಿಡಿದ ಬಿಂಕಕೆ ಬೆಱತೆನಮ್ಮ । ಅವನ ।
ತಾಣಕದಂದದೊಳುಱ ತಣಿದೆನಮ್ಮ ॥
ಕಾಣೆನಿನ್ನು ಬೇಱೆಗತಿಯ ಕಾಣೆನಮ್ಮ । ನೀನೆ ।
ಕಾಣಿಕೆಗೆಯ್ದುವನಿಗೆನ್ನ ಕರುಣಿಸಮ್ಮ ॥ ೩ —೫—

॥ ರಾಗ—ಮುಖಾರಿ ॥

ನಲ್ಲನೆಂದು ನಂಬಿದೆನಮ್ಮ । ಇಂತು ।
ಕಲ್ಲೆರ್ದೆಯವನೆಂಬುದ । ಕಂಡು ಕಾಣದಾದೆನಮ್ಮ ॥ ಪ ॥

ಚ ॥ ಬಲುನಾವ ಪುಲ್ಸರವೆನಿಸುವನು ।
ಪಟ್ಟಪಗಲೆ ನೇಸಱನು ಮಱಸುವನು ।
ಬೀಸುವೆಲರ ಪಿಡಿದು ಕೆಡಪಿ ತೋಱಿಸುವನು । ಜನರ ।
ತಲೆಯೊಳು ಬರೆದ ಬಿರಿಯ ತಬ್ಬಿಬ್ಬುಗೊಳಿಸುವನು ॥ ೧ ॥
ಏನೆನಿವನ ಮಹಿಮೆಗಳನೇಕ ।
ಜಗದೊಳಿಲ್ಲವಿವನಿಗೆ ಸರಿ ತೂಕ ।
ಇನ್ನೇವೇಳುವೆನಿವನದೊಂದು ಡಾಕ ಯಿವನ ।
ಮೂವಣ್ಣದ ಮಾಯೆಯೊಳು ಮುಳುಗಿಹುದೀಲೋಕ ॥ ೨
ಜಗದ ಜಾಲಗಾಱನೊಳಿವನೇ ಮೇಲು ।
ಇನಿಸು ಸಡಿಲದಿವನಿಟ್ಟ ಕಾಲ ಕೀಲು ।
ಈಜಗವೆಲ್ಲಾಯಿವನೆಡೆಳೊಂದು ಪಾಲು ।ಮೇಗೆ ।
ಬಗೆಬಗೆಯೊಳಿಹುದಿವನ ಸೊಗಸು ಮೂಱುಪಾಲು ॥ ೩ ॥ —೬—

॥ ರಾಗ—ಘಂಟಾರವ ॥

ಗೋಪಾಲನ ತೋಱೆ ಗೋಪಾಲನ ತೋಱೆ । ಗೋಪಾಲನ ತೋಱೆ
ಗೋಪಾಲನ ತೋಱೆ । ಈಸಮಯದ ಸೇವೆಯಿಲ್ಲದಿರಲಾಱೆ ॥ ಪಲ್ಲವಿ ॥
ಚ ॥ ಮುದ್ದುಮುದ್ದುಮೊಗದೊಳೆನ್ನ ಮೊಗವಿಟ್ಟು ಮುದ್ದಿಸು ।
ತಿದ್ದಲ್ಲದೀಬಱಿಯೊಡಲನಿನ್ನು ಪೊಱಲಾಱೆ ॥ ೧
ಪೊಗರೊಗುವ ಪಚ್ಚೆವಣಿಯ ಪೋಲ್ವ ಸಿರಿಮೆಯ್ಯ ।
ಬಿಗಿಬಿಗಿದಪ್ಪದೀಯೊಡಲ ಬಿಟ್ಟೀಗೆಯ್ಗಾಱೆ ॥ ೨
ಚಿಕ್ಕದೇವೇಂದ್ರಗೊಲಿದ ಸಿರಿಗೋವಳನಡಿಗೆ ।
ದಕ್ಕದೀಯೊಡಲ ಸೆಱೆಯ ಸಿಕ್ಕುದೊಡಕಿಗಾಱೆ ॥ ೩ —೭—

ವಿರಹ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — IV

ಥಿಳ್ಳಿಯ ಬಾಗಿಲೊಳ್ ಪರಿವ ಕೊಳ್ಳಿಯ ಕೊಂಡಱೆ ಗೋಲಕೊಂಡೆಯಂ ।
ಜಳ್ಳಿಸಿಯೊಕ್ಕಲಿಕ್ಕಿ ವಿಜಯಾಪುರವಂ ಬಱಿಗೆಯ್ದು ಸೊರ್ಕಿನಿಂ ॥
ದಳ್ಳಿರಿವಾಶಿವಾಜಿಸುತ ಶಂಭುಜಿಯೇಳ್ಗೆಯನುರ್ಬುಗೊರ್ಬುವಂ ।
ತೆಳ್ಳನೆಗೆಯ್ದು ಸದ್ಭುತಪರಾಕ್ರಮದಿಂ ಚಿಕದೇವಭೂವರಂ ॥ ೩೨

ಮಯನೋ ಶಂಬರನೋ ದಶಾಸ್ಯಸುತನೋ ಮಾರೀಚನೋ ಎಂಬಿನಂ |
ಭಯದಿಂದಾಗರೆ ಢಿಳ್ಳಿಭಾಗನಗರಪ್ರಾಂತಂಗಳೊಳ್ನಾಡುಗರ್ ||
ಜಯಜೇಯೆಂದಿದಿರಿಟ್ಟ ಕಪ್ಪದೊದವಿಂ ಪೆಂಪೇಱು ಬಂದಾಶಿವಾ |
ಜಿಯ ಸೊರ್ಕಂ ಮುರಿದಿಕ್ಕಿಯಪ್ರತಿಮವೀರಾಭಿಖ್ಯೆಯಂ ತಾಳ್ದಿದಂ || ೩೩

ವಚನ || ಈ ನಾಲ್ಕನೆಯ ಸಪ್ತಪದಿಯೊಳ್ ವಿರಹಿಣಿಯರ ವಿರಹೋದ್ರೇಕಮಂ ಶ್ರೀಕೃಷ್ಣನೊಳ್ ಬಿನ್ನವಿಸ ದೂತಿಯರ ವಚನವ್ಯಾಜದಿಂ ಶ್ರೀಕೃಷ್ಣನ ಗುಣಾತಿಶಯಮಂ ಪ್ರಕಟಿಸುವರ್.

|| ರಾಗ—ಯರಕಲಕಾಂಬೋಧಿ ||

ಕಂದ|| ಕಡುಗೂರ್ತು ಕಣ್ಮನಂ ಸೋ |
ಲ್ತೊಡಗೂಡುವ ಸ್ವಪನದೆಯೊಳಾಳೋಚಿಸುತುಂ ||
ಕಡೆಗಾಣದಲಸುವಿನಿಯಳ |
ಮಿಡುಕಂ ಗೋವಿಂದನೊಡನೆ ದೂದವಿ ಪೇಟ್ಬಳ್ || ೩೪

|| ತಾಳ - ಝಂಪೆ ||

ದೇವನೊಲವನು ಮನವಿ ಲಾವಣಿಗೆಗೊಂಬಳು |
ಈವಿಧವಿ ನೀನವಳನೆಣಿಸದಿರುವರೆ ಕೃಷ್ಣ || ಪಲ್ಲವಿ ||
ಚ || ಪಿಡಿದ ಬೆಳ್ಳಿಲೆವಡಿಪು ಪಿಡಿದಂತೆ ಕಂದುತಿರೆ |
ಅಡಸಿದೊಳ್ಳಡಕೆಯುಚ್ಚಳಿಯದಿರಲು ||
ಕುಡಿವರ್ಪು ಪಲಕೆಱವ ಕೊಂಕುಗೊಳಿಸುತ್ತಿಮೆ |
ಲ್ಲೊಡಲ ಜಡಮುರಿದು ನಿಟ್ಟುಸಿರುವಿಡುತಲಸುವಳು || ೧
ಬಳಸಿ ನುಡಿವರ ಮಾತು ಬಯಲೊಳಗೆ ತಿರುಗುತಿದೆ |
ಸುಱಿವುಗಾಣದೆ ದಿಟ್ಟಿ ಸೊಱಗುತಿದೆ |
ತೊಳಪ ಗಲ್ಲದೊಳು ಕೈದಳೆವನಮರಿಸಿ ತುಂಬಿ |
ತುಳುಕಿ ಸುರಿವಾಲಿನೀರ್ದೊಱೆಯು ಕರೆಗೆಟ್ಟಿಪಳು || ೨
ಮಲಗಳೆಳಸುವಳೊಡನೆ ಮಲಗನೊದೆದೇಳುವಳು |
ನಿಲಲೆಳಸಿ ಕುಳ್ಳಿರುವಳಲೆವಡುವಳು ||
ಅಲುಗದವೆಯು ವಿಚಿತ್ರದಂದವನು ಸೆಱೆಗೊಂಡು |
ತಲೆದೂಗಿ ತನ್ನೊಳಗೆ ತಾನೆ ಕಳವಳಿಸುವಳು || ೩ —೧—

|| ರಾಗ—ಕಾಂಬೋಧಿ ||

ಕಂದ|| ನಲ್ಲಳ ಸೋಲಮನಾಲಿಸಿ |
ಚೆಲ್ಲಾಡುವ ಹರಿಯ ಮನದ ಹಮ್ಮೆಱದು ಕರಂ ||

ತಲ್ಲಳಮುಣ್ಮುವ ತೆಱದಿಂ |
ಸೊಲ್ಲಿಸಿದಳ್ ದೂತಿ ವಿರಹತಾಪೋನ್ನತಿಯಂ ‖ ೩೫

ಬಿನ್ನವಿಸಲೆನ್ನ ಹವಣಲ್ಲ । ಆ। ಚೆನ್ನೆಯೊಳು ಗೋಪಾಲ ಚೆಲ್ಲಾಟ ಸಲ್ಲ ॥ಪ।

ಚ॥ ಬಲುಮೆಗಾತಿಯರು ನಾಡೊಳು ಪಲರುವಿಱೆಯವಳೊಲುಮೆ ನಾಡಾಡಿಯಲ್ಲ । ಪಲವಗೆಯೊಳೇನದನು ಬಣ್ಣಿಪುದು ಕೇಳವಳು ಪಡುವ ಪಾಡುಗಳ ಬಗೆ ಬೇಱೆ । ಆ। ನೆಲೆಯ ನಿರವಿಸಿ ತಿಳುಹಲಾಱೆ । ತಡೆದು । ನಿಲಲಾಱಳವಳು ಇನ್ನರೆಗಳಿಗೆ ವಿಱಾಱೆ ॥ ೧

ಎಸಳುಗಂಗಳ ನೀರ್ಗಳೆಡೆವಿಡದೆ ಪೊನಲಿಡುವ್ಪವೇವೆ ಪರಿಕಾಲ್ಗಳಂತು। ಬಿಸುಸುಯ್ಪು ಬಿಱುಬಿನೊಳು ಬೇವಸಂಬಡೆವ್ಪುದನು ಚಿತ್ತರಿಸಿ ಬಗೆಗೊಳಿಪುದೆಂತು । ಅವಳ ನಿಸುವ ಕಾವನ ಪಂತ ಸಂತು। ಯಿಾ । ಪೊಸವೇಟದೊಳು ಇವಳಿಗೇನೇನುಬಂತು ॥೨

ಪೇಱುವಡೆ ನಾಲಗೆಗೆ ಬಿಸುಪೇಱುವುದು ಕೇಳೆ ಬೇಗೆಗೊಂಬುವು ಕಿವಿಗಳು। ತಾಳುವಳದೆಂತೊ ಆತರುಣಿಯಃಕಟಕಟ ಪರಿತಾಪದೇೞಿಗೆಯನೇನೆಂಬೆ। ಅಬಾಲೆ ಕಡುಗಾವಿಡಿದ ಬೊಂಬೆ। ಯೀ। ಪೇಱುವೆನು ಬೇಸಗೆಯ ಬಿಸಿಲ ಪೂದೊಂಬೆ ॥ ೩

॥ ರಾಗ—ಕನ್ನಡಗೌಳ ॥ †

ಕಂದ॥ ಕಾವಲೆಯುಗಳ್ಕೆಗಾಱಿನಿ |
ಯಾದಂ ಮೆಯ್ಮಱೆದು ನೆನೆವ ನುಡಿಯೊಡರಿಸುವುವು ‖
ನ್ಮಾದವಿಕಾರಂಗಳಿನಾ |
ದೂದವಿ ಗೋವಳನ ಕಿವಿಗೆ ಸವಿನೋಱಿಸಿದಳ್ ‖ ೩೬

ನಿನ್ನವಳ ಮೆಲ್ಲೆರ್ದೆ*ಯ ನೆಲೆಯ ನೀನೆ ಬಲ್ಲೆ।
ಚೆನ್ನಗೋವಳರಾಯ ಚಿಂತೆಗಳವಡದೆಮಗೆ ॥ ಪಲ್ಲವಿ ॥

ಚ ॥ ಮರುಳುಗೊಂಡಂತಿಹಳು ಮಱವಟ್ಟು ಮೆಯ್ಮಱೆದು ।
ಕರಕರೆಯೊಳೊಂದುವಳು ಕಾತರಿಪಳು ।
ಪರಿಪರಿಯ ನೆನಹುಗಳ ಪಸರಗೊಂಬಳು ಸುಯ್ದು ।
ಬಸವೞಿದು ಬಾಯ್ವಿಟ್ಟು ಪಲಪ ಪಂಬಲಿಸುವಳು ॥ ೧

ಎಡೆವಿಡದೆ ಜಾನಿಸುವಳಿದೆ ಬಂದನೆರೆಯನೆಂ ।
ದೊಡನೆಗ್ದು ಮುಂಬರಿವಳೋಸರಿಪಳು ॥
ಮಡಮುರಿದು ನೋಡಿ ನುಯ್ಮಱಸದಿರು ಮನದನ್ನ ।
ತಡೆ ನಿಲ್ಲು ನಿಲ್ಲೆಂದು ತವಕದಿಂದೊದಗುವಳು ॥ ೨

---

† ನೀಲಾಂಬರಿ ಎಂದು ಒಂದು ಪ್ರತಿಯಲ್ಲಿದೆ.

ಬಯಲ ತಕ್ಕೈಸುವಳು ಬಾಯ್ದೂಗ್ಟಕೆಳಸುವಳು।
ದಯೆಗೆಯ್ದು ಸಲಹೆಂದು ತಲ್ಲಣಿಪಳು।
ನಯಸರವ ತೋಱುವಳು ನಲವೇಱಿಯಾನಂದ।
ಮಯುವೆನಿಸುವಳು ನಿನ್ನ ಮಾಯೆಯೆಂತುಟೊ ಕೃಷ್ಣ॥ ೩ —೩—

॥ ರಾಗ—ಕಾಂಬೋಧಿ ॥

ಕಂದ॥ ಬಂದೊಂದುಂ ದಿವ್ಯಾಂಗದ।
ಸೌಂದರ್ಯಂ ಬಗೆಗೆ ಬಂದು ಪರಿವಿಡಿಯಿಂದಂ॥
ನಿಂದಿರೆ ತೋಱಲ್ವ ಕಾಮಿನಿ।
ಯೆಂದವನಿಂತಚ್ಯುತಂಗೆ ಸಖಿ ಸೊಲ್ಲಿಸಿದಳ್॥ ೩೭

ಕಳವಳಿಪಳಿಂತೆಮ್ಮ ಕಣ್ಗಿಡಿಪಳು।
ಕೊಳಲ ಗೋವಳ ನಿನ್ನ ಗುಣಗಳನೆ ಗುಣಿಸುವಳು॥ ಪಲ್ಲವಿ॥

ಚ॥ ಒಳೆವ ಸಿರಿಮೊಗದೋಱಿಯುಚಿತವೆಂದೊದರುವಳು।
ನಲಿನಲಿವ ಪುರ್ವೆಂದು ಸೈಗರೆವಳು।
ಅಲೆವಡುವ ನೋಟದೊಂದಂದವೆಂದಱಲುವಳು।
ಉಲಿವ ಬೊಂಗೊಳಲ ಮೆಲ್ಲುಲಿಯೆಂದು ಗಳಪುವಳು॥ ೧

ಪಲತೆಱದಿ ತೊಸೆವ ಕಿವಿವಣ್ಣಪೆಂದೊರಲುವಳು।
ಕಳೆವೆತ್ತ ಕದಪೆಂದು ಕನವರಿಪಳು॥
ನಲವೀವ ಚಕ್ರದುನ್ನತಿಯೆಂದು ನಮಿಸುವಳು।
ಬಲಮುರಿಯ ಸಂಕೆಂದು ಬಸವಳಿದು ಪಲುಬುವಳು॥ ೨

ಮುರಿವಡೆದ ಭುಜದ ಕಡುಮುದ್ದೆಂದು ಪೊಳಗುವಳು।
ತಿರುಹಿದೊಳ್ನಡುವೆಂದು ದೆಸೆಗಿಡುವಳು।
ಬೆರಲೂಱಿ ನಿಂದಡಿಯ ಬೆಡಗೆಂದು ಬೆಚ್ಚುವಳು।
ಸರಿಸದೊಳ್ಳಡಿಯೆಂದು ಸಂತಸದೊಳೆಱಗುವಳು॥ ೩ —೪—

॥ ರಾಗ—ಘಂಟಾರವ ॥

ಕಂದ॥ ಓರಂತುರಿ ಮಸಗುವ ವಿರ।
ಹಾರಭಟೆಗೆ ಹದುಗಿ ಹರಣದಱಿವಂ ನೆಲೆಗೆ॥
ಯ್ಯಾರವಣಿ ನುಡಿದ ನುಡಿಗಳ।
ದಾರಿಯನಿಂತೆಂದು ಹರಿಗೆ ಸಖಿ ಸೊಲ್ಲಿಸಿದಳ್॥ ೩೮

ಚೆನ್ನೆಯಾಡುವಳಿದನು ಚಿತ್ತವಿಪುದು।
ಇನ್ನವಳ ಮನದಿರವನೆಂತು ಬಿತ್ತರಿಸುವೆನು॥ ಪಲ್ಲವಿ॥

ಚ ॥ ಗಿಳಿವಱಿಗೆ ನೀನೆ ಪಾಲ್ಗೆನೆಯೂಡಿ ಬಳಯಿಸೆಂ ।
ದೆಳೆಯಂಚೆ ನಿನ್ನ ಕೆಯ್ಯೆಡೆಯಿದೆಂದು ।
ಕಳವಳಿಸಿ ಕಾತರಿಸಿ ಗಾಱುಗೆಡಲೇಕಿನ್ನು ।
ಕೆಳದಿಯೆಚ್ಚಱದೊಳಿರು ಕೆಲಕೆ ತೊಲಗದಿರೆಂದು ॥ ೧
ಭಾವಚಿತ್ರದ ಪಟವ ಭಕ್ತಿಯೊಳೆ ಪೂಜಿಸೆಂ ।
ದೀವಕುಳಸರವಿನಿಯುಗೀವುದೆಂದು ॥
ಈವಿಧದಿ ಮರುಳೆ ನೀನೇಕೆ ಮಱುಗುವೆ ಸಾಕು ।
ಈವೇಳೆಗೇನು ಹಿತವೆಂದು ತಿಳಿದೆಸಗೆಂದು ॥ ೨
ಅವನ ಪೆಸರಕ್ಕರವನನುಗೊಳಿಸು ಕಿವಿಯೊಳೆಂ ।
ದವನ ಪಾವುಗೆಯ ಮುಡಿಗಮರಿಸೆಂದು ॥
ಅವಿವೇಕಿ ಬಱಿದೆ ನೀನಳಲೇಕೆ ಸಾಕಿನ್ನು ।
ಎವೆಯಲುಗದಂತೆ ಕೊರ್ಕಿನ್ನ ನೋಡುತಿರೆಂದು ॥ ೩ —೫—

॥ ರಾಗ—ಘಂಟಾರವ ॥

ಕಂದ॥ ಅಱಿನಱತುಸಿರೆಡೆಯಾಟಂ ।
ಬಱತೊಱಗಿದ ಬಾಲೆಯಿರವನಾರಯ್ದು ಕರಂ ॥
ಮಱುಗುವ ಕೆಳದಿಯರೆಸಕಮ ।
ನಱಿಪಿದಳಾದೂತಿ ತವಕದಿಂ ಗೋವಳನೊಳ್ ॥ ೩೯

ಏನಿದೆತ್ತಣ ಬಿನದವೇಟು ನಡೆನಡೆ ಬೇಗ ।
ಮಾನಿನಿಯು ನೆಲೆಗೆನ್ನ ಮನಸು ಚಂಚಲಿಸುತಿದೆ ॥ ಪಲ್ಲವಿ ॥

ಚ ॥ ಬಾವನ್ನದಣ್ಪೆಲ್ಲಿ ಪನ್ನೀರ್ಗಳೆಲ್ಲಿ ಪೊಸ ।
ದಾವರೆಗಳೆಲ್ಲೆಂದು ತವಕದಿಂದ ।
ಗಾವಳಿಸಿ ಕೆಳದಿಯರು ಕಳವಳಿಸುತಿರೆ ಕಂಡು ।
ದೇವರಡಿಯೆಡೆಗೆ ಕಡುದೀವರದೊಳೆಯ್ದಿದೆನು ॥ ೧
ಅಸಿಯೊಡಲ ಬಿಸುಪ ತಿಳಿಯೊಸರ್ವ ಕಣ್ಣೀರ ನೋ ।
ಡುಸಿರನಾರಯ್ಯೆನುತ್ತೋಜೆಗುಂದಿ ।
ಬಸವಳಿದು ಕೆಳದಿಯರು ಪಂಬಲಿಸುತಿರೆ ಕಂಡು ।
ಉಸಿರಲೆಂದೀಯೆಡೆಗೆಯುಱುಬಿನಿಂದೆಯ್ದಿದೆನು ॥ ೨
ಪಂತ ಸಂದುಪೆ ಮದನ ಪಾಡು ತಿರುಗಿತೆ ಚಂದ್ರ ।
ಸಂತಸವೆ ಇಂದಿಗೆ ವಸಂತನೆಂದು ॥
ತಿಂತಿಣಿಸಿ ಕೆಳದಿಯರು ದಿಗಿಲುವಡುತಿರೆ ಕಂಡು ।
ಸಂತಾಪದಿಂ ನಿನ್ನ ಸನ್ನಿಧಿಯನೆಯ್ದಿದೆನು ॥ ೩ —೬—

॥ ರಾಗ—ಮೋಹನ ॥

ಕಂದ॥ ದಾದಿಯರುಂ ಕೆಳದಿಯರುಂ ।
ದೂದವಿಯರುಮಿನಿಸಿಯುಳುಳುಹಿನೊಳ್ ಕೆಯ್ದಗೆವಂ ॥
ತಾಮದು ನೀನಿನ್ನೊರ್ವನೆ ।
ಕಾಮುಱುಪ್ರುಪ್ರನೆಂದು ಕೆಳದಿ ಶೌರಿಯೊಳುಸಿರ್ದಳ್ ॥ ೪೦

ನಲ್ಲಳಿಗೆ ನಲವಿಂದಿಗೆ । ಅ । ಲ್ಲಲ್ಲಿ ವಿರಹಾಯಾಸ ಹರಿವಡೆಯುಲಿಂತು ॥ ಪ ॥

ಚ ॥ ಬಳಸಿರುವ ಬಾಂಧವರ ಬಳಗದೊಳು ಬಸವಳಿಕೆ ।
ತಳಿರುವಾಸಿನೊಳು ಪರಿತಾಪದೊಂದೆಸಕ ।
ಬಳಿಗೆಳದಿಯರೊಳು ಬಿಡದೊಗುವ ಕಣ್ಣೀರ್ವೊನಲು ।
ತಿಳಿದು ನಿರವಿಸುವರೊಳು ದಿಗಿಲು ನೆಲೆವಡೆಯೆ ॥ ೧

ನೆರೆದು ನಿಟ್ಟಿಸುವರೊಳು ನಿಟ್ಟುಸಿರ ಕಾಲಾಟ ।
ನೆರೆಹೊರೆಯು ಪೆಣ್ಗಳೊಳು ನಿಚ್ಚಲೆರ್ದೆಗಿಚ್ಚು ।
ಪೊರೆವ ದಾದಿಯರೊಳುಱಿ ಪೊಣ್ಮಿ ಬಹ ಮೆಯ್ಮಱೆವು ॥
ಪರಿಜನದ ನೆರವಿಯೊಳು ಬವಣಿ ಬೇರ್ವರಿಯೆ ॥ ೨

ಎನ್ನ ಮಂದಿಗರೆಡೆಯೊಳೀವಗೆಯ ಪಂಬಲಿಕೆ ।
ಮನ್ನಣೆಯ ಸಖಿಯರೊಳು ಮಱುಕದೊಂದುಬ್ಬು ॥
ಚೆನ್ನ ಚಿಕದೇವರಾಜೇಂದ್ರವಲ್ಲಭ ಕೃಷ್ಣ ।
ನಿನ್ನ ಕೆಯ್ಯೊಳು ಹರಣ ನೆಲೆವಡೆಯುಲಿಂತು ॥ ೩ — ೭ —

ವಿರಹೋದ್ರೇಕ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — V

॥ ರಾಗ — ಕಾಂಬೋಧಿ ॥

ಕಡೆಗಣ್ಣೊಳ್ ಸಿರಿ ನಿಲ್ಕೆ ತೋರ್ಕೆಗೆಱೆಯಂತಂಗೆಯ್ಯೊಳಾಚಕ್ರಮುಂ।
ಕಡುಸೊಂಪಿಂ ಚಿಕದೇವ ಕಂಬುಕೊರಲೊಳ್ ಬಿಲ್ ಪುರ್ಬಿನೊಳ್ ತೋ
ರ್ಕೆಯಿಂ ॥ ಪಡೆಗಾಕಾರಮುಮಕ್ಕೆ ಮಾನುಷಮುಮಿನ್ನೆಂತೆಂತು ನೀಂ
ಮಾಂಜೆಯುಂ । ನುಡಿಗುಂ ಸತ್ಯಪರಾಕ್ರಮತ್ವದೆ ಪೊದಱ್ದ ವಿಷ್ಣುವೆಂದೀ
ಜಗಂ ॥ ೪೧

ಆಡುವ ಪಾಂಸುಕೇಳಿಯೊಳೆ ಸಲ್ವ ತೊವಲ್ನುಡಿಯುಂ ತೊದಳ್ದ ಮಾ |
ತಾಡುವ ಪಾಂಗಿನಂತೆಸೆವ ಬೀರಮುಮೊಂದಱನೊಂದು ನಾಡೆಯುಂ ॥
ರೂಡಿಸಿ ಸದ್ಗುಣಂಗಳನಿತುಳ್ಳೊಡವೀಚಿಕದೇವರಾಯನೊಳ್ |
ನಾಡುಗರಾಡುವಂದು ಬಿರುದಾದುದು ಸತ್ಯಪರಾಕ್ರಮಾಹ್ವಯಂ ॥ ೪೦

ವಚನ ॥ ಈಱವನೆಯ ಸಪ್ತಪದಿಯೊಳ್ ಅನ್ಯಾಸಕ್ತನಾಗಿರ್ದು ಬಂದ ಶ್ರೀಕೃಷ್ಣನಂ ಕಂಡು ಪ್ರಣಯಕೋಪದಿಂ ನುಡಿವ ಗೋಪಸ್ತ್ರೀಯರ ವಚನದ ನೆವದಿಂದವನ ಗುಣಂಗಳಂ ಪೊಗಳ್ವರ್.

ರಾಗ ॥ ಕೇತಾರಗೌಳ ॥

ಶ್ರೀಲಾವಣ್ಯವಿಲಾಸಯೌವನಕಲೋದಾರಂ ವಿಶೋವಕ್ರಿಯಾ |
ಲೋಲಂ ಗೋವಳಗನ್ನೆಯೊರ್ವಳಸಮಂವಾಸಂವದಿಂದೋವಿ ತ ॥
ತ್ಕಾಲೋದ್ವೃತ್ತಪುಳಕಾಶ್ರುಗದ್ಗದರವಸ್ವೇದಾದಿಯಂ ತಾಳ್ದ ಗೋ |
ಪಾಲಂ ಕೂರ್ತೊಲವಿಂ ಕಲಾವತಿಯ ಲೀಲಾಕರಮಂ ಪೊರ್ದಿದಂ ॥ ೪೧

॥ ಅಟ್ಟತಾಳ ॥

ಕಂದ ॥ ಗೋಪಾಲನ ಪೊನರುಗುವಾ |
ರೂಪದೊಳಾದ್ರ್ಯಪರಾಧಮೋಜೆಗಳಂ ಕಂ ॥
ಡೋಪಳ್ ಕೋಪಂ ಕೊನರಿಡೆ |
ಯೀಪರಿಯಿಂ ಕೊಂಕುನುಡಿಗಳಂ ಕೊನರಿಸಿವಳ್ ॥ ೪೨

ಕೊನೆಸಾಗದಿಲ್ಲಿಗೀಮಾಯ । ಗೋಪಾಲರಾಯ ॥ ಪಲ್ಲವಿ ॥
ಚ ॥ ಅನುವ ಪೇಳುವವ್ರೋಲೆನ್ನನಚಲಿಸದಿರು ನಿನ್ನ ।
ಮನಗಱಗಿಸಿ ಮಿಗೆ ಮಚ್ಚಿಪಳೆಡೆಗೆ ನಡೆ ॥ ೧
ಹನಸವಾತಿಗೆ ನಾನು ಹರವಸಗೊಂಬಳಲ್ಲ ।
ಬನ್ನಣೆಗೆಯ್ದು ಒಱಿದೆ ಬಣ್ಣಿಗೆವಡಿಸದಿರು ॥ ೨
ಮುಚ್ಚುಮಱೆ ನಾನಿನ್ನ ಮೊಗಕೆ ನೋಂತವಳಲ್ಲ ।
ಇಚ್ಛೆಕವಾಡದಿರಡಿಗೆಱಗುವೆ ಚಿತ್ತವಿಸು ॥ ೩ ॥ —೧—

॥ ರಾಗ—ಹುಶಾನಿ ॥

ಕಂದ ॥ ನಗೆಮೊಗ ನವಿನುಡಿ ಸಿರಿಮೆ |
ಯ್ಯೊಗಸುಗಳಂ ಮೋಸಗೊಳಿಪ ಗೋಪಾಲನ ಪು ॥

ಯ್ವಾಗೆಯುಂ ಬಯಲೆನಿಸುತೆ ಪಡಿ |
ಮೊಗದೊಳ್ ಮೂದಲೆಯ ಮುಂದುಗೆಯ್ದಳ್ ಮತ್ತಂ ॥ ೩೫

ನೀತವೆ। ಇದು ನೀತವೆ। ನಿನ್ನ ನಡೆ ಬೇಱೆ ನುಡಿ ಬೇಱೆ ನೆನಹು ಬೇಱೆಲೆ ಕೃಷ್ಣ ॥ ಪಲ್ಲವಿ ॥

ಚ ॥ ಮೊಗಸಿರಿಯು ನಿಟ್ಟಿಸೆ ಮುದ್ದುಮುದ್ದಾಗಿದೆ।
ಬಗೆಯು ಭಾವಿಸಲಿಂತು ಪಾಸಱೆಗಲ್ಲೆನಿಸಿದೆ ॥ ೧ ॥

ಸವಿಮಾತುಗಳ ಕೇಳೆ ಸೈರೆನಿಸುತಲಿದೆ।
ಕವಕೋಡುಗಳ ನೋಡೆ ಕತ್ತಲೆ ಕವಿಯುತಿದೆ ॥ ೨ ॥

ರೂಪುರೇಖೆಗಳ ನೋಡೆ ರೋಮಾಂಚವಾಗುತಲಿದೆ।
ಗೋಪಾಲ ನಿನ್ನೊಲವೆನ್ನ ಕೋಟಲೆಗೊಳಿಸುತಿದೆ ॥ ೩ ॥

—೨—

ರಾಗ ॥ ಕಾಂಬೋಧಿ ॥

ಕಂದ ॥ ನೆನಪುಂ ನುಡಿಯುಂ ನಡತೆಯು |
ಮನಿತನಿತುಂ ಬೇಱ್‌ಬೇಱ್ ಪಲ್ಲಟವಾಗಿ ॥
ಪಿಸುನಮಾಗೋವಳರೆಱೆಯನ |
ಮೊನೆಮಾತಿನೊಳಂತು ಜಡಿದು ನುಡಿದಳ್ ಮತ್ತಂ ॥ ೩೬

ನುಡಿವ ನೂತನ ಬೇಱೆ ನಡೆವ ನಟನೆ ಬೇಱೆ।
ಬಿಡದೆ ಮನದೊಳಿಹ ಬಿನ್ನಣ ಬೇಱೆ।
ನಡೆ ನಡೆ ನಡೆ ನಿನ್ನ ನಾಲಗೆಗಾನುತ್ತರ।
ಗುಡಲಾಱೆನು ದಮ್ಮಯ್ಯ ಗೋಪಾಲರಾಯ ॥ ೧ ॥

ಬೇಟವೊರ್ವಳಲ್ಲಿ ಪುರ್ಬಿನಾಟವೊರ್ವಳಲ್ಲಿ। ಸನ್ನೆ।
ನೋಟವೊರ್ವಳಲ್ಲಿ ಒಱಬೂಟಕವಿಲ್ಲಿ।
ತಾಟೊಟುತಗರುಬೊಗರುಟಕ್ಕುಟೊಳಿಯೆಸಗುವ।
ಕೋಟಲೆ ಸಾಕು ದಮ್ಮಯ್ಯ ಗೋಪಾಲರಾಯ ॥ ೨ ॥

ಅಪರಿಮಿತಮಹಿಮ ಅಖಿಲಾಂತರಾತ್ಮ ನಿನ್ನ।
ಕಪಟನಾಟಕದೊಳು ಕಡೆಗಾಣ್ಬರಾರು।
ಅಪಚಾರ ಬರ್ಪುದಿನ್ನು ಅಂತಿಂದೆಂದು ನುಡಿದೊಡೆ।
ಗುಪಿತದಿಂದಿರು ದಮ್ಮಯ್ಯ ಗೋಪಾಲರಾಯ ॥ ೩ ॥

—೩—

ರಾಗ ॥ ಕಾಪಿ ॥

ಕಂದ ॥ ಕೈತವನೊಳ್ ಕಡುನೈಸ್ಯದ |
ಮಾತುಗಳಿಂದಾಱಿಸಱಿಯೆನೆಂದುಸಿರ್ವ* ಮುರಾ ॥
ರಾತಿಯು ನೀತಿಯು ರೀತಿಯು |
ನೀತೆಱನೊಳ್ ಬಿರ್ಕ ಬಿನ್ನವಿಸಿದಳ್ ಮತ್ತಂ ॥ ೪೨

ಬಡವನೆ ನೀನು ಏನೇನೇನು ಬಡವನೆ ನೀನು ।
ಈ ಪುಸಿಗೊಡಬಡುವೆನೆ ನಾನು ॥ ಪಲ್ಲವಿ ॥

ಚ ॥ ಬಡವನೆನಿಸಿ ತೋಱಿ ಬಲ್ಲಿದನಾಗಿ ನಿಂ ।
ದಡಿಯುಲ್ಲಿ ಲೋಕವೆಲ್ಲವನಾಕ್ರಮಿಸುವೆ ॥ ೧ ॥

ಮುಗುದನೆ ನೀನು ಏನೇನೇನು ಮುಗುದನೆ ನೀನು ।
ಸಾಜವೆಂದು ಬಗೆವೆನೆ ನಾನು ॥ ಪಲ್ಲವಿ ॥

ಚ ॥ ಮುಗುದನೆನಿಸಿ ತೋಱಿ ಮೋಸಗೊಳಿಸಿ ಮೂ ।
ಜಗವನಡಸಿ ನುಂಗಿ ಚೆಲ್ಲಾಟವಾಡುವೆ ॥ ೨ ॥

ಸುಲಭನೆ ನೀನು ಏನೇನೇನು ಸುಲಭನೆ ನೀನು ।
ಇದಕೆ ಮನವೊಲಿವೆನೆ ನಾನು ॥ ಪಲ್ಲವಿ ॥

ಚ ॥ ಸುಲಭನೆನಿಸಿ ತೋಱಿ ಸೊಬಗುಗೋವಳನಾಗಿ ।
ಹಲವುಮಾಯೆಗಳನು ಹರಹಿ ಮೆಯ್ಮಱಿಸುವೆ ॥ ೩ ॥ —೪—

॥ ರಾಗ—ಕಾಂಬೋಧಿ ॥

ಕಂದ ॥ ಒತನೊಡನುಪಚಾರಂಗಳ |
ನೊಡರಿಸುತೊಳ್ಪಾತನಾಡುತೊಡಬಡಿಸುವ ಮೆ ॥
ಲ್ಲಡಿಗೆಱಗುವ ಗೋವಳನಂ |
ನುಡಿದಳ್ ಮೆಳ್ಪಿಡಿದ ಕೊಂಕುನುಡಿಯೊಳ್ ಮತ್ತಂ ॥ ೪೩

ಗುಟ್ಟನೊಡನಿರು ಗೋಪಾಲ । ಸಾಕುಸಾಕಿನ್ನು (ಗುಟ್ಟನೊಡನಿರು ಗೋಪಾಲ) ॥ ಪಲ್ಲವಿ ॥

ಚ ॥ ಒಂದು ಕಣ್ಣದಿಂದಲೆ ನೀನೊಂದೆಡೆಯೊಳಿರ್ಪೆಯದ ।
ಱಿಂದ ಬಂದ ತಪ್ಪಾವುದೀಸಂದೇಹವೇಕೆ ಬಱಿದೆ ॥ ೧ ॥
ಆನು ನೀನೆಂಬ ಭೇದವನಱಿಯದಿರುವೆನ್ನೊಳು ।
ನೀನುಪಚರಿಪುದಿದು ನೀತವೆನಿಸ್ಸಿ ತೋಱಿದು ॥ ೨ ॥

ಏನೆನಿದೆತ್ತಣ ಪಾಪವೇತಕಡಿಗೆಱಗುವೆ ।
ಗೋವಳರರಸ ನಿನ್ನ ಕೂಡೆ ಪೋಱಲಱಿಯೆನು ॥ ೩ ॥ —೫—

ರಾಗ ॥ ಮುಖಾರಿ ॥

ಕಂದ ॥ ಮಿಱುಗುವ ಮೆಯ್ಸಿರಿಗಮರ್ದಾ* ।
ಕುಱುಪುಗಳಂ ಮಾಂಜಿಮಾಂಜಿ ಮಾಯೆಗಳಿಂದಂ ॥
ಮಱೆಮಱೆಯಿಸ ಗೋಪಾಲಕ ।
ರೆಱೆಯನೊಳಿಂಗನ್ನವಾತನುಸಿರ್ವ*ಳ್ ಮತ್ತಂ ॥ ೪೮

ನಿನ್ನ ಮೋಹದವಳೇ ನಾನು । ಗೋಪಾಲ ಕೇಳು ॥ ಪಲ್ಲವಿ ॥
ಚ॥ ಮಾಜಲೇಕೆ । ಯೆನಗೆ ಮಱೆಮಾಜಲೇಕೆ ।
ಬಾಜಿಸೆ ಕೊಳಲು ತಾಕಿತೆ ಬಣ್ಣದುಟಿಯು ॥
ಓಜೆಯುಚಿತವಾಗಿದೆ । ಯೆನ್ನಾಣೆ ಕೇಳೋಜೆಯುಚಿತವಾಗಿದೆ ।
ಸೋಜಿಗಗೊಂಡು । ಸೊಕ್ಕದೆ ಸೊರಗದೆ ಸೊಲ್ಲಿಸೆನ್ನೊಡನೆ ॥ ೧ ॥

ಆಡಲೇಕೆ । ಯಿನಿತು ಪುಸಿಯಾಡಲೇಕೆ ।
ಬಾಡಿದೆ ಮೆಯ್ಸಿರಿ ಪಸುಗಳಟ್ಟಳಿಯೆ ॥
ಈಡುಜೋಡಿಲ್ಲದಕೆ । ಯೆನ್ನಾಣೆ ಕೇಳೀಡುಜೋಡಿಲ್ಲದಕೆ ।
ಬೇಡವೀಮಾಯು । ಬೆಚ್ಚದೆ ಬೆದಱದೆ ಪೇೞುನೆನ್ನೊಡನೆ ॥ ೨ ॥

ಮಾಯವೇಕೆ । ಯೆನ್ನೊಳು ಛಾಯಮಾಯವೇಕೆ ।
ಕಾಯದೊಳೇನು ಕಾನನದ ಮುಳ್ಮೊನೆಯೆ ॥
ಈಯಿರವಿಂಪಾಗಿದೆ । ಯೆನ್ನಾಣೆ ಕೇಳೀಯಿರವಿಂಪಾಗಿದೆ ।
ಆಯಿತಾಯಿತಂಜದೆಯಳುಕದೆಯುಱುಹುಯೆನ್ನೊಡನೆ ॥ ೩ ॥ —೬—

ರಾಗ ॥ (ಇಂದು) ಘಂಟಾರವ ॥

ಕಂ ॥ ಮನದಿನಿಯನನುನಯೋಕ್ತಿಯೊ ।
ಳೆನಿಸಿನಿಸುಂ ಮುನಿಸು ತಣ್ಪುಗೊಂಡಿಱೆತರೆ ಮಾ ॥
ನಿನಿ ಬಗೆಗಱುಗುತೆ ಗೋಪಾ ।
ಲನ ಪಲವುಂ ಜಾಣ್ಮೆವಲೆಗೆ ಸಿಲ್ಕಿದಳೊಲವಿಂ ॥ ೫೦

ಎನ್ನನೊಡಂಬಡಿಸಲೇಕೆ ನಿನ್ನವಳು ನಾ ॥ ಪಲ್ಲವಿ ॥
ಚ॥ ಎನ್ನ ಮುನ್ನ ಭಾಗ್ಯಫಲವೆನ್ನ ಬೆನ್ನಬಿಡದಿರೆ ।
ನಿನ್ನೊಳು ತಪ್ಪೆಣಿಪುದು ನೀತವೆನಿಸಿರದು ॥ ೧ ॥

ಅಂದಿನ ಕಾಲದೊಳು ನಾವಂತು ಸಂತಸದೊಳಿರ್ದೆ ।
ಇಂದಿನ ಕಾಲದ ಗುಣವಿಂತು ಬಂದುದೆಮಗೆ ॥ ೨ ॥

ಚಿಕ್ಕದೇವೇಂದ್ರವರದ ಚೆನ್ನಿಗ ಗೋಪಾಲರಾಯ ।
ಮಿಕ್ಕ ಮಾತೇನು ನಿನ್ನ ವಿಮುಖವಳಲ್ಲವೆಂದಿಗು ॥ ೩ ॥ —೭—

ಪ್ರಣಯಕಲಹ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — VI

ದಟ್ಟಡಿಗೊಳ್ವಿನಂ ಪಗೆವರೊಳ್ನಲವಂ ಮಿಗೆ ಕೊಂಡು ಕಂದುಕಂ ।
ಗುಟ್ಟಿದ ಮುನ್ನೆ ಬಲ್ವಗೆಗಳಂ ತಲೆಗುಟ್ಟಿ ಸಮಂತು ದಟ್ಟಿಯಂ ॥
ಕಟ್ಟಿದ ಮುನ್ನಮೇ ಪರಿದು ಕಟ್ಟಿ ಪೊದಳ್ದರಿದುರ್ಗವರ್ಗಮಂ ।
ನೆಟ್ಟನೆ ಚಿಕ್ಕದೇವನೆಸೆದಂ ಸಲೆ ಸತ್ಯಪರಾಕ್ರಮಾಂಕದಿಂ ॥ ೫೧

ಗಂಡರಗಂಡನುರ್ಕುವರಮಕ್ಕಳ ಗಂಡನಿದಿರ್ಚೆ ಕೈಮುಕ್ಕೈ ।
ಕೊಂಡರ ಗಂಡನಾಡಿನುಡಿವಪ್ಪುವ ರಾಯರ ಗಂಡನಾಹವೋ ॥
ದ್ದಂಡರ ಗಂಡನೆಂಬ ಪಲವುಂ ಬಿರುದುಂ ಚಿಕದೇವರಾಯನೊಳ್ ।
ಮಂಡಿತಮಾಳ್ತೆ ಮೊತ್ತಮೊದಲೊಂದಿಪ ಸತ್ಯಪರಾಕ್ರಮಾಂಕದಿಂ ॥ ೫೨

ವಚನ ॥ ಈ ಬಳಿಯ ಸಪ್ತಪದಿಯೊಳ್ ಶ್ರೀಕೃಷ್ಣನೊಳ್ ಬೆರಸಿ
ದೆಳವೆಣ್ಗಳ್ ತಂತಮ್ಮ ವೃತ್ತಾಂತಮಂ ಕೆಳದಿಯರೊಳ್ ಪೇಳ್ವ ನುಡಿಗಳ
ನೆವದಿಂದವನ ಗುಣಂಗಳಂ ನಿರವಿಸುವರ್.

ರಾಗ ॥ ಮುಖಾರಿ ॥

ಏಗೆಯ್ವೆನಮ್ಮ । ಏನಿದೆತ್ತಣ ಮಾಯವೆಂದರಿಯೆನೆ ।
ಏಗೆಯ್ವೆನಮ್ಮ । ನಾನೆಣಿಸಿ ಗುರುತುಗೆಯ್ದುದೆಲ್ಲಾ ನೀರೊಳು ಬರೆದಂತಾದು
ದಮ್ಮ ॥ ಪಲ್ಲವಿ ॥

ಚ ॥ ಇಂದು ನಲ್ಲನಿಲ್ಲಿಗೆಯ್ದಿದೊಡೆನ್ನ ಕಣ್ಗಳೆಳಸಿದಂತೆ ।
ಅಂದಚೆಂದಗಳನಾರಯ್ದು ನೋಡುವೆನೆಂದಿರ್ದೆನಮ್ಮ ॥
ಬಂದೊಳುಮೊಗವ ತೋರಿದ ಮುನ್ನಮೆ ಮುಂದೆ ನೆನೆದ ನೆನಹಿನೊಳ್ ।
ಗೊಂದಾದರು ತೋರದಾದುದು ಕೇಳಿನ್ನುಳಿದುದನೇನೆಂದುಸಿರುವೆನಮ್ಮ ॥೧॥

ಇಂದು ನಲ್ಲನಾಡುವ ನುಡಿಗೊಳೊಂದನುೞಿಯದಾಲಿಸಿಯುೞುವ ।
ಗುಂದದದಕೆ ಬದಲುನುಡಿವೆನೆಂದಿರ್ದೆನಮ್ಮ ॥
ಬಂದೊಳುದನಿಯ ತೋಱದ ಮುನ್ನಮೆ ಪಲವು ನೆನಹನೆಲ್ಲ ಮಱೆತು ।
ಬೆಂದ ನಾಲಗೆ ಮುದುಡುಗೊಂಡ ಬಗೆಯನಾನೆಂತು ಪೇೞುವೆನಮ್ಮ ॥ ೨ ॥

ಇಂದು ಚೆಲುವಗೋಪಾಲರಾಯನೆನ್ನೊಳೊಲಿದು ಲಾಲಿಸುವೆಸಕ ।
ಕೊಂದಕೊಂದ ಬದಲುಗೆಯ್ವೆನೆಂದಿರ್ದೆನಮ್ಮ ॥
ಬಂದು ಕೆಯ್ಯ ಪಿಡಿಯದ ಮುನ್ನಮೆ ಬಲಿತ ಮನದ ಬಿಗುಹು ಸಡಿಲಿ ।
ಮುಂದುದೋಱದೆ ಮೋಸಗೊಳಿಪ ಮೋಹಕಿನ್ನಾರಿಗೆ ಮೊರೆಗೆಯ್ವೆನಮ್ಮ ॥

—೧—

॥ ರಾಗ—ಕಾಂಬೋಧಿ ॥

ಮೋಹವೀಪರಿಯೊಳೆನ್ನ ಮುಂದುಗೆಡಿಸುತ್ತಿದೆ ।
ಊಹದನಱಿಯೆನಾನೆಲ್ಲರಂತಿರ್ದೆನಮ್ಮ ॥ ಪಲ್ಲವಿ ॥

ಚ ॥ ಬರವ ಕೇಳಿದೊಡನೆಯೆಂದಿನಿರವಿನೊಳಿರಲೀಸದು ।
ಭರದೊಳಿದಿರುಗೊಂಡು ಪಾದಪದ್ಮಕೆಱಗಲೀಸದು ॥
ಗರುವರೆಱೆಯನೊತ್ತಿಗೆ ಸಾಜಗತಿಯೊಳೆಯ್ದಲೀಸದು ।
ಬಱಿದೆಯುವನ ಬೞಿಯ ನಿಂದು ಪದುಳವಡೆಯಲೀಸದು ॥ ೧ ॥

ಎಱಕಗೊಂಬುದಲ್ಲದೆ ಮುಂದಣೆಸಕವೇಣಿಸಲೀಸದು ।
ಅಱಕೆಗೂಡಿಯೊಂದು ನುಡಿಯನವನೊಳಾಡಲೀಸದು ॥
ಅಱಿವುಮಱವೆಯುಲ್ಲದೆಣಿಸದಂತೆ ನಡೆಯಲೀಸದು ।
ಕಱಿತು ಮುದ್ದುಮೊಗವ ನೋಡಿ ಕಱುವುಗೊಳಿಸಲೀಸದು ॥ ೨ ॥

ಸುಗುಣನೆಸಗುವೆಸಕವಱಿತು ಸೊಗಸುವಡಿಸಲೀಸದು ।
ಬಗೆಯೊಳಿರ್ದಂತೆ ಕೊನಬುವಗೆಯ ಬಳಸಲೀಸದು ॥
ಬಿಗಿದ ತಕ್ಕೆ ಸಡಿಲಿ ಪೆಱತು ಬಿನದಗೆಯ್ಯಲೀಸದು ।
ಮೊಗದೊಳಿಟ್ಟ ಮೊಗವ ನೆಗಪಿ ಮುದ್ದುಮಾಡಲೀಸದು ॥ ೩ ॥ —೨—

॥ ರಾಗ—ಭೈರವಿ ॥

ಮನಸಿನ ದಾಱಿ ಬೇಱೆ । ಏಗೆಯ್ವೆನಮ್ಮ । ತನುವಿನ ದಾಱಿ ಬೇಱೆ ॥ ಪಲ್ಲವಿ ॥

ಚ ॥ ಅವನ ಬೞಿಗೆ ಸುೞಿಯಲಮ್ಮದಳವುಗುಂದಿಯಳುಕಿ ಬಳುಕಿ ।
ಬವಣಿಗೊಂಬ ಮೆಯ್ಯ ಸಜ್ಜು ಬಡಿಸಿದೆನಮ್ಮ ॥
ಅವನ ಪಡಿಮೊಗದಿ ನಿಲ್ಲಲಮರಿತೆಂಬುದಲ್ಲದೆ ।
ಛವಲಪಿಕೆಗೂಡಿಯುರ್ಬಿ ಲಳಿಮಸಗದೆಂತುಗೆಯ್ವೆ ॥ ೧ ॥

ಮತ್ತೆಮತ್ತೆ ಬೆರಲ್ಗಳಿಂದ ಮಱಸಿ ತುಟಿಯ ಮುರುಕಗೊಳು ।
ತತ್ತಲಿತ್ತ ಜೋಲ್ವ ಮೊಗವನಿದಿರುಗೆಯ್ವೆನಮ್ಮ ॥
ಮುತ್ತನಿಡುವಲ್ಲಿ ಕಣ್ಣ ಮುಚ್ಚಿ ಮೋಹಗೊಂಬುದಲ್ಲದೆ ।
ಯೊತ್ತಿ ಮೊಗದೊಳಿಟ್ಟ ಮೊಗವನೊಂದುವೆರಸದೆಂತುಗೆಯ್ವೆ ॥ ೨ ॥

ಬಿದಱ ಬೆಚ್ಚಿ ಬೆಮರುವಡೆದು ಹದುಗಿ ಹಮ್ಮೈಸುವ ಮೆಯ್ಯ ।
ಪದುಳಗೊಳಿಸಿಯೊಡಂಬಡಿಸಿದೆನಮ್ಮ ॥
ಸುದತಿ ಗೋಪಾಲನ ಮೆಯ್ಸೋಂಕಿತೆಂಬುದಲ್ಲದೆ ।
ಮದನಕದನದೆಸಕದಲ್ಲಿ ಮಟ್ಟವಿಱದೆಂತು ಗೆಯ್ವೆ ॥ ೩ ॥ —೩—

॥ ರಾಗೆ—ಕಲ್ಯಾಣಿ ॥

ಎಳಸಿದುದೆಲ್ಲವನೆಸಗುವ ಯುವತಿಯರೇಂ ಪುಣ್ಯವತಿಯರೊ । ಎಳಸಿದಂತೊಂದನು ಎಸಗಲೀಸದುಯೆನ್ನ । ನೀಯೊಡಲಿಗೆನ್ನೊಳೇಂ ಕೇಣವಮ್ಮ ॥ ಪಲ್ಲವಿ ॥

ಚ॥ ಪಾಸಿನೊಳಿರಲನುವಾದುದಲ್ಲದೆ ಮೆಯ್ಮೆಯ ।
ಪತ್ತಿಕುಳ್ಳಿರಲುಱೆ ಪದುಗುವುದಮ್ಮ ॥
ಕೈಸೋಂಕಿಗಮುರಿದುದಲ್ಲದೆಯುಗುರ್ಗೊನೆ ।
ಗೆಯ್ಮೆಗಳುಕಿ ನಡನಡುಗುವುದಮ್ಮ ॥ ೧ ॥

ಸುಗಿಯೆ ಮೇಲುದನೊಪ್ಪಗೊಂಡಿರ್ಪುದಲ್ಲದೆ ।
ಬಿಗಿದು ಪಿಡಿಯೆ ಮಿಗೆ ಬೆಚ್ಚುವುದಮ್ಮ ॥
ಮೊಗದೊಳು ಮೊಗವಿಡೆ ಸೈರಿಪುದಲ್ಲದೆ ।
ಮೊನೆವಲ್ಲ ಗಾಸಿಗೆ ಮುರಿಗೊಂಬುದಮ್ಮ ॥ ೨ ॥

ಉಡೆನೂಲ ಸಡಿಲಿಸೆ ತಾಳ್ದುದಲ್ಲದೆ ನಿಱ ।
ವಿಡಿದೀಱ ಹರಣ ಹಮ್ಮೈಸುವುದಮ್ಮ ॥
ಒಡಲು ಮಱೆತು ಮರವಟ್ಟುದಲ್ಲದೆ ಮೇಲೆ ।
ನಡೆದ ನಡತೆಯೊಂದನಱತುದಿಲ್ಲಮ್ಮ ॥ ೩ ॥ —೪—

॥ ರಾಗೆ—ಕುರಂಜಿ ॥

ಇನ್ನಿಯನ ಬಗೆಗಳನೆಣಿಸದ ಮುನ್ನ । ತನುಮನವೊಂದಾಗಿ ತಲ್ಲಣಿಸುತಿದೆ । ಮುನಿವುದೆತ್ತಣದಿನ್ನು ಮೋಡಿಯೆತ್ತಣದು । ಮನವ ಬೈತಿಟ್ಟು ಮಾರ್ಮಲೆವುದೆತ್ತಣದು । ಮೊನೆದೋರ್ಪುದೆತ್ತಣದು । ಮೂದಲೆಯೆತ್ತಣದು । ತೊನೆವುದೆತ್ತಣದಿನ್ನು ದೂರ್ಪುದೆತ್ತಣದು । ಅನುಮಾನವೆತ್ತಣದು । ಅಳವೆತ್ತಣದು । ಅನುವನಾರಯ್ವನೆಂಬಾಸೆಯೆತ್ತಣದು ॥ ಪಲ್ಲವಿ ॥

ಚ॥ ಇದೆ ಬಂದನರಸನೆಂಬೀನುಡಿಗೇಳಿ । ಬಿದಿಬೇಟದೊಳು ಮೆಯ್ ಪೆಂಪುಗೊಂಡುರ್ಬಿ । ಸೊದೆಯುಂಡವೊಲು ಗಾಳಿ ಸೋಂಕಿದವೊಲು । ಬೆದರುವಡೆದವೊಲು ಬೆರ್ಚಿದವೊಲು । ಮದವೇಱಿದವೊಲು ಮರುಳಾದವೊಲು । ಹದವೞಿದವೊಲು ಹರವಸಗೊಂಡವೊಲು । ಮದನಮಂತ್ರಾವೇಶ ಮಡಲಿಟ್ಟವೊಲು ಮುದದ । ಮುನ್ನೀರೊಳು ಮುೞುಗಿ ತೇಲುತಿದೆ ॥ ೧ ॥

ಒಱನುಡಿಯುಲೆನ್ನ ಪ್ರಾಣವಲ್ಲಭನ । ಕೞಿತು ನೋಡದ ಮುನ್ನ ಕೋೞಿಗಿತೆನ್ನೊಡಲು । ಮಱತೊಱಗಿದವೊಲು ಮರವಟ್ಟವೊಲು । ಬೞಗುವಡೆದವೊಲು ಬೆಗಡುಗೊಂಡವೊಲು । ಅಱಿವುಗುಂದಿದವೊಲು ಅಳವೞಿದವೊಲು ತಿಱಸಱಿಯದವೊಲು ಪೆಸೆಗೆಟ್ಟವೊಲು । ಪರಿವಡಸಿದವೊಲು ಪಾಡೞಿದವೊಲು । ತೊಱೆದನ್ಯಚಿಂತೆಯು ಸೊಕ್ಕೇಱುತಿದೆ ॥ ೨ ॥

ಎಱೆಯ ಚಿಕ್ಕದೇವೇಂದ್ರನೆನ್ನ ಲಾಲಿಸಿದ ಸೆರೆಸೊಗಸುಗಳೆನ್ನೆರ್ದೆವನೆಯೊಳು । ಸೆಱೆಸಿಕ್ಕಿದವೊಲು ಚಿತ್ರಿಸಿದವೊಲು । ಕರುವಿಟ್ಟೆಱೆದವೊಲು ಕಾಸಿ ಬೆಜ್ಜವೊಲು । ಸರಿಗೊಂಡವೊಲು ಸರಗೊಳಿಸಿದವೊಲು । ಕೊಱೆದು ಕೋದವೊಲೊಂದುಗೂಡಿದವೊಲು । ನಿಱಿಗೆವಡೆದವೊಲು ನೆಲಸಿತೆಂಬವೊಲು । ತಱಿಸಂದಾನಂದದ ತನ್ಮಯವಾಗುತಿದೆ ॥ ೩ ॥

—೫—

॥ ರಾಗ— ಶಂಕರಾಭರಣ ॥

ಇದಿ ನಾ ಸೋಮುಖಲಮೆಯಿಂತಿ । ಯಿಗನೇಮಂದುನೆ ಪದಿವೇಲ್ಸೈ ನಾನೇಸೆಂಚಿನ ಪಂತವಿೂಡೇರದಮ್ಮ ॥ ಪಲ್ಲವಿ ॥

ಚ॥ ಅದನರೊವಾನಿ ಮೋಮು ಜೂಚಿನಂತಟನೆ ।
ಯದಲೊ ನೆಲಕೊಂನ ದಿಟವೆಂದೊಪ್ಪೋಯನೆ ॥
ಚದರಕಮದಿಗಟ್ಟಿಜೇಶಿಟಂತಲೋನೆ ।
ಮುದಮುನಕನುಗಾವ ಮುಂದುಗ ವೋಸಬುಚ್ಚೆ ॥ ೧ ॥

ವೆಲದಿ ವಾನಿ ಪಲುಕುವಿನೇಟಂತಲೋನೆ ।
ಅಲುಕವೇಡಿಚೆಲ್ಲನಾರಿಭೋಯನೆ ॥
ಚಲಮುವಿಡವಕ ಸಾದಿಂಚಿಟಂಕಲೋನೆ ।
ಮೊಲಕನವ್ವುಲುಮುಂನುಗಾ ವೋಸಬುಚ್ಚೆ ॥ ೨ ॥

ಚಿಕ್ಕನಿಗೋಪಾಲುನಿಚಂತಜೇರೇಟಂತಲೋನೆ ।
ವೆಕ್ಕಸಮ್ಮೈಸವಿಗುವೆಂದೊಪ್ಪೋಯನೆ ॥
ಅಕ್ಕರದಾಚುಕಅರಮರಶೇಯಗ ।
ಅಕ್ಕರೋನೀವಿವದಲಿಯುವ್ವುಡೆ ವೋಸಬುಚ್ಚೆ ॥ ೩ ॥

—೬—

॥ ರಾಗ—ಮೋಹನ ॥

ಕೆಳದಿಯಿದೇನು ಮಾಯ । ಕೇಳಿನ್ನೇನುಪಾಯ । ಸುಳಿಯಲೊಡನೆ ಗೋ
ಪಾಲರಾಯ ಸೊಕ್ಕುಗೊಳಿಪುದೆನ್ನ ಕಾಯ ॥ ಪಲ್ಲವಿ ॥

ಚ ॥ ಮುರಿದೇಳ್ವುದು ನವಿರು । ಮೊಳೆವುದೊಡನೆ ಬೆಮರು ।
ತರಹರಿಪುದೊಯ್ಯನುಸಿರು । ತಳೆವುದೆಚ್ಚಱೆಂಬ ಪೆಸರು ॥ ೧
ಕದುಬುಗೊಂಬುದು ಕರಣ । ಕವಿವುದಂತಃಕರಣ ।
ಗದಗದಿಪುದು ಕರಚರಣ । ಕರಗಿ ಕಾತರಿಪುದು ಹರಣ ॥ ೨
ಬಳೆವುದೆರ್ದೆಯ ಗೆಲವು । ಬಲಿವುದೊಡನೆ ನಲವು ।
ಮುೞುಗಿ ತೇಲುತಿರ್ಪುದೊಲವು । ಮುಂದಣೆಸಕದೇಳಿಕೆ ಪಲವು ॥ ೩ -೭-

ರೂಪಕತಾಳ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — VII.

ಜಾಱಿಸಿ ಜಾಡ್ಯಮಂ ಜಡಕಮುರ್ಗಮನೆಬ್ಬಿಸೆ ಬಲ್ಸುರಂಗದಿಂ ।
ಪೊಱದ ಕೋಂಟೆಯೊಳಿಱಿವೀರಭಟರ್ಸರಿವಜ್ಜಾಂಡಮಂ ॥
ವಿಱಿವು...ರಲೆಂದು ದಿವದಿಂದೊಡವಾಯ್ದು ವಿಮಾನವಾಹಕರ್ ।
ದೂಱಿದರಂದು ನಿಂದ ಜನಲೋಕದೊಳಪ್ಪ್ರತಿಮಪ್ರತಾಪಮಂ ॥ ೫೩

ಕೆದರ್ದ ಕಪರ್ದದಿಂ ತಿಸುಳೆ ಮುಪ್ಪೊಱಲೆಂದು ಕನಲ್ದು ಪಾಯ್ವಿನಂ ॥
ಕವಡಿದ ಕಣ್ಗಳಿಂ ಕಡುಗಿ ನಿಟ್ಟಿಸಿ ಬೆಟ್ಟುಗಳೆಂದು ವಾಸವಂ ॥
ಸನೆವಿನಮೆಳ್ದುವಾಜಡಕಮುರ್ಗದ ಪಾಸಱೆಗಳ್ ಸುರಂಗದಿಂ ।
ಮುದದೊಡನಾಡುವಪ್ರತಿಮನೊಳ್ಜಸದಾತಿರಿಕಲ್ಗಳೆಂಬಿನಂ ॥ ೫೪

ವಚನ ॥ ಇಂತಾಱುಂ ಸಪ್ತಪದಿಗಳೊಳ್ ಶ್ರೀಕೃಷ್ಣನ ಬಾಲ್ಯಕೌಮಾರಲೀಲೆಗಳುಮಂ ಯೌವನಾರಂಭಲೀಲೆಗಳುಮಂ ಭಾವಿಸಿ, ಈಏೞನೆಯ ಸಪ್ತಪದಿಯೊಳ್ ಶ್ರೀಕೃಷ್ಣನ ಕಲ್ಯಾಣಗುಣಂಗಳನನುಭವಿಸಿ ರುಕ್ಮಿಣಿಸತ್ಯಭಾಮೆಯರುಗಳಂ ದಿವ್ಯಸೂರಿಗಳ್ಗಮಾಳ್ವಾರುಗಳ್ಗಮಾಚಾರ್ಯರ್ಗಮಂ ಮಂಗಳಾಶಾಸನಂಗೆಯ್ವರ್.

॥ ರಾಗ—ಇಂದು ಘಂಟಾರವ॥ ತಾಳ—ಝಂಪೆ॥

ಸೊಗಸುಗೋಪಾಲನಿಗೆ ಶುಭಮಂಗಳಂ।
ಜಗದೇಕಮೋಹನಗೆ ಜಯಮಂಗಳಂ॥ ಪ॥

ಚ॥ ಸಿರಿವತ್ಸ ಪೆಲ್ಲಡಿಯ ಚೆಲ್ವಿಕೆಗೆ ಮಂಗಳಂ।
ತೆರೆಮಸಗುವುಗುರ ಕಾಂತಿಗೆ ಮಂಗಳಂ।
ಕರಮೆಸೆವ ಕಿಱುದೊಡೆಯ ಗಾಡಿಗುಜೆ ಮಂಗಳಂ।
ಸಿರಿಮಲಗುದೊಡೆವೊಗರ ಸೇರುವೆಗೆ ಮಂಗಳಂ॥ ೧

ಪೊಸದೇಸೆಯಿಂದುಟ್ಟ ಪೊನ್ನುಡುಗೆ ಮಂಗಳಂ।
ಬಿಸಜದಿಂದೆಸೆವ ನಾಭಿಗೆ ಮಂಗಳಂ।
ಮಿಸುಪ ಕೆಂಬರಲಿಂದೆ ಮೆಱೆವೆರ್ದೆಗೆ ಮಂಗಳಂ।
ಒಸೆದು ಧರಿಸಿದ ತುಳಸಿಯೊಳುಸರಕೆ ಮಂಗಳಂ॥ ೨

ಚೆಲುವ ಪಾಱುಂಬಳೆಯ ಸಿಂಗರಕೆ ಮಂಗಳಂ।
ಬಲಮುರಿಯ ಸಂಕದೊಪ್ಪಕೆ ಮಂಗಳಂ।
ಉಲಿವ ಪೊಂಗೊಳಲ ಮೆಲ್ಲುಲಿಗಳಿಗೆ ಮಂಗಳಂ।
ನಲಿನಲಿವ ಮಕರಕುಂಡಲಗಳಿಗೆ ಮಂಗಳಂ॥ ೩

ಮುಗುಳುನಗೆ ಬಗೆಗೊಳುವ ಮೊಗಸಸಿಗೆ ಮಂಗಳಂ।
ಪೊಗರುಗುವ ಕದಪಿನೋಜೆಗೆ ಮಂಗಳಂ।
ಮಗಮಗಿಪಯುಸಿರ ಪರಿಮಳಕೆ ಮಿಗೆ ಮಂಗಳಂ।
ಬಗಸೆಗಣ್ಗಳ ತಣ್ಪುವಗೆಗಳಿಗೆ ಮಂಗಳಂ॥ ೪

ಸಕಲಲೋಕವ ಪೊರೆವ ಸೈರಣೆಗೆ ಮಂಗಳಂ।
ಅಕಳಂಕಗುಣಸಮೂಹಕೆ ಮಂಗಳಂ।
ಚಿಕದೇವರಾಯನಿಗೆ ಚಿಂತಿತಾರ್ಥವನೀವ।
ಸುಕರಗೋಪಾಲನಿಗೆ ಶೋಭನಂ ಮಂಗಳಂ॥ ೫ —೧—

॥ ರಾಗ—ಶ್ರೀರಾಗ॥ ತಾಳ—ಝಂಪೆ॥

ಸುಗುಣೆ ರುಕ್ಮಿಣಿಗೆ ಮಿಗೆ ಶುಭಮಂಗಳಂ।
ಜಗದೀಶನೆಱೆಯಳಿಗೆ ಜಯಮಂಗಳಂ॥ ಪಲ್ಲವಿ॥

ಚ॥ ಅಡಿಗೆಱಗಿದರೊಳು ಬಳೆವಕ್ಕಱಿಗೆ ಮಂಗಳಂ।
ಬಡವರಿಗೆ ಕುಡುವ ಭಾವಕೆ ಮಂಗಳಂ॥
ಎಡೆವಿಡದೆ ಜಗದೊಳಿರುವೆಱಕಕ್ಕೆ ಮಂಗಳಂ।
ತಡೆಯದೆಲ್ಲೆಡೆಯೊಳಿಹ ತರಹರಕೆ ಮಂಗಳಂ॥ ೧

ಶರನಿಧಿಯೊಳುದಿಸಿದತಿಶಯಕೆ ಮಿಗೆ ಮಂಗಳಂ ।
ಸಿರಿವೆಸರುವಡೆದ ದೇಸಿಗೆ ಮಂಗಳಂ ।
ಸರಸಿಜೋದರದೊಳಿಹ ಸಂಗತಿಗೆ ಮಂಗಳಂ ।
ಹರಿಯೆರ್ದೆಯ ನೆಲೆಗೊಂಡ ಹಿರಿಸಕ್ಕೆ ಮಂಗಳಂ ॥ ೨

ತಕ್ಕರನು ಪೆರ್ಚಿಸುವ ದಾಯಕ್ಕೆ ಮಂಗಳಂ ।
ಮಿಕ್ಕುಮಿಗುವರಿವ ವೈಮೆಗೆ ಮಂಗಳಂ ।
ಚಿಕ್ಕದೇವೇಂದ್ರನಿಗೆ ಸಿರಿಯನೀಙಗೆಗೊಳಿಪ ।
ಪೆಕ್ಕಳದೊಳೆಸೆವ ಪೊಸಬಿನ್ನಣಕೆ ಮಂಗಳಂ ॥ ೩ —೨—

॥ ರಾಗ—ಕಾಂಬೋಧಿ ॥ ತಾಳ—ಝಂಪೆ ॥

ಸತ್ಯಭಾಮೆಗೆ ಸಕಲಜಯಮಂಗಳಂ ।
ಶ್ರುತ್ಯಂತಲೋಚನೆಗೆ ಶುಭಮಂಗಳಂ ॥ ಪಲ್ಲವಿ ॥

ಚ॥ ಇನಿಯನನುವರಿದೆಸಗುವಿಚ್ಚಕಕೆ ಮಂಗಳಂ ।
ಮನಮಚ್ಚುಗೊಳಿಪ ನೇಮಕೆ ಮಂಗಳಂ ।
ಇನಿದುಗುವ ತೆಱದಿ ನುಡಿವಚ್ಚುಱಿಗೆ ಮಂಗಳಂ ।
ಅನುಸರಿಸಿ ನಡೆವ ಬಗೆಗಾವಗಂ ಮಂಗಳಂ ॥ ೧

ಮುನಿದಿನಿಸು ಪೊಗಡೆಸೆವ ಮೊಱಕಕ್ಕೆ ಮಂಗಳಂ ।
ಕಿನಿಸುನೋಟಗಳ ಕೊಂಕಿಗೆ ಮಂಗಳಂ ।
ಬಿನದದೊಳು ಮೂದಲಿಪ ಬಿನ್ನಣಕೆ ಮಂಗಳಂ ।
ಅನಿತಱೊಳು ಬಗೆಗರಗುವಚ್ಚಱಿಗೆ ಮಂಗಳಂ ॥ ೨

ಒಡವೆರೆದು ಹರಿಯನೊಲಿಪೊಯ್ಯಾರಕೆ ಮಂಗಳಂ ।
ಎಡದೆಸೆಯ ಸೇರಿದಿರವಿಗೆ ಮಂಗಳಂ ।
ಎಡೆವಿಡದೆ ಚಿಕ್ಕದೇವೇಂದ್ರನಿಗೆ ಜಯವೀವ ।
ಪೊಡವಿವಡದಿಯ ದಯೆಯ ಪೊಸವಗೆಗೆ ಮಂಗಳಂ ॥ ೩ —೩—

॥ ರಾಗ—ಕಲ್ಯಾಣಂ ॥ ಆದಿತಾಳ ॥

ಸೇನಾನಾಥನಿಗೆ ಶ್ರೀಮಂಗಳಂ ।
ಶ್ರೀನಾಥನಂತರಂಗಸೇವಕನಿಗೆ ಮಂಗಳಂ ॥ ಪಲ್ಲವಿ ॥

ಚ॥ ಪರವಾಸುದೇವನಲ್ಲಿ ಪರಮಹರ್ಷದೊಳಿರೆ ।
ಪರಿಪರಿ ಸೇವೆಗೆಯ್ವ ಪದುಳಕೆ ಮಂಗಳಂ ॥ ೧
ನಳಿನಾಕ್ಷನಾರೊಗಿಸಿ ನಲವಿನಿಂದುಱುಹಿದ ।
ತಳಿಗೆ ಪ್ರಸಾದಗೊಂಬ ಧನ್ಯತೆಗೆ ಮಂಗಳಂ ॥ ೨

ತಡೆಯಿಲ್ಲದೆ ಮುಕ್ತಿಗೆ ದಾಱಿದೋಱಿಸಲೆಂದು ।
ಶಠಕೋಪನಿಗೊಲಿದ ಸಂಪದಕೆ ಮಂಗಳಂ ॥ ೩ —೪—

॥ ರಾಗ—ಪಂತುವರಾಳಿ ॥ ತ್ರಿವುಡೆ ತಾಳ ॥

ಮಂಗಳಂ ಮಿಗೆ ಮಂಗಳಂ ॥ ಗರುಡನಿಗೆ ॥ ಪಲ್ಲವಿ ॥

ನಳಿನಾಕ್ಷನ ಪಟಿಗೆಳೆಯನೂಱಿಗದವ ।
ಪಟಿಯಿಗೆ ಬಿಜ್ಜಣ ಪಟ್ಟವಣೆ ।
ಒಳುದೇರೆನಿಸಿಯುನ್ನತಿವಡೆದೊಪ್ಪುವ ।
ಪಟನುಡಿಯೊಡಲಿನ ಪಕ್ಕಿಗೆ ॥ ೧

ಮಂಗಳಂ ಮಿಗೆ ಮಂಗಳಂ ॥ ಮಹಾಶೇಷನಿಗೆ ॥ ಪ ॥

ಚ ॥ ವಾಸುದೇವಗೆ ನಲ್ವಣೆ ಪಾವುಗೆ ಮೆ ।
ಲ್ವಾಸಿಗೆ ಸತ್ತಿಗೆ ಬಣ್ಣಾದುಡೆ ।
ಈಸಕಲಾಕೃತಿಯಿಂದೊಳ್ಗೆಯ್ವುದ ।
ವಾಸನೆಯಿಱಿಯದ ಪಾವಿಗೆ ॥ ೨

ಮಂಗಳಂ ಮಿಗೆ ಮಂಗಳಂ ॥ ಪರಕಾಲನಿಗೆ ॥ ಪ ॥

ಚ ॥ ನುಡಿನುಡಿಯೊಳು ಜೇನುಗುವೊಲು ಮಾಧವ ।
ನಡಿಗಳ ಮೈಮೆಯನಱುಹಿದಗೆ ।
ತಡೆದು ನಿಲಿಸಿ ಬಾಳ್ಗಡಿತದ ಬಲ್ಮೆಯೊ ।
ಳೊಡನೆ ಮಂತ್ರವ ಕೊಂಡುತ್ತಮಗೆ ॥ ೩ —೫—

॥ ರಾಗ—ಭೈರವಿ ॥ ಅಟ್ಟತಾಳ ॥

ಶಠಕೋಪಯೋಗಿಗೆ ಮಂಗಳಂ । ಹರಿ ।
ಯಡಿಯು ಪಾವುಗೆಗೆ ಮಂಗಳಂ ॥ ಪಲ್ಲವಿ ॥

ಚ ॥ ವಕುಳಾಭರಣಗೆ ಮಂಗಳಂ । ವೈಷ್ಣವರೆಜೆಯಗೆ ಮಂಗಳಂ ॥
ಅಕಳಂಕಚರಿತಗೆ ಮಂಗಳಂ । ಆದಿದೇಶಿಕನಿಗೆ ಮಂಗಳಂ ॥ ೧
ಸೇನೇಶದಾಸಗೆ ಮಂಗಳಂ । ಸೇವಕಪಾಲಗೆ ಮಂಗಳಂ ।
ಮಾನಿತಚರಿತಗೆ ಮಂಗಳಂ । ಮಧುರಕವೀಂದ್ರಗೆ ಮಂಗಳಂ ॥ ೨
ಕುರುಕಾಪುರೀಶಗೆ ಮಂಗಳಂ । ಗುಣಗಣನಿಳಯಗೆ ಮಂಗಳಂ ।
ಕರುಣಾನಿವಾಸಗೆ ಮಂಗಳಂ । ಕಾರಿಕುಮಾರಗೆ ಮಂಗಳಂ ॥ ೩ —೬—

॥ ರಾಗ—ಮಧುಮಾಧವಿ ॥ ಅಟ್ಟತಾಳ ॥

ಮಂಗಳಂ ಶುಭಮಂಗಳಂ ।
ಮಂಗಳಮೆಂಬಿರುಮಾನಾರಿಗೆ । ಜಯ ॥ ಪಲ್ಲವಿ ॥

ಚ॥ ಅಹಿರಾಜನಂಶನೆಂದನಿಬರುಮಱಿವಂತೆ ।
ಮಹಿಯೊಳುದಿಸಿದಗೆ ಮಂಗಳಂ ।
ಸಹಜಗುಣಗಳಿಂದೆ ಜಗದೊಳೇೞಿಗೆವೆತ್ತ ।
ಮಹನೀಯಚರಿತಗೆ ಮಂಗಳಂ ॥ ೧

ಶ್ರುತಿವಿಪರೀತವ ಸೊಲ್ಲಿಪ ವಿವಿಧಕು ।
ಮತಿಗಳ ಗೆಲಿದಗೆ ಮಂಗಳಂ ।
ಸ್ತುತಿಸೆ ವೈದಿಕದಿವ್ಯಸೂರಿನಿವಹಸ ।
ನ್ಮತವ ಬಳಸಿದಗೆ ಮಂಗಳಂ ॥ ೨

ಆನತರಿಗೆ ವೇದಾಂತವಱುಹಿ ಪರ ।
ಮಾನಂದವಡೆದಗೆ ಮಂಗಳಂ ।
ಶ್ರೀನಾಥನೊಲುಮೆಯ ಸೇವಕನೆನಿಪ ರಾ ।
ಮಾನುಜಾಚಾರ್ಯಗೆ ಮಂಗಳಂ ॥ ೩ —೬—

ಮಂಗಳ ಸಪ್ತಪದಿ ಸಂಪೂರ್ಣಂ.

ಗಡಿ ಮೂಡಲ್ ತೊರೆಯೂರನಂತಗಿರಿಗಳ್ ಧಾರಾಪುರಂ ತೆಂಕಲಾ ।
ಪಡುವಲ್ ಬಲ್ವಗೆಬಂದಿಗಾಱ ವಸುಧಾರಾಭಿಖ್ಯೆಯೂರ್ಕ್ಮತ್ತಮಾ ॥
ಬಡಗಲ್ತಾಂ ಪುಳಿಯೇಱುಗುಂಡುಮಲೆಗಳ್ ನೀನಾಳ್ವ ದೇಶಕ್ಕೆ ಮೇಣ್ ।
ಗಡಿ ನಾಲ್ಕುಂ ಕಡಲೊಳ್ಜಸಕ್ಕೆ ಸರಿಯೇ ನಿನ್ನೇೞ್ಗೆಗಿನ್ನೆಲ್ಲಿಯುಂ ॥ ೫೫

ಕ್ಷ್ವೇಳಾರಾವದೆ ಸೀರೆಯುಂ ಪಟಹಢಕ್ಕಾರಂಗಳಿಂ ಬೆಂಗಳೂರ್ ।
ಧೂಳೀಪುಂಜದೆ ಚೆಂಜಿದಂಡೆನಲೊಡಂ ಪಾಂಡ್ಯಾವನೀಮಂಡಲಂ ॥
ಚೋಳೋರ್ವೀತಲಮೆಯ್ದೆ ಬಾಳ ಪೊಳಪಿಂಗಾಳಾದುದಂದಂದೆ ತಾಂ ।
ಪೇೞಲ್ಕಿಂ ಕಾಳಗದೊಳ್ಪದಕ್ಕೆ ಚಿಕದೇವಾ ಬಲ್ಲರೊಳ್ ಬಲ್ಲಹಾ ॥ ೫೬

॥ ಲಯಗ್ರಾಹಿವೃತ್ತ ॥

ಅಂದಿವನಿಸಳ್ಕಿ ಭಯದಿಂದೆ ಮಣಿದಿರ್ದ ನೃಪ
ಬೃಂದಮನಿತುಂ ಭರದೊಳೊಂದುವೆರೆದೊಳ್ಪಂ ।
ಸಂದಿಸಿ ಶಿವಾಜಿಗನುವಿಂದೊರೆದು ಮರ್ಮಮನ ।
ವಂದಿರೊಡಗೂಡಿಯುವನಂದು ಕವಡಿಂದಂ ॥
ಸಂದಣಿಯ ಕಾಳಗದೊಳೊಂದಿಸಿಸು ಮುಂಬರಿಯೆ
ಬಂದೆಱಗಿ ಪಾವುಗಳ ಗೊಂದಣದೆ ವಿಷ್ಣು ।

ಸ್ಯಂದನದ ಮೊಟ್ಟೆಯೊಳೆ ಕೊಂದು ಕೊಲೆಯಾಡಿದಳ
ವಿಂದೆ ಚಿಕದೇವನೃಪನಿಂದು ಸೊಗವಾಳ್ಗಂ ॥ ೫೭

॥ ಗದ್ಯ ॥

ಇದು ಸಕಲಜಗದುದಯವಿಭವಾದಿಲೀಲನುಂ, ಲಕ್ಷ್ಮೀಲೋಲನುಂ, ಅಖಿಲಹೇಯಪ್ರತ್ಯನೀಕನುಂ, ಅಪ್ರಾಕೃತಪ್ರತೀಕನುಂ, ಅವಾಪ್ತಸಮಸ್ತಕಾಮನುಂ, ಅನಂತಕಲ್ಯಾಣಗುಣಗಣಾರಾಮನುಂ, ಸಾರಸಭವಪೂಜಿತನುಂ, ಸನಕಮುನಿಸಭಾಜಿತನುಂ, ಯದುಶಿಖರಿಶಿಖರಾಲಂಕಾರನುಂ, ಯತಿರಾಜಸಂಪತ್ಕುಮಾರನುಂ, ಆಶ್ರಿತರಕ್ಷಾಪರಾಯಣನುಮಪ್ಪ ಯಾದವಗಿರಿನಾರಾಯಣನಡಿದಾವರೆಯೊಟ್ಟಿಗದೊಳ್ ಬಳೆದೇಟ್ಟಿದಳೆದ ಯಾದವಕುಲೋದ್ಧಾರಕನುಂ, ಶುಭಗುಣೋದ್ಧಾರಕನುಮಾದ ದೇವರಾಜನೃಪಾಲಪೌತ್ರನುಂ, ಅತ್ರಿಗೋತ್ರಪವಿತ್ರನುಂ, ದೊಡ್ಡದೇವರಾಜ ಗರ್ಭಾಂಬುಧಿಕಲಾಧರನುಂ, ಸಕಲಕಲಾಧರನುಂ, ಅಶ್ವಾರೋಹಣಕಲಾರೇವಂತನುಂ, ಗಜಾರೋಹಣಮಘವಂತನುಂ, ಅಸ್ತ್ರವಿದ್ಯಾಭೃಗುರಾಮನುಂ, ಅಪ್ರತಿಮಧಾಮನುಂ, ಕರ್ಣಾಟಭೂಮಂಡಲಾಧೀಶನುಂ, ದೇವಸಂಕಾಶನುಂ. ಪಶ್ಚಿಮರಂಗಪುರಸಿಂಹಾಸನಾಧಿಷ್ಠಿತನುಂ, ಸುಪ್ರತಿಷ್ಠಿತನುಂ, ದೇವಬ್ರಾಹ್ಮಣ ಪರಿಪಾಲನೈಕಾನ್ತನುಂ, ಸಕಲಪ್ರಜಾಕಾನ್ತನುಂ, ಅಸಕೃದಾವರ್ತಿತಷೋಡಶಮಹಾದಾನನುಂ, ಆಶ್ರಿತಸರ್ವಶ್ರೇಯೋನಿದಾನನುಂ, ರಸಿಕಜನಕರ್ಣರಸಾಯನೀಕೃತಸಂಗೀತವಿಸ್ತರನುಂ, ಸಾಹಿತ್ಯವಿದ್ಯಾನಿಕಷಪ್ರಸ್ತರನುಂ, ಪೂರ್ವದಿಗ್ವಿಜಯಯಾತ್ರಾವಿತ್ರಾಸಿತ ಚೇದಿಮಂಗಲೋಪಾನ್ತ ಕಾನ್ತಾರೋಪಗೂಢವ್ಯೂಢಸೇನಾಭಿಗುಪ್ತ ಪಾಂಡ್ಯಸೇನಾಧಿಪ ಸಂಗರಕಿರೀಟ ವೆಂಕಟಕೃಷ್ಣ ಶಿಬಿರಸರ್ವಸ್ವಹರಣಸಮಸಮಯಸಮಾಕ್ರಾನ್ತ ಮಳಲಿ ಪರಮತ್ತಿ ಶಾಲೆಯ ಚೇದಿಮಂಗಲ ಕೊಂಗು ಧಾರಾಪುರಾದಿ ಪಾಂಡ್ಯನೃಪದುರ್ಗಮದುರ್ಗಸ್ತೋಮನುಂ, ಸಂಗರಭೀಮನುಂ, ಉದ್ವೃತ್ತಸುರತ್ರಾಣಚಮೂವಿಕ್ಷೋಭಣವಿಚಕ್ಷಣವಿಕಟಮರಾಟ ಶಿವಾಜಿವಾಜಿಸೇನಾಧಿಪ ಜಯತಜಿಕಾಟಕರ ದಾದಜಿಕಾಕಡ ಪ್ರಮುಖಕಂಠನಾಳೋಚ್ಛಲದ್ರಕ್ತಧಾರಾಸಿಕ್ತಕೃಪಾಣಸಂದರ್ಶನವಿಲೀನಹರಜಿ ಸಂತಜಿ ಮುಖ್ಯಮಹಾರಾಷ್ಟ್ರನೃಪಪ್ರವೇಕನುಂ, ಅಪ್ರತ್ಯನೀಕನುಂ, ಗಂಭೀರೋದ್ಧತಪರಿಘಾವರಣಭೀಷಣಶತಘ್ನೀ

ಶತಸಂಕುಲಮತ್ತ ಮಾವಳಿಸೇನಾವಳೀವರ್ಮಿತಧರ್ಮಪುರೀಪ್ರಸಭಾಕ್ರಮಣ ಶ್ರಮಣನಿರ್ಜನೀಕೃತ ಕೆಂಗೇರಿ ಪಾಮಲೂರು ಬೇವುಹಳ್ಳಿ ಬೈರನತ್ತ ಕುನ್ನತ್ತೂರ್ ಮುಖ್ಯದುರ್ಗವರ್ಗನಿರಾಯಾಸಾಕ್ರಮಣನಿರ್ವೃತನಿಜಸೈನಿಕಸಮೂಹನುಂ, ಅಹವಕಲಾಶ್ವೇತವಾಹನನುಂ, ದಕ್ಷಿಣದಿಗ್ವಿಜಯಯಾತ್ರಾವಿತ್ರಾಸಿತ ಪಲಾಯಿತ ಪಾಂಡ್ಯಬಲಾನುಧಾವನಶ್ರಾಂತ ನಿಜಬಲವಿಶ್ರಾನ್ತಿಸ್ಥಾನೀಕೃತಜಲಧಿವೇಲಾತಟಮಾಲಾರಣ್ಯನುಂ, ಆನತಜನಶರಣ್ಯನುಂ, ಪಶ್ಚಿಮದಿಗ್ವಿಜಯ ಪ್ರಸ್ಥಾನಭೇರೀರವಾಕರ್ಣನಸಂಭ್ರಾನ್ತದುರ್ದಾನ್ತಹುಶಾನಖಾನಸನಾಥಕೆಳದಿನೃಪ ಸಮರ್ಪಿತ ಸರ್ವಸ್ವನಿರ್ವಾಪಿತಕೋಪನುಂ, ಅಮಿತಪ್ರತಾಪನುಂ, ಉತ್ತರದಿಗ್ವಿಜಯಸಮಯಾಭಿಯಾತ ಕುತುಪಶಾಹ ವಾಹಿನೀವಿಮರ್ದನಕ್ಷಣಾಕ್ರಾಂತ ಕಂಡಿಕೆರೆ ಚಿಕ್ಕನಾಯಕನಹಳ್ಳಿ ಹೊನ್ನವಳ್ಳಿ ಸಾರತವಳ್ಳಿ ತುಱುಗೆರೆ ಪ್ರಮುಖದುರ್ಗ್ರಹಪ್ರಾಕಾರವಾರನುಂ, ಅಸಹಾಯಶೂರನುಂ, ಜಡಕನದುರ್ಗಹಠಾದ್ಗ್ರಹಣವೇಳಾನಿಖಾತಸುರಂಗಮುಖಾನಲೋತ್ಕ್ಷಿಪ್ತಗಂಡೋಪಲಪಾತನಿರೂಢ ಬಿಜ್ಜವರ ಮದ್ದಗಿರಿ ಚೆನ್ನರಾಯದುರ್ಗವೀರಣದುರ್ಗಾದ್ಯಸಂಖ್ಯದುರ್ಗವರ್ಗಾಕ್ರಮಣಾವಸರಾವನತಸಾಮಂತನೃಪಾಲಮೌಳಿಮಣಿಘೃಣೀನೀರಾಜಿತಪದರಾಜೀವನುಂ, ಮಹಾನುಭಾವನುಂ, ಸಾಹಜಿಮುಖರಮರಾಟನೃಪರಾಜಧಾನೀಕೃತಾಭಂಗುರಬೆಂಗಳೂರ್ ಹರಣನಿಷ್ಪ್ರಾಣಿತ ಶಂಭುಜಿ ಸಾಹಜಿ ಸಂತಜಿ ಹರಜಿ ಪ್ರಮುಖ ಮಹಾರಾಷ್ಟ್ರನೃಪಾಲಜಾಲನುಂ, ರಿಪುಕುಲಕಾಲನುಂ, ಸಂಗ್ರಾಮರಾಮನುಂ, ಸಾಹಸೋದ್ದಾಮನುಂ, ಪ್ರೌಢಪ್ರತಾಪನುಂ, ಪ್ರಕಟಿತಾಟೋಪನುಂ, ಅಮಿತಪರಾಕ್ರಮನುಂ, ಅಭೇದ್ಯವಿಕ್ರಮನುಂ, ಕರ್ಣಾಟಚಕ್ರವರ್ತಿಯುಂ, ಕಲ್ಯಾಣಕೀರ್ತಿಯುಂ, ಲೋಕೈಕವೀರನುಂ, ವೀರರೊಳ್ಗಂಡನುಂ, ಗಂಡರೊಳ್ಗಂಡನುಂ, ಅಂತೆಂಬರ ಗಂಡನುಮೆನಿಸಿ ನೆಗೞ್ದ ಶ್ರೀಮದಪ್ರತಿಮವೀರನರಪತಿ

ಶ್ರೀ ಚಿಕದೇವಮಹಾರಾಜ ವಿರಚಿತಮಪ್ಪ ದಿವ್ಯಪ್ರಬಂಧಂಗಳೊಳ್

ಶ್ರೀ ಗೀತಗೋಪಾಲ ಮಹಾಪ್ರಬಂಧದೊಳ್

ಪೂರ್ವಭಾಗಂ ಸಂಪೂರ್ಣಂ.

॥ ಶುಭಮಸ್ತು ॥

ಶ್ರೀ ಗೀತಗೋಪಾಲೋತ್ತರಭಾಗಂ.

ಕಂದ ॥ ಶ್ರೀರಮಣನಖಿಲಸದ್ಗುಣ |
ವಾರಿಧಿಯಾನಂದಮಯವಿಮಾನೋದರವಿ ॥
ಸ್ಫಾರಿತರೂಪಂ ಯದುಗಿರಿ |
ನಾರಾಯಣನಾಳ್ದನಕ್ಕೆ ನರಪತಿಗನಿಶಂ ॥ ೧

ಅನಂದ್ಯೈಕರಸಂ ಸಮಸ್ತಜಗದಾನಂದಂಗೆ ಚಕ್ರಾಯುಧಂ |
ಸೇನಾಚಕ್ರವಿಮರ್ದಿತಾಹಿತಮಹೀಚಕ್ರಂಗೆ ವೈಕುಂಠನ ॥
ನ್ಯೂನೋಪಾಯವಿಕುಂಠಿತಾರಿಧರಣೀಭೃದ್ದುರ್ಗವರ್ಗಂಗೆ ಲ |
ಕ್ಷ್ಮೀನಾರಾಯಣಸೇವನಕ್ಕೆ ಚಿಕದೇವೇಂದ್ರಂಗೆ ಸಾಮ್ರಾಜ್ಯಮುಂ ॥ ೨

ಜಡಕನ ದುರ್ಗದಿಂ ನೆಗೆವ ಪಾಸಱೆಗಳ್ ತಡೆಗಟ್ಟೆ ಬಟ್ಟೆಯಂ |
ಕೊಡನ ಕುಮಾರನಾಣತಿಯಿನೆಂದಿನವೊಲ್ ಬೞೆದತ್ತು ಬಿಂಜಮುಂ ॥
ದೆಡಬಲದತ್ತ ಸುತ್ತುವಿನಮಾಳಱೆಯೇಱಿದ ವೈರಿವೀರರಂ |
ನುಡಿಸೆ ಪೊದಲ್ದು ಯುದ್ಧಗರುಡಧ್ವಜನುದ್ಧತಿಗೆತ್ತನಂದಿನಂ ॥ ೩

ಒಡಲೊಡನೊರ್ವನಂ ದಿವಮನೇಱಿಸಿದಾಕುಶಿಕಾತ್ಮಜಂಗದೇಂ |
ಬಿಡಯಮೆ ಸಾಕು ನಿಲ್ಕೆ ಚಿಕದೇವನೃಪಾಲವರಂ ಸುರಂಗದಿಂ ॥
ಜಡಕನ ದುರ್ಗದೊಮ್ಮೊಗದ ಕೋಂಟೆಯನೇಱಿದ ವೀರರೊಗ್ಗಿನೇಂ |
ಅಡರಿಸಿದಂ ದಿವಕ್ಕಮುಮ ಸೈ ಮಝುನಮಾ ಭಳಿ ಪೂತು ಭಾಪುರೇ ॥ ೪

ವಚನ ॥ ಇಂತು ಶ್ರೀ ಗೀತಗೋಪಾಲಮಹಾಪ್ರಬಂಧದೊಳ್ ಪೂರ್ವಭಾಗದೇೞುಂ ಸಪ್ತಪದಿಗಳೊಳ್ ಗೋಪಿಕಾವೃತ್ತಾಂತನಿರೂಪಣವ್ಯಾಜದಿಂ ಭಗವದ್ಗುಣಂಗಳನನುಭವಿಸಿ, ಈಯುತ್ತರಭಾಗದೇೞುಂ ಸಪ್ತಪದಿಗಳೊಳೇ ಗುಣಾನುಭವಂ ಎಡೆವಿಡದೆ ದೊರೆಕೊಂಬ ಮೋಕ್ಷಮಂ ಸಾಧಿಪುದಕ್ಕೆ ಉಪಾಯಮಾದ ಪ್ರಪತ್ತಿಸ್ವರೂಪಮಂ ನಿರೂಪಿಸುವರ್. ಇದಱೊಳೊ

ವೆರ್ೞದಲ ಸಪ್ತಪದಿಯೊಳ್ ತಾಂ ಪ್ರಸಕ್ತಿಗೆಯ್ವ ದೇವತೆಯುಂ ಗುರುಪರಂಪರೆಯೊಡನೆ ನುತಿಗೆಯ್ವರ್. ಇದಱೊಳೊಪೆರ್ೞದಲ ಪಂಚಪದಿಯೊಳ್ ತಮ್ಮ ಯದುಕುಲದೇವತೆಯಪ್ಪ ಯಾದವಗಿರಿನಾರಾಯಣನ ಕಲ್ಯಾಣಗುಣಂಗಳನನುಭವಿಸಿಯದರ್ಕೆ ಮಂಗಲಾಶಾಸನಂಗೆಯ್ವರ್.

॥ ರಾಗ—ಯರಕಲಕಾಂಬೋಧಿ ॥ ಆದಿತಾಳ ॥

ಮಂಗಳಂ ತಿರುನಾರಾಯಣನಿಗೆ । ಮಿಗೆ ಮಂಗಳ ಯದುಗಿರಿನಿಲಯನಿಗೆ ॥ಪಲ್ಲ॥

ಚ॥ ತಾನೊಲಿದರ್ಚಾವತಾರವಡೆದು ಚತು
ರಾನನಲೋಕದೊಳವತರಿಸಿ ।
ಆನಂದಮಯವೆನಿಪತಿಶಯವೆಸರ ವಿ
ಮಾನಮಧ್ಯದಿ ನಿಂದ ಮಹನೀಯಗೆ ॥ ೧

ವನಜಸಂಭವನ ಭವನದೊಳು ಬಹುಕಾಲ
ವನುಪಮದಿವ್ಯಾರ್ಚನೆವಡೆದು ।
ಸನತುಕುಮಾರನ ಸಂಗಡ ಬದರಿಯ
ಬನದೆಡೆಗೆಯ್ತಂದ ಭವ್ಯನಿಗೆ ॥ ೨

ಪಲವಗೆ ಪೂಜುವ ಬದರಿನಾರಾಯಣ
ನೊಲಿದು ಮುನಿಗಳು ತನ್ನೊಡನೆ ಬರೆ ।
ಕಲಿಕಲುಷವನೆಲ್ಲ ಕಳೆವ ಯಾದವಗಿರಿ
ನಿಲಯದಿ ನೆಲಸಿದ ನಿರುಪಮಗೆ ॥ ೩

ಆದಿವಿಡಿದು ದತ್ತಾತ್ರೇಯ ರಾಘವ
ಯಾದವ ರಾಮಕೃಷ್ಣಾದಿಗಳು ।
ಪಾದವಂದನೆಗೆಯ್ದು ಭಜಿಸೆಯವರ ಪೊರೆ
ವಾದಿದೇವನಿಗಂಬುಜಾಕ್ಷನಿಗೆ ॥ ೪

ರಾಮಾನುಜಮುನಿರಾಜ ಭೂಮಿಪರೊಳು
ಪ್ರೇಮವ ಮಿತಿಮೀಱಿಬಳಸಿದಗೆ ।
ಶ್ರೀಮಂತನಿಗೆ ಮಿಗೆ ಚಿಕದೇವರಾಯಗೆ
ಕಾಮಿತಾರ್ಥವನೀವ ಗರುವನಿಗೆ ॥ ೫ —೧—

ವಚನ ॥ ಈಯೆರಡನೆಯ ಪಂಚಪದಿಯೊಳ್ ಮುಂ ತಮ್ಮ ಕೂಟಸ್ಥರ್ ದ್ವಾರಕಾನಗರದಿಂ ಕರ್ಣಾಟಕಕ್ಕೆ ಬಂದು ಪೊತ್ತಮೊದಲ್ ತಾವುಗೊಂಡುದಱಿಂ ತಾಯ್ವನೆಯೆನಿಪ ಮಹೀಶೂರನಗರಕ್ಕೆ ಅಧಿದೇವತೆಯಪ್ಪ ಲಕ್ಷ್ಮೀನಾರಾಯಣಂಗೆ ಮಂಗಳಾಶಾಸನಂಗೆಯ್ವರ್.

॥ ರಾಗ—ಮಧುಮಾಧವಿ ॥ ಅಟ್ಟತಾಳ ॥

ಮಂಗಳಂ ಲಕ್ಷ್ಮೀರಮಣಗೆ। ಮಿಗೆ ಮಂಗಳ ಮಹಿಶೂರಪುರವಾಸಗೆ ॥ ಪ ॥

ಚ ॥ ಸಿರಿರಾಣಿಯೊಡಗೂಡಿ ಶೇಷಪೀಠದೊಳು ಕ
ಟ್ಟರಸುತನದೊಳೆಸೆವನಘನಿಗೆ।
ಪರವಾಸುದೇವಗೆ ಭಕ್ತರನಾನಂದ
ಪರವಶಗೊಳಿಸುವ ಭವ್ಯನಿಗೆ ॥ ೧

ಅಮಿತಗುಣಾಢ್ಯನಿಗಂಬುನಿಧಿಯೊಳಱು
ವಮರಿರೆ ನಿದ್ದೆಗೆಯ್ವಚ್ಯುತಗೆ।
ಅಮರರ ಮೊಱೆಗೇಳಿ ಅಸುರರೇಳಿಗೆಯನು
ಶಮನಗೊಳಿಸಿ ತೋರ್ಪ ಚದುರನಿಗೆ ॥ ೨

ಸುಗುಣರ ಮನ್ನಿಸಿ ವಿಗಡರ ಮಗ್ಗಿಸಿ।
ಬಗೆಗೊಳೆ ಧರ್ಮವ ಬಲಿಸಿದಗೆ।
ಯುಗೆಯುಗದೊಳು ಪುಟ್ಟಿಯುಚಿತಚರಿತ್ರದಿ।
ಜಗವ ಪಾವನಗೆಯ್ವ ಜಾಣನಿಗೆ ॥ ೩

ಬಲ್ಲರು ತನ್ನನೆಂದೋಕರಿಸದೆ ಮಿಗೆ।
ಬೊಲ್ಲದರೆಂದೊಮ್ಮೆ ಬೊಱೆತಟ್ಟದೆ।
ಎಲ್ಲರ ಹೃದಯದೊಳಿರ್ದವರಿಗೆ ಬಲ್ಮೆ।
ಬಲ್ಲವಿಕೆಗಳನು ಬಲಿಸುವಗೆ ॥ ೪

ನರಪತಿ ಚಿಕದೇವನಾಥಸಂರಕ್ಷಣ।
ಪರನಿಗೆ ಮಹೀಶೂರಪುರವಾಸಗೆ।
ಪರವ್ಯೂಹವಿಭವಾಂತರ್ಯಾಮಿಯರ್ಚಾವ।
ತರಣದಿ ಲೋಗರ ಪೊರೆವನಿಗೆ ॥ ೫ —೨—

ವಚನ ॥ ಈ ಮೂಱನೆಯ ತ್ರಿಪದಿಯೊಳ್ ತಮ್ಮ ರಾಜಧಾನಿಯಪ್ಪ ಶ್ರೀರಂಗಪಟ್ಟಣದ ಪಶ್ಚಿಮರಂಗರಾಯನ ಗುಣಂಗಳಂ ಪೊಗಳ್ವರ್.

॥ ರಾಗ—ಕುರಂಜಿ ॥ ಅಟ್ಟತಾಳ ॥

ಪಾವನಗುಣನಿಸ್ಸೀಮನ।
ಭಾವುಕಹೃದಯಾಭಿರಾಮನ। ನಾ।
ಭಾವಿಪೆ ಪರಿಪೂರ್ಣಕಾಮನ।
ಪಶ್ಚಿಮಶ್ರೀರಂಗಧಾಮನ ॥ ಪಲ್ಲವಿ ॥

ಚ ॥ ಮಂಗಳಫಣಿಪತಿತಲ್ಪನ।
ಮಹನೀಯಸತ್ಯಸಂಕಲ್ಪನ।

ಅಂತ । ರಂಗದೊಳಿಡುವೆಯೆನ್ನಪ್ಪನ।
ಶ್ರೀ । ರಂಗಪಟ್ಟಣದ ರಂಗಪ್ಪನ ॥ ೧

ನೀಲನೀರದ ಸಂಕಾಶನ ।
ನಿರವಧಿನಿತ್ಯಪ್ರಕಾಶನ ।
ಭಕ್ತ । ಪಾಲನ ಕಲಿತಾವೇಶನ ।
ನಾ । ಭಜಿಸುವೆ ಶ್ರೀರಂಗೇಶನ ॥ ೨

ಸರಸಿಜಭವ ಭವಧ್ಯೇಯನ ।
ಮುನಿ । ವರಗೌತಮಭಾಗಧೇಯನ ।
ನಿರುಪಮಭಕ್ತಿ ವಿಧೇಯನ ।
ನಾ । ನೆನೆವೆ ಪಶ್ಚಿಮರಂಗರಾಯನ ॥ ೩

—೩—

ವಚನ ॥ ಈ ನಾಲ್ಕನೆಯ ತ್ರಿಪದಿಯೊಳ್ ಪ್ರಪನ್ನವಿಷಯದೊಳೆಂ ತೆರ್ಗ ದೋಷವೆಣಿಸ ಜಗದೀಶನ ದೋಷಮಂ ಕಳೆದು ಕೃಪೆಯಂ ಜನಿಯಿಪ ಶ್ರೀರಂಗನಾಯಕಿಯಂ ಪೊಗಳ್ವರ್.

॥ ರಾಗ—ಮುಖಾರಿ ॥ ಅಟ್ಟತಾಳ ॥

ನಿನ್ನ ಪೊಗಳಲೆನ್ನಳವೆ ।
ರಂಗನಿಲಯನ ಭಾಗ್ಯದ ಫಲವೆ ।
ನಿನ್ನೊ । ಳೆನ್ನ ನುಡಿಯು ಬಿತ್ತಿ ಬೆಳೆವೆ ।
ಯೆನ್ನಿಪ್ಪಾರ್ಥವ ಕೈಕೊಳುವೆ॥ ಪಲ್ಲವಿ ॥

ಚ॥ ಕಡಲೊಳೊಗೆದ ಕನ್ನೆ ರನ್ನೆ ।
(ನಿತ್ಯ)ಕಲ್ಯಾಣಗುಣಸಂಪನ್ನೆ ।
ಕಡುವಣ್ಣವಿಡಿದ ಚೆಂಬೊನ್ನೆ ।
ರಂಗಾಧೀಶನ ಮನದನ್ನೆ ॥ ೧

ಆರಯ್ಯೆ ನಿನ್ನ ಮಗ ಬೊಮ್ಮ ।
ಅಲ್ಲಾ ಚಂದ್ರಶೇಖರ ಪೊಮ್ಮ ।
ನಿನ್ನ ಸೇರಿರೆ ಹರಿಪರಬೊಮ್ಮ ।
ಅಮ್ಮ ಶ್ರೀರಂಗನಾಚ್ಚಾರಮ್ಮ ॥ ೨

ಶ್ರೀರಮಣಿ ಶ್ರುತಿಗೇಯೇ ।
ಸಿದ್ಧೋಪಾಯಸಹಾಯೇ ।
ಈರೇಳು ಲೋಕದ ತಾಯೇ ।
ರಂಗೇಶಪದಾಂಬುಜಚ್ಛಾಯೇ ॥ ೩

—೪—

ವಚನ ॥ ಈ ಐದನೆಯ ತ್ರಿಪದಿಯೊಳ್ ಲಕ್ಷ್ಮಿಯತ್ತಣಿಂದಧಿಕರಿಸಿದ ಮೋಕ್ಷವಿದ್ಯೆಯುಂ ಪರಮಪದದಿಂದಿಳೆಗಿಳಿಪಿದ ವಿಷ್ವಕ್ಸೇನರಂ ಶರಣ್ಬುಗುವರ್.

॥ ರಾಗ—ಕಾಂಬೋಧಿ ॥ ಆದಿತಾಳ ॥

ಸೇನಾನಾಥ ಸೇರಿದೆ ನಿನ್ನ ।
ಅನತವತ್ಸಲ ವಿಷ್ವಕ್ಸೇನ ವಿಜಿತಾರಿಸೇನ ॥ ಪಲ್ಲವಿ ॥

ಚ ॥ ಪರಮಕೃಪಾಲಯ ಪಾಲಿಸು ಮತಿಯ ।
ದೊರೆಕೊಳಿಸೆನಗೆ ಸತ್ಪುರುಷಸಂಗತಿಯ ॥
ಕರುಣಿಸು ನಿನ್ನಡಿಗೆಱಗುವ ಮತಿಯ ।
ಭರದಿ ಕೈಸೇರಿಸು ಭಾಗ್ಯೋನ್ನತಿಯ ॥ ೧

ಶ್ರೀಕರಸೂತ್ರವತಿಯ ಮನದನ್ನ ।
ಲೋಕನಿಯಮನಾಲೋಕಸಂಪನ್ನ ।
ಆಕುಱುಕೇಶನನಾಳಿದ ಗನ್ನ ।
ಸಾಕು ಅನಾಥನ ಸಲಹೊ ನೀಯೆನ್ನ ॥ ೨

ನಳಿನಾಕ್ಷಗೆ ಮಿಗೆ ನಚ್ಚಿನ ಕೆಳೆಯ ।
ತಳೆಗೆ ಪ್ರಸಾದವ ಸವಿವಗ್ಗಳೆಯ ।
ಕಳೆದು ಭವಾಂತರಕಲುಷಾವಳಿಯ ।
ತಳುವದೆ ಕೈವಿಡಿ ಸದ್ಗುಣನಿಳಯ ॥ ೩

——೫——

ವಚನ ॥ ಈ ಆಱನೆಯ ತ್ರಿಪದಿಯೊಳ್ ಪ್ರಪನ್ನಜನಕೂಟಸ್ಥರಪ್ಪ ನಮ್ಮಾಳ್ವಾರಂ ನೆನೆಮ್ಮವರ್.

॥ ರಾಗ—ಭೈಂಟಾರವ ॥ ರೂಪಕತಾಳ ॥

ನಮ್ಮಾಳ್ವಾರೆ ನಂಬಿದೆ ನಿನ್ನ ।
ಗಮ್ಮನೆ ಸಲಹೆನ್ನ ಕರುಣಾಸಂಪನ್ನ ॥ ಪಲ್ಲವಿ ॥

ಚ ॥ ಕಡುಗಿ ವಿಭಾಗಿಸಿ ಕರಣದ ಪಡೆಯ ।
ಶಡಗೋಪವೆಸರನು ಪಡೆದಗ್ಗಡೆಯ ।
ಪಿಡಿದಿರುವೆನು ಬಿಗಿಬಿಗಿದು ನಿನ್ನಡಿಯ ।
ಸಡಿಲ ಬಿಡದೆ ಯಿನ್ನು ಸಲಹುಯೆನ್ನೊಡೆಯ ॥ ೧

ಅಂದು ಮಧುರಕವಿಹರುಷವ ತಾಳ್ದಿ ।
ಅಂದದಿ ದ್ರಾವಿಡಾಮ್ನಾಯವ ಪೇಳ್ದಿ ।

ಕುಂದದೆ ಶ್ರೀಶನ ಗುಣಗಳ ಪೊಗಳ್ದು ।
ಸಂದ ಸಕಲದುರ್ಮತಗಳ ತಗುಳ್ದಿ ॥ ೨

ಒಡನೆ ರನ್ನದ ಪಾವುಗೆಯ ರೂಪಾಂತೆ ।
ಬಿಡದೆ ಶ್ರೀಧರನಡಿಯೆಡೆಯೊಳು ನಿಂತೆ ।
ತಡೆಯದೆ ಮುನಿಗಳ ಮುಡಿಯೊಳೊರಂತೆ ।
ಕಡುರಮ್ಯವಾದ ಶಿಖಾಮಣಿಯಂತೆ ॥ ೩ —೬—

ವಚನ ॥ ಈ ಏಳನೆಯ ತ್ರಿಪದಿಯೊಳ್ ತಮ್ಮ ಯಾದವಗಿರಿಗೆ ಕುಲದೇವರೆನಿಸಿ ಯದುಗಿರಿಯೊಳ್ ನೆಲಸಿದ ರಾಮಪ್ರಿಯಂಗೆ ಪ್ರಿಯತಮರೆನಿಸಿದ ರಾಮಾನುಜರಂ ಸನ್ನುತಿಸುವರ್.

॥ ರಾಗ—ಯರಕಲಕಾಂಬೋಧಿ ॥ ಅಟ್ಟತಾಳ ॥

ಶ್ರೀಭಾಷ್ಯಕಾರ । ಪಾಲಿಸೆನ್ನ ಶ್ರೀಭಾಷ್ಯಕಾರ । ಶ್ರೀಭಾಷ್ಯಕಾರಾದಿಶೇಷಾವತಾರ । ಶೋಭನ[1] ಗುಣಗಣ[1] ಸುಜನಮಂದಾರ ॥ ಪಲ್ಲವಿ ॥

ಚ ॥ ತಿರುಪತಿಯೊಳಗೆಂದು ತಿರುವೇಂಕಟೇಶಗೆ ।
ತಿರುಲಾಂಛನವಿತ್ತ ದೇಶಿಕೋತ್ತಮನೆ ।
ಪರಿಪರಿಯುಕ್ತಿಯಿಂ ಪರವಾದಿಗಳನೆಲ್ಲ ।
ಪರಿದು ವೇದಾಂತಶಾಸ್ತ್ರಾರ್ಥವ ನುಡಿದೆ ॥ ೧

ಕುಂದದೆ ತಿರುಕುರುಂಗುಡಿಯ ನಂಬಿಗೆ ನೀ ।
ನಂದು ಸಕಲವೇದಾಂತವಿದ್ಯೆಗಳ ।
ಚೆಂದವ ತಿಳುಪಿಯಾಚಾರ್ಯನೆಂದೆನಿಸಿ ನೀ ।
ಸಾಂದೀಪನಿಯಂತೆ ಸನ್ನುತಿವಡೆದೆ ॥ ೨

ಡಿಳ್ಳಿಯೊಳೊಂದುಗೂಡಿರೆ ದೇವರು ಚೆಲ್ವ ।
ಪಿಳ್ಳೆ ಬಾರೆನೆ ನಿನ್ನ ಬೆಂಬಳಿಯು ಬರಲು ।
ಉಲ್ಲಾಸದಿಂ ಯಾದವಾದ್ರಿಗೈದಿಸಿ ಚೆಲ್ವ ।
ಪಿಳ್ಳೆರಾಯಗೆ ನೀ ಪಿತನೆಂದೆನಿಸಿದೆ ॥ ೩ —೭—

ಗುರುಪರಂಪರಾಸಪ್ತಪದಿ ಸಂಪೂರ್ಣಂ.

— ಸಪ್ತಪದಿ — II.

ಬಾನುದ್ದಂ ಬಳೆದಿರ್ಪ ಮದ್ದಗಿರಿಯಂ ದಾಂಟಿಟ್ಟವಂ ಬಂದನಿ |
ನ್ನೇನಾನುಂ ಗಿರಿದುರ್ಗದೊಳ್ ಮಲೆಪೆವೆಂಬೀಯಾಸೆ ಬಲ್ಮೋಸಮೆಂ ||
ತಾನುಂ ನಿಲ್ವೊಡೆ ಸೊನ್ನೆವೆಟ್ಟನಡರಲ್ವೇಳ್ಕುಂ ರಿಪುಕ್ಷ್ಮಾಧವ |
ರ್ಗಾನಾಕಂಬರವೇಱಲಾಱದೊಡೆ ಪುತ್ತೊಂದುಂಟು ಮತ್ತಲ್ಲಿ ದಲ್ || ೫

ಅಱುವತ್ತುಂಸಾಸಿರಂವಾರುವದೊಡನೆಱುನೂಱಾನೆಮೂಲಕ್ಕವಾಳುಂ
ತುಱುಗಿರ್ಪಾಸೈನ್ಯದಿಂ ಮದ್ದಗಿರಿಗೆ ಮೊದಲೊಳ್ ಮುತ್ತಿ ದಾಚೋಳನಂ ಕೈ||
ಸೆಱೆಗೊಂಡಾಸೊರ್ಕಿನಿಂದುರ್ಕುವರನವರ ದುರ್ಗಂಗಳಂ ಪೋಗ್ಗಳಂ ನೀಂ |
ಸೆಱೆಗೊಂಡೇಂ ಗಂಡರೊಳ್ಗಂಡನೆನಿಪ ಬಿರುದಂ ಬೀರರೊಳ್ಗಂಡ ಕೊಂಡೈ||

ವಚನ || ಲೋಕದೊಳ್ ಕೆಲರ್ ತಾವೆಳಸಿದ ಫಲಮಂ ಸಾಧಿಸುವು ದರ್ಕೆ ತಾವೆಸಗುವ ಕರ್ಮಂ ಮೊದಲಾದುದೇ ಸಾಧನಮೆಂದು ನೆಱೆನಂಬಿ ಯದರ್ಕೆ ಸಹಾಯಮಾಗಿ ಜಗದೀಶ್ವರನಂ ಕೊಂಡಿರ್ಪರ್. ಈ ಚಿಕದೇವ ರಾಯರ್ ತಾವೆಸಗುವ ಕರ್ಮಜ್ಞಾನಭಕ್ತ್ಯಾದಿಗಳೆಲ್ಲನಪ್ಪ ಶ್ರೀಮನ್ನಾ ರಾಯಣಂಗೆ ಮುಱೋಲ್ಲಾಸಮನಾಗಿಸುವೆಸಕಂಗಳೆಂದುಂ ಫಲಪ್ರಾಪ್ತಿಗ ವನೇ ಸಾಧನಮೆಂದುಂ ನಂಬಿರ್ಪರ್. ಈಯರ್ಥಮನೀಯರಡನೆಯ ಸಪ್ತ ಪದಿಯೊಳ್ ನಿರವಿಸುವರ್. ಅದಱೊಳವು ಮೊದಲಾದ ಪಂಚಪದಿಯೊಳೀ ನೆಲೆಯಂ ತಮ್ಮನಾಳ್ಗೊಂಡ ಪಶ್ಚಿಮರಂಗರಾಯಂಗೆ ಬಿನ್ನವಿಸುವರ್.

ರಾಗ—ಕಾಂಬೋಧಿ || ಅಟ್ಟತಾಳ ||

ನಿನ್ನ ನಂಬಿದೆ । ನಿನ್ನ ನಂಬಿದೆ । ನಿನ್ನ ನಂಬಿದೆ ನಂಬಿದೆ ||
ನೀ । ನೆನ್ನ ಸಲಹು ಬಿಡು ನಿನ್ನ ಚಿತ್ತವಿನ್ನು || ಪಲ್ಲವಿ.||

ಚ|| ನೀನಱಿಯದುದೆ ಪೇೞು ।
ನಿನ್ನವನೆಂಬೀಳ್ಗೆಯೊಂದೆನಗೆ ।
ನೀನಲ್ಲದನ್ಯವ ನೆನೆವನಲ್ಲ ಕರ್ಮ ।
ಜ್ಞಾನಭಕತಿವೈರಾಗ್ಯವ ನಂಬಿದವನಲ್ಲ || ೧
ಎಳಮೆಯೊಳ್ ಪರಿದಾಟ ।
ಯೌವನದೊಳು ಯೆಳವೆಣ್ಗಳೊಡನಾಟ ।
ಬೞಿಕ ವಾರ್ಧಿಕದೊಳು ಪಲವೆಡರಿನ ಕಾಟ ।
ತಿಳಿಯೆ ಕರ್ಮಭೋಗ ತೀರದೆಂದಿಗು ರಂಗ || ೨

ವೇದಾಂತಗಳು ಪಲವು ।
ಅವಱೊಳು ವಿವಾದಂಗಳವು ಕೆಲವು ।
ಭೇದಿಸಿ ನೋಡಲು ವೇದ್ಯವಾಗದು ತಲವು ।
ಓದುಗಳಿಂ ಜ್ಞಾನಯೋಗ ಸಾಗದೆಂದಿಗು ॥ ೩

ತನುವ ದಂಡಿಪುದರಿದು ।
ಕರಣಂಗಳ ತಡೆವುದು ಮಿಗೆಯರಿದು ।
ಮನವ ಬಲ್ವಿಡಿವುದು ಮತ್ತಮರಿದರಿದು ।
ನೆನಹಿನೊಳ್ ವೈರಾಗ್ಯ ನೆಲೆಗೊಳ್ಳದೆಂದಿಗು ॥ ೪

ಸಿರಿಯಾಸೆ ಕಡುನಿಡಿದು ।
ಸಗ್ಗದ ನಾಡ ನೆಱೆಯಾಸೆಯೆಡೆಗೊಡದು ।
ಮರಳಿ ಕೈವಲ್ಯದ ಮರುಳು ಬೆನ್ನಬಿಡದು ।
ಪರಮಭಕತಿಯೋಗ ಬಲಿಯುದೆಂದಿಗು ರಂಗ ॥ ೫

—೧—

ವಚನ ॥ ಈ ಯೆರಡನೆಯ ಪಂಚಪದಿಯೊಳ್ ಅಧಿಕಾರದೊಳರ್ಪ ತಾಂ ಬಿಡತಕ್ಕುವಂ ತಮ್ಮ ಮನಮಂ ಸೆಱೆಗೊಂಡ ರಾಯಗೋವಳಂಗೆ ಬಿನ್ನವಿಸುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ನಿನ್ನ(ನ)ಲ್ಲದೆ ನಾನೊಲ್ಲೆನು । ಆ । ನಿನ್ನಮಹಿಮೆಗಳ ಬಲ್ಲೆನು । ನೀ ।
ನಿನ್ನ ಕೈಬಿಟ್ಟೊಡೆ ಸಲ್ಲೆನು । ಸ್ವಾಮಿ । ಚೆನ್ನಿಗ ಚಿಕದೇವೇಂದ್ರವಲ್ಲಭ ಕೃಷ್ಣ ॥ .
॥ ಪಲ್ಲವಿ ॥

ಚ ॥ ಬಱಿಯಾಸೆಗೆ ಬಸವೞಿಯೆನು ।
ಕೆಲಬಲದ ಕೆಸಱುಗಳ ತುೞಿಯೆನು ।
ಕಿಱಿದನೆಸಗಿ ಕೀೞ್ಗಿೞಿಯೆನು ।
ನಿನ್ನನೞಿಯುದರೊಡನಾಡಿಯುೞಿಯೆನು ಕೃಷ್ಣ ॥ ೧

ಮಿತಿಮಿಱಿಯಾಸುರವಣಿಸೆನು ।
ಸಲ್ವ ಮೇರೆಗಳನು ಕಡೆಗಣಿಸೆನು ।
ಇತರದೇವತೆಗಳ ಗಣಿಸೆನು ।
ಅವರೀವ ಫಲಂಗಳನೆಣಿಸೆನು ಕೃಷ್ಣ ॥ ೨

ಮುದ್ರೆಯನೊಮ್ಮೆಯು ಮಿಱೆನು ।
ಮಿಱಿ ಮುಗ್ಗಿ ಪಲವು ಕೊಂಬಿಗೇಱೆನು ।
ಕ್ಷುದ್ರಫಲಂಗಳ ಕೂರೆನು ।
ಕುರ್ತು ಕುಲಕೆ ಕೊಡಲಿಯಾಗಲಾಱೆನು ಕೃಷ್ಣ ॥ ೩

ಮರುಳರೊಡನೆ ಮಾತನಾಡೆನು ।
ಮಿಕ್ಕ ಮಾಯಾವಿಗಳೊಡಗೂಡೆನು ।
ತರವನರಿಯದಾಸೆಮಾಡೆನು ।
ತಪ್ಪುದಾರಿವಿಡಿದು ನಿನ್ನ ಕಾಡೆನು ಕೃಷ್ಣ ॥ ೪ ॥
ಹಲವು ಬಟ್ಟೆಗಳನು ಮೆಟ್ಟೆನು ।
ಅಲ್ಲಿ ಪರಿದಾಟಕೆ ಕಾಸೆಗಟ್ಟೆನು ।
ಒಲಿದು ವಿಷಯಗಳ ಮುಟ್ಟೆನು ।
ಇನ್ನೊಮ್ಮೆಯುಮಿಹದಲ್ಲಿ ಪುಟ್ಟೆನು ಕೃಷ್ಣ ॥ ೫ ॥ — ೨ —

ವಚನ ॥ ಈ ಮೂಱನೆಯ ಪಂಚಪದಿಯೊಳಂತು ಬಿಡತಕ್ಕುವಂ ಬಿಟ್ಟೆನೆಂ ತಾಂ ನಡೆಯತಕ್ಕುವಂ ನಿರವಿಸಿ ಈನೆಲೆ ದೊರೆಕೊಂಡುದಕ್ಕೆ ತನ್ನ ಸಂತಸದೇೞ್ಗೆಯನಾಗೋಪವರರಾಯಂಗೆ ಬಿನ್ನವಿಸುವನ್.

॥ ರಾಗ—ಮುಖಾರಿ ॥ ಆದಿತಾಳ ॥

ಧನ್ಯನಾದೆನು ನಾನಿಂದು ಧನ್ಯನಾದೆನು ।
ಅನ್ಯವನುೞಿದು (ನಾ) ನಿನ್ನಾಳುತನದಿ ನಿಂದೆನು ॥ ಪಲ್ಲವಿ ॥
ಚ ॥ ನಿನ್ನಡಿಗೆ ಪೊಡಮಟ್ಟು । ನಿನ್ನ ದಿವ್ಯನಾಮವಿಟ್ಟು ।
ನಿನ್ನ ಮುದ್ರೆಗಳನಟ್ಟು । ನಿನ್ನ ಪೀಱುಡೆಯುಟ್ಟು ॥ ೧ ॥
ನಿನ್ನಡಿಯೊಲವ ಕಂಡು । ನಿನ್ನೊಱಗವ ಕೈಕೊಂಡು ।
ನಿನ್ನ ಪ್ರಸಾದವನುಂಡು । ನಿನ್ನೊಲ್ಮೆಬಾಗವ ಕೊಂಡು ॥ ೨ ॥
ನಿನ್ನ ಮೂರುತಿಯ ನೋಡಿ । ನಿನ್ನ ಮುಂದೆ ನಲಿದಾಡಿ ।
ನಿನ್ನ ದಾಸರೊಡಗೂಡಿ । ನಿನ್ನಗುಣಂಗಳ ಪಾಡಿ ॥ ೩ ॥
ನಿನ್ನ ಕೂರ್ಮೆಗೆಡೆಯಾಗಿ । ನಿನ್ನವರಡಿಗೆ ಬಾಗಿ ।
ನಿನ್ನೊಲವಿದ್ದಂತೆ ಪೋಗಿ । ನಿನ್ನಾಳನಾಳನಾಳಾಗಿ ॥ ೪ ॥
ಚೆನ್ನಿಗ ಗೋಪಾಲರಾಯ । ಚಿಕ್ಕದೇವೇಂದ್ರವಿಧೇಯ ।
ಸನ್ನುತಮಂಗಳಕಾಯ । ಸಲಹಿದೆಯೆನ್ನನು ಜೀಯ ॥ ೫ ॥ — ೩ —

ವಚನ ॥ ಇಂತು ತಾಂ ಪರಮಪುರುಷನ ಪಾದಾರವಿಂದಂಗಳಂ ನೆಱೆ ನಂಬಿ ನಲ್ಲದುದನುೞಿದು ನಲ್ಪುದನೆಸಗಿ ಅವನೊಲವಂ ಪಡೆದು ಆನಂದದೊಳೋಲಾಡುತ್ತೆ ತನ್ನಂತೆ ಸಕಲಜನರುಂ ಸಂತಸಂಬಡೆಗೆಂದು ಮೇಲೆ ಮೂಱುಂ ಪದಂಗಳಿಂ ಪರೋಪದೇಶಂಗೆಯ್ವರ್. ಅವಱೊಳೀನಾಲ್ಕನೆಯ ತ್ರಿಪದಿಯೊಳೀಯಧಿಕಾರಿಯ ನಡತೆಗಳಂ ತಿಳಿಪಿ ಇಂತು ನಡೆವರ್ಗೆ ಸಿರಿ

ಯರಸನೊಲವಪ್ಪುದು ತಪ್ಪದೆಂಬುದರ್ಕೆ ತನ್ನೊಲ್ಮೆಗಂ ಬಡನಾಟಕ್ಕಂ ಕೆಳೆಗಂ ಕೇಳಿಗಂ ನೆರವಿಗಂ ನೇಹಕ್ಕಂ ನಲ್ಮೆಗಂ ನಂಬುಗೆಗಂ ನೆಲೆವೀಡೆನಿಸಿ ನೆಗೞ್ತೆವೆತ್ತ ತಿರುಮಲಾರ್ಯರಂ ದೃಷ್ಟಾಂತಂಗೆಯ್ದು ದೃಢೀಕರಿಸಿ ತಮ್ಮ ಯದುಕುಲದೇೞ್ತ್ರವನಾಳ್ಗೊಂಡ ಯಾದವಗಿರಿನಾರಾಯಣನಡಿದಾವರೆಗಳಂ ನಂಬಿ ಬಾೞ್ವೊಂದು ಪೆರ್ಗುಪದೇಶಂಗುಡುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ಪಾದವ ನೆರೆನಂಬಿ ಬದುಕಿರೊ । ನಮ್ಮ ಯಾದವನಾರಾಯಣನ ದಿವ್ಯಶ್ರೀ ॥ಪಲ್ಲವಿ॥

ಚ॥ ಹಿಂದಣ ನಡತೆಗೆ ಹೇಸಿರೊ ।
ಮುಂದೆ ನಿಂದೆ ಬಾರದವೊಲು ನೀಸಿರೊ ।
ನೀವಿಂದು ಮೊದಲು ಕುಲಕೀೞಾಗೆಯಪ್ಪಂತೆ ।
ಒಂದೆ ದಿಟವ ಪಿಡಿದುತ್ತಮರೆನಿಸಿರೊ ॥ ೧ ॥
ನಿಮ್ಮ ನೆಲೆಯ ನೀವೆ ತಿಳಿಯಿರೊ ।
ತಿಳಿದೊಮ್ಮದ ನಡತೆಯನುೞಿಯಿರೊ ।
ಬಲುಹಮ್ಮುಹೆಮ್ಮೆಗಳನು ಹೞಿಯಿರೊ ।
ಸಜ್ಜನ ಸಮ್ಮತವಪ್ಪಂತೆ ಸನ್ಮಾರ್ಗವಿಡಿಯಿರೊ ॥ ೨ ॥
ಕರ್ಮದ ಬಿಱುಗಂಟ ಕಳೆಯಿರೊ ನಿಮ್ಮ ।
ದುರ್ಮತಿಧೂಳಿಯ ತೊಳೆಯಿರೊ ಮಿಗೆ ।
ನಿರ್ಮಲಚಿತ್ತದಿ ನೇಮವಿಡಿದು ನಮ್ಮ ।
ತಿರ್ಮಲಾರ್ಯರಂತೆ ಸ್ಥಿರವಾಗಿ ಬಾೞಿರೊ ॥ ೩ ॥ — ೪ —

ವಚನ॥ ಈ ಐದನೆಯ ಏಕಪದಿಯೊಳೀಯಧಿಕಾರಿಗಳ್ಗೆ ಸಗುವೆಸಕಂಗಳೊಳಾವಶ್ಯಕಂಗಳಾದುವಂ ನಿರವಿಸುವರ್.

॥ ರಾಗ—ಕಾಂಬೋಧಿ ॥ ಆದಿತಾಳ ॥

ಪಾದಂಗಳನೆ ನಂಬಿರೊ ದಿಟವಿಡಿದು । ಪಾದಂಗಳನೆ ನಂಬಿರೊ ॥ (ಪಾದಂಗಳನೆ ನಂಬಿರೊ ಪಾದಂಗಳನೆ ನಂಬಿರೊ) ॥ ಪಲವ ಪಂಬಲಿಸದಿರಿರೊ । ಶ್ರೀದೇವಿಯರಸ ನಮ್ಮ ಯಾದವನಾರಾಯಣನ ॥ ಪಲ್ಲವಿ ॥

ಚ॥ ನಮ್ಮ ನಡತೆಗಳಿಂದ ನಾವು ಕಡೆವಾಯ್ವೆವೆಂಬ ।
ಹಮ್ಮ ಹೞಿದು ಬಿಸುಡಿರೊ । ಬಿಱುಗೆಯ್ಮೆಗಳ ।
ನೆಮ್ಮಿನೆಲೆಗೆಡದಿರಿರೊ ಭಾರವಿೞುಹಿ ।
ಸುಮ್ಮನಿದ್ದು ಸೊಗವಡಿಯಿರೊ ಲೋಗರಿರಾ ॥ ೧ ॥ — ೫ —

ವಚನ ‖ ಈ ಆಱನೆಯ ಪಂಚಪದಿಯೊಳೀಯಧಿಕಾರಿಗಳ್ಗೆ ಪರಮ ಪುರುಷನನುಗೊಳಿಸುವ ಸಕಲಶ್ರೇಯಸ್ಸುಗಳಂ ನಿರವಿಸುವರ್.

‖ ರಾಗ—ಬಾಪಿ ‖ ತಾಳ ರೂಪಕ ‖

ನಂಬು ನಂಬು ನಂಬು ನೆರೆ ನಂಬು । ನಂಬು ಶ್ರೀಕೃಷ್ಣಪದಾಂಬುಜಂಗಳ
ಹಂಬಲಿಸದಿರು ಹಲವನು ‖ ಪಲ್ಲವಿ ‖

ಚ ‖ ಕರಣದೋಷಂಗಳ ಕಳೆವನು । ಕಲ್ಮಷವನೆಲ್ಲ ತೊಳೆವನು ।
ಪಿರಿಯರ ಸಂಗತಿಗೆಳೆವನು । ಪೆತ್ತೆನೆಂದೀಱಗೆದಳೆವನು ‖ ೧ ‖

ಪಿಂತಣ ತಪ್ಪ ಮಱೆವನು । ಬೇಡಿದುದನೆಲ್ಲ ಕಱೆವನು ।
ಅಂತರಂಗದೊಳು ಮೆಱೆವನು । ಆನಂದರಸವನೆಱೆವನು ‖ ೨ ‖

ಕರ್ಮದ ಬೇಱ ಕಡಿವನು । ಕಾಲನ ಬಾಯು ಬಡಿವನು ।
ನಿರ್ಮಲಮತಿಯ ಕೊಡುವನು । ನೆವವಿಲ್ಲದಕ್ಕಱವಡುವನು ‖ ೩ ‖

ಪುರುಳುಗೊಳಿಸಿ ಪೊರೆವನು । ಪೊಸಪೊಸಬೇಟದಿ ಬೆರೆವನು ।
ಎರೆಹೊರೆಯಿಲ್ಲದಿರುವನು । ಎಚ್ಚದ ದಾರಿಗೆ ಬರುವನು ‖ ೪ ‖

ಚಿಕದೇವರಾಯನ ದೇವನು । ಸೇವಕಜನರ ಜೀವನು ।
ಸಕಲವಿಧದೊಳು ಕಾವನು । ಸರ್ವಾಭೀಷ್ಟವನೀವನು ‖ ೫ ‖ — ೬ —

ವಚನ ‖ ಈ ಯೇೞನೆಯ ತ್ರಿಪದಿಯೊಳ್ ತನಗಂ ತನ್ನ ಕೆಳೆಯರ್ಗಂ ಸರ್ವಾಭೀಷ್ಟಮಂ ಸಾಧಿಸುವುದಕ್ಕೆ ಸಿದ್ಧೋಪಾಯವಾಗಿರ್ಪ ಶ್ರೀಕೃಷ್ಣನಡಿದಾವರೆಗಳಂ ಪೊಗೞ್ದು ಬಿಱಿಸುವರ್.

‖ ರಾಗ—ಯರಕಲಕಾಂಬೋಧಿ ‖ ಝಂಪೆತಾಳ ‖

ಪಾದವೆಚ್ಚಱಿಕೆ । ಪಾದವೆಚ್ಚಱಿಕೆ (ಪಾದವೆಚ್ಚಱಿಕೆ) । ಶ್ರೀಪಾದಾವಧಾನ
ಗೋಪಾಲ ಚಿಕದೇವ ಚಿಕದೇವಭೂಪಾಲಪರಿಪಾಲ ‖ ಪಲ್ಲವಿ ‖

ಚ ‖ ಸಿರಿರಾಣಿಯೊಲವಿಂದ ಸೇರಿಯೊತ್ತುವ ಪಾದ ।
ಪುರುಳೆನಿಸಿ ವೇದದೊಳು ಪೊಳೆವ ಪಾದ ।
ಸರಸಿಜಧ್ವಜಶಂಖಚಕ್ರಲಾಂಛಿತಪಾದ ।
ಪರಮಯೋಗೀಶ್ವರರು ಭಾವಿಸುವ ಪಾದ ‖ ೧ ‖

ಅವನಿಯಾಕಾಶಗಳನಳೆದು ಪೆರ್ಚಿದ ಪಾದ ।
ದಿವಿಜನದಿಯುನು ಪಡೆದ ದಿವ್ಯಪಾದ ।
ಶಿವನ ಪಾವನಗೆಯ್ದು ಶಿವನೆನಿಸಿದೀಪಾದ ।
ಕನಿದು ಕಲ್ಲಿಗೆ ಜೀವಕಳೆಯಿತ್ತ ಪಾದ ‖ ೨ ‖

ಪರಿದು ಕುರುದೂತ್ಯದೊಳು ಬಣ್ಣವೇಱಿದ ಪಾದ ।
ಪರಿಪರಿಯ ಭಯವ ಪರಿಹರಿಪ ಪಾದ ।
ತಿರುಮಲಾರ್ಯರಿಗೆ ಕುಲದೇವರೆನಿಸಿದ ಪಾದ ।
ನರಪತಿಗೆ ಶರಶರದಿ ನಲವೀವ ಪಾದ ॥ ೭ ॥ — ೬ —

ನಂಬುಗೆಯ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — III —

ವನಜಾಕ್ಷಂ ಕಣಿಯಂದವಿಂ ತಿಸುಳಿ ಬಿಲ್ಲಾಳಂದದಿಂ ಪಂಕಜಾ ।
ಸನನುಂ ಸಾರಥಿಯಂದದಿಂ ತ್ರಿಪುರಮಂ ದಾಳಿಟ್ಟರಾಮೂವರೊಂ ॥
ದೆಸಿಸಿರ್ದೀಚಿಕದೇವನೊರ್ವನವಟಂದಂ ತೂಳ್ದಿದಂ ಚೆನ್ನರಾ ।
ಯನ ದುರ್ಗಂ ಮಿಡಿಗೇಶಿ ಮದ್ದಗಿರಿಯಂಬೀಮುಪ್ಪೊಳಿಲ್ಬಿಂಕಮಂ ॥
ಪರಿವಿನಮೊಳ್ದು ಮದ್ದಗಿರಿದುರ್ಗದ ಕೋಂಟೆ ಸುರಂಗದಿಂದಮಾ ।
ಪುರಮವರತ್ತಲಿತ್ತಲಹರುತ್ತಿರೆ ವಿರಾಜಿ ಸಮೀರವರ್ತ್ಮದೊಳ್ ॥
ಧರೆಯವರಂದಿನಿಂದಮರನೇ ಗಗನೇಚರರೆಂಬರಲ್ತೆ ಮೇಣ್ ।
ಪರಿಸರಿದೆಂತುಟಪ್ರತಿಮ ಕೇಳ್ ದಿನದಲ್ಲಿಯೊಱಂಕೆಯಿಲ್ಲದೇ ॥

ವಚನ॥ ಪೂರ್ವಸಪ್ತಪದಿಯೊಳ್ ಶ್ರೀಮನ್ನಾರಾಯಣನ ಚರಣಂಗಳೇ ಮೋಕ್ಷೋಪಾಯಮೆಂಬುದಂ ಪ್ರಕಾಶವಾಗಿ ಪೇಳ್ದರ್. ಈ ಮೂಱನೆಯ ಸಪ್ತಪದಿಯೊಳೀಯರ್ಥಮನಿಬರ್ಗಂ ಮನಂಗೊಳ್ವಂತೆ ಕಾಮುಕ ವ್ಯಾಪಾರಮಂ ನೆವಂಗೆಯ್ದು ಅನ್ಯಾಪದೇಶದಿಂ ದೃಢೀಕರಿಸುವರ್. ಅದೆಂತೊಳೊರ್ಮೊದಲ ತ್ರಿಪದಿಯೊಳ್ ಶ್ರೀಕೃಷ್ಣನ ರೂಪಾತಿಶಯಕ್ಕಂ ಕಲ್ಯಾಣ ಗುಣಂಗಳ್ಗಂ ಮನಂ ಸೋಲ್ತವಳ್ ಬಯಸಿದ ತಮ್ಮ ಪೆಣ್ಗಳ ನೆಲೆಗಂತರಂಗದೊಳ್ ಸಂತಸಂದಳೆದು ಬಹಿರಂಗದೊಳ್ ತಾಮದಕ್ಕೊಡಂಬಡದಂತಿರ್ದ ಅವಳ ಪ್ರೇಮಮಂ ಪರೀಕ್ಷಿಸಿಯವನೊಲವಂ ಪಡೆದ ನಡತೆಗಳಂ ತಿಳಿಪುವ ವೃದ್ಧಗೋಪಿಯರ ನುಡಿಗಳಂ ನೆವಂಗೆಯ್ದು ಅನ್ಯಾಪದೇಶದಿಂದಿವರುಂ ಶ್ರೀಮನ್ನಾರಾಯಣನ ಗುಣಾತಿಶಯಮಂ ಕೇಳ್ದು ತಿಳಿದು ವೈಷ್ಣವರೆನಿಸಿ ಬಾಳೆಳಸಿದ ಲೋಗರ ನೆಲೆಗಾಣಂದಂಬಡೆದಿವರ್ಗೆ ವೈಷ್ಣವಾಚಾರಮನುಪದೇಶಿಸೆನೆಂದು ಪೂಣ್ದು ಪ್ರೊಱಗಣ್ಗೆ ಮಧ್ಯಸ್ಥವೃತ್ತಿಯನನುಭವಿಸುತ್ತಿಂತು

ನಡೆವವರ್ಗೆ ಸ್ವಾಮಿಯೊಲವಪ್ಪುದಾದೊಡಂ ಈ ನಡತೆಯರಿದುವಱಿಂ ಮನಮಂ ಬಳ್ಪಿಡಿದು ತಪ್ಪದೆ ನಡೆಯನೇೞ್ಪುದೆಂದು ಪೇೞ್ದರ್.

॥ ರಾಗ—ಕಾಂಬೋಧಿ ॥ ಆದಿತಾಳ ॥

ಇಂದಿರೇಶನೊಡನಾಟವೆಮ್ಮ ಹವಣೆ । ಎನ್ನ ಕಂದ ಕೇಳವನನೇಸ್ತ (?) ಕಡುಗಧಾರೆಯು ನಟಣ ॥ ಪಲ್ಲವಿ ॥

ಚ ॥ ತನುವಿಗೆ ಹಿತವೆನಿಪ ತವಕಿಗರೊಡನಾಡದೆ ।
ಮನವಾರತೆಯೊಳು ಮಿಗೆ ಮನವ ನಿಲ್ಲಿಸದೆ ।
ಜನನಿಜನಕಾದಿಯಾದ ಜನ್ಮಬಂಧುತೆಯ ತೊಱೆದು ।
ಅನಿತರಭಕ್ತಿಯೊಳಿರೆ ಅಂದಿಗೊಲಿವನು ಗಡ ॥ ೧ ॥
ಎನಗುವೆನೆಲ್ಲವನೆಂದು ಹೆಕ್ಕಳದೊಳೆಸಗದೆ ।
ಎಸಗಲಾಱೆನೆಂದು ಮಿಗೆ ಹಿಂದೆ ಸಾರದೆ ।
ಎಸಗುವ ಸೇವೆಯನೆಸಗಿಯೆಸಕವಿದೆನ್ನದಲ್ಲೆಂದು ।
ಹಸನೆಡದಂತೆವ್ವೊಲಿರೆ ಅಂದಿಗೊಲಿವನು ಗಡ ॥ ೨ ॥
ಪರಿಪರಿ ಲೋಗರವೊಲು ಪಲಭೋಗವ ಬಯಸದೆ ।
ತರವಳಿಯು ತನ್ನ ಸ್ವಾತಂತ್ರ್ಯವನೆಣಿಸದೆ ।
ತಿರುಮಲೆಯಾರ್ಯಾದಿ ದಿವ್ಯದೇಶಿಕರಾಣತಿವಿಡಿದು ।
ಅರಮಱೆಯಿಲ್ಲದಂತಿರೆ ಅಂದಿಗೊಲಿವನು ಗಡ ॥ ೩ ॥ —೧—

ವಚನ ॥ ಈ ಎರಡನೆಯ ತ್ರಿಪದಿಯೊಳ್ ಸಕಲಚೇತನರಂ ರಕ್ಷಿಪೆನೆಂದಿರ್ಪ ಶ್ರೀಮನ್ನಾರಾಯಣನಿವರ ನಡತೆಯೊಳ್ ಸುಕೃತಮೊಂದು ಪೆಸರಿಡಲ್ಕಕ್ಕುದೆಂದು ಯಾದೃಚ್ಛಿಕಪ್ರಾಸಂಗಿಕವಾದ ನಡತೆಯಂ ನೆವಂಗೆಯ್ದು ಇವರ್ಗೆ ತನ್ನೊಳ್ ವೇಷಾಭಿಮುಖ್ಯವಂ ಬಳೆಯಿಸಿ ಮುಕ್ತಿಪರ್ಯಂತವಾಗಿ ದಯೆಗೆಯ್ವನೆಂಬರ್ಥವಂ ತನ್ನ ಪೆಣ್ಗಳಂ ಮರುಳ್ಗೊಳಿಸಿ ದಕ್ಕುಗೊಂಡ ಶ್ರೀಕೃಷ್ಣನಂ ದೂಱುವ ವೃದ್ಧಗೋಪಿಯರ ವಚನವ್ಯಾಜದಿಂ ವಿವರಿಸುವರ್.

॥ ರಾಗ—ಭೈರವಿ ॥ ತಾಳ ಝಂಪೆ ॥

ಮಾಯಕಾಱಗೆ ಮಗಳು ಮಾಱುವೋದಳಕಟ ।
ಬಾಯ ಮಾತಿಗೆ ನುಡಿಯೆಬಂದಿಗೆಯ್ಯದೆ ಬಿಡನು ॥ ಪಲ್ಲವಿ ॥

ಚ ॥ ನೆನೆದೊಡನೆ ಮನದೊಳಗೆ ನೆಲಸಿ ಮುನ್ನಿನ ಕೆಲಸ್ವ ।
ನೆನಹುಗಳನೆಲ್ಲವನು ನೀಕರಿಸುತ ।
ದಿನದಿನಕೆ ತನ್ನಡಿಯ ಸೇವೆಯೊಳು ತವಕವನು ।
ಕೊನರುಗೊಳಿಸುತ ಕೆಱೆಂದುಕೂಗಿಸದೆ ಬಿಡನು ॥ ೧ ॥

ಪೞಯರೊಡನಾಡಿಸುತ ಪಲವಗೆಯ ಬೋಧನೆಯ ।
ಬಳೆಯಿಸುತ ಪದವಱಿತು ಬಸಗೆಯ್ಯುತ ।
ಬೞಿಕ ವಿರಹಾಗ್ನಿಯನು ಪರ್ಬಿಸುತ ಮನದಳವ ।
ಹಿಱಿಹಿಱಿದು ವೇಗದೊಳು ಹಿಪ್ಪೆಗೆಯ್ಯದೆ ಬಿಡನು ॥ ೨ ॥

ಪರಿಪರಿಯ ಭವಸುಖವ ಬಯಲೆನಿಸಿ ಸ್ವಾತಂತ್ರ್ಯ ।
ದಿರವ ತೊಲಗಿಸಿ ತನ್ನೊಳೇಕಪೆನಿಸಿ ।
ತಿರುಮಲಾರ್ಯಾದಿ ವರದೇಶಿಕರ ಮತದಿ ಪರಿ ।
ಚರಣದೊಳು ತಣ್ಣನೇ ತಣಿಯಿಸದೆ ಬಿಡನು ॥ ೩ ॥ — ೩ —

ವಚನ॥ ಈ ಮೂಱನೆಯ ದ್ವಿಪದಿಯೊಳ್ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗಂಗಳ್ ಮೊದಲಾದ ಮೋಕ್ಷೋಪಾಯಂಗಳನಾಚರಿಸುವರ್ ತಮ್ಮಂತೆ ತಿಳಿವುಂ ನಡತೆಯುಮಿಲ್ಲದೆ ಬಱಿದೆ ಪ್ರಪನ್ನರಪ್ಪವರ್ಗೆ ಸಕಲ ಸಾಂಸಾರಿಕದುಃಖನಿವೃತ್ತಿರೂಪವಾದ ಮೋಕ್ಷಾನಂದಂ ಬರ್ಪ ತೆಱನಾವುದೆಂದಾಕ್ಷೇಪಿಸಿ ಪ್ರಪನ್ನರ್ಗೆ ಮೋಕ್ಷೋಪಾಯವಾದ ಶ್ರೀಮನ್ನಾರಾಯಣನೇ ತನ್ನ ಜ್ಞಾನಶಕ್ತ್ಯಾದಿಗುಣಂಗಳಿಂದಾ ಪ್ರಪನ್ನರ್ಗೆ ಸಕಲಸಾಂಸಾರಿಕ ದುಃಖಂಗಳಂ ಕಳೆದು ಮೋಕ್ಷಾನಂದಮನನುಗೊಳಿಸುವನೆಂಬ ಪರಿಹಾರಮಂ ತಂತಮ್ಮ ಗುಣಂಗಳಂ ಬೆಱೆತು ದೂಱಿ ನುಡಿವ ಸವತಿಯರಂ ಕುಱಿತು ಶ್ರೀಕೃಷ್ಣನಂ ನೆರೆನಂಬಿಯುವನೊಲವಂ ಪಡೆವ ಗೋಪಿಯೊರ್ವಳ್ ನುಡಿವ ನುಡಿಯುಂ ನೆವಂಗೆಯ್ದು ದೃಢೀಕರಿಸುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ಎನ್ನ ದೋಷಂಗಳನೆಣಿಸಿ ನೋಯದಿರಿ ನೀವೆನ್ನಾಳ್ದ ಚಿಕದೇವೇಂದ್ರ ಗೋ
ಪಾಲಕನುನ್ನತಿಯನು ನೆನೆದೆನ್ನೇೞ್ಗೆಗೊಡಬಡಿ ॥ ಪಲ್ಲವಿ ॥

ಚ॥ ಗುಣವಿರೆ ಕೊರ್ವರು ಕೊಱತೆಡೆಯೊಳು ಮಿಗೆ ಗುಣಗಣಗಳನನುಗೊಳಿಪರು
ಮಿರರೆ । ಗುಣಕೆ ಕೊರತೆನು ನಿಮ್ಮ ಕೊರ್ಮೆಯಿಂದೆನ್ನೊಳು ಗುಣವನೆಣಿಪ
ನಿಲ್ಲಿ ಕೋಪವೇತಕೆ ನಿಮಗೆ ॥ ೧ ॥

ಗುಣ ಪಿರಿದಾಗೆ ದುರ್ಗುಣವ ಮೆಟ್ಟುವುದವಗುಣ ಪಿರಿದಾಗೆ ಸದ್ಗುಣವ
ಮೆಟ್ಟುವುದು । ಗುಣಿಗಳರಸನ ಸದ್ಗುಣಂಗಳೆನ್ನಯ ದುರ್ಗುಣವ ಮೆಟ್ಟಿದು
ನಿಲ್ಲಿ ಕೋಪವೇತಕೆ ನಿಮಗೆ ॥ ೨ ॥ — ೩ —

ವಚನ॥ ಈ ನಾಲ್ಕನೆಯ ತ್ರಿಪದಿಯೊಳ್ ಮೂಱನೆಯದ್ವಿಪದಿಯೊಳ್ ಪೇೞ್ದರ್ಥಮಂ ಮೂಱುಂ ದೃಷ್ಟಾಂತಂಗೆಯ್ದು ತೋಱಿ ದೃಢೀಕರಿಸುವರ್.

॥ ರಾಗ— ಖಾಬಿ ॥ ಅಟ್ಟತಾಳ ॥

ಅಱಿತು ಅಱಿಯರೆನ್ನ ಕೃತಂಗಿಯರು। (ಅಱಿತು ಅಱಿಯರೆನ್ನ ಕೃತಂಗಿಯರು)। ಎನ್ನೆಱೆಯ ಶ್ರೀ ಚಿಕದೇವೇಂದ್ರನೆನ್ನಲ್ಲಿ ಕಱುಪುಗೊಳುವೊಡೊಂದು ಗುಣವಿಲ್ಲದಿರ್ದೊಡೆ। ಎಱಕದೊಳಿರೆ ನೋಡಿಯಾಪರಿ ಮಱುಗುವ॥ಪಲ್ಲವಿ॥

(ವಚನ ॥ ಈ ಪಲ್ಲವಿಯೊಳ್ ಚಿಕದೇವೇಂದ್ರ, ಎಂಬುದಱೊಳ್ ಚಿಕದೇವನೆಂದು ವಿನಯದಿಂ ತಮ್ಮಂ ಪೆಸರ್ಗೊಂಡು ಇಂದ್ರನೆಂಬುದಱಿಂ ತಮಗಾಳ್ದನಪ್ಪ ಶ್ರೀಕೃಷ್ಣನಂ ಪೇೞ್ವರ್.)

ಚ॥ ಸೊಬಗಿಯೆ ಸುಗುಣೆಯೆ ಸೊಗಸುಗಾತಿಯೆ ಪೇೞ್। ಈವಳಿಗೇತಕೆ ಹೆಮ್ಮೆಯಿಂ ದಱಲುವರು। ಕುಬುಜೆಗೊಲಿದು ಮೆಯ್ಯ ಕೊಂಕುಗಳನು ತಿದ್ದಿ। ಸೊಬಗಿಯೆನಿಸಿಯಾಳ್ದ ಸುಗುಣಗೋವಳನಂತೆಂದು ॥೧॥

ಸರಸಿಯೆ ಚದುರೆಯೆ ಚೆಲ್ಲಗಾತಿಯೆ ಈ। ಪರಿಯೇೞ್ಗೆಯೇಕೆಂದು ಬಣ್ಣಗುಂದುವರು। ಕರಡಿವೆಣ್ಣನು ಪಟ್ಟದರಸಿಯರೊಳು ಸರಿ। ವೆರಸಿಯಾಳಿದ ಸಿರಿಯರಸಗೋವಳನಂತೆಂದು ॥೨॥

ತಲೆನೆಲೆಯಱಿತೊೞಗವನೆಸಗುವಳೆಯಾ । ಯಲಸೆಗಿಂತೇತಕೆಂದಳವುಗುಂದುವರು । ಪೊಲಬಱಿಯದ ಗೋಪಲಲನೆಯರಿಗೆ ಜಾಣ್ಮೆ। ಗಲಿಸಿಯಾಳಿದ ಪೆಂಪುಗಾಱ ಗೋವಳನಂತೆಂದು ॥೩॥ — ೩ —

ವಚನ॥ ಉಪಾಯಾಂತರನಿಷ್ಠರೆನಿಪರ್ ಪ್ರಪನ್ನರಂ ನಿಂದಿಸಿದೊಡಂ ಅವರ್ಗೆ ಶಮದಮಾದಿಗುಣಂಗಳ್ ಉಂಟಾಗಿರ್ಪುದಱಿಂ ನಿಂದಕರೊಳ್ ಕೋಪಂ ಪುಟ್ಟದು ; ಮತ್ತಂ "ಎಮ್ಮೊಳೇನಾನುಂ ದೋಷಮಿರ್ಪುದಱಿಂ ದೈಸೆ ನಿಂದಿಪರ್. ಅದಱಿಂದಾದೋಷಮಂ ಪರಿಹರಿಪುದು" ಎಂದು ಸ್ವಾಮಿಗೆ ಬಿನ್ನವಿಸುವರ್. ಈಯರ್ಥಮನಿವರುಂ ಈಐದನೆಯ ತ್ರಿಪದಿಯೊಳ್ ತಿಳಿಪುವರ್.

॥ ರಾಗ—ಮುಖಾರಿ ॥ ಅಟ್ಟತಾಳ ॥

ನಿಂದೆಗೆಯ್ವರು ಮಿಗೆ ನಿಂದಿಸುತಿರಲಿ ॥ ಪಲ್ಲವಿ॥

ಚ॥ ನಿಂದೆಗೆಯ್ವರು ಮಿಗೆ ನಿಂದಿಸಲೆಮಗದ। ಱಿಂದ ಕೊಱತೆಯಾವುದದಕೆ ಬಿನ್ನವಿಸೆನು। ನಂದಕಾಯುಧ ನಿನ್ನ ನಲ್ಲಡಿಗವರಿಸಿ। ದಂದುಗೆಯೊಳು ಕಡೆಯೊಂದಿರೆ ಚಿತ್ತಕೆ। ಬಂದ ಪರಿಯೊಳದ ಬಣ್ಣಿಗೆಯ್ವುದು ಲೇಸು ॥೧॥

ಪೊಲ್ಲದ ನುಡಿಗಳ ಸೊಲ್ಲಿಸುತಿರಲಿ ॥ ಪಲ್ಲವಿ॥

ಚ॥ ಪೊಲ್ಲದ ನುಡಿಗಳ ಸೊಲ್ಲಿಸುತಿರ್ದೊಡ। ಮಿಲ್ಲವೆಮಗೆ ಹೀನವದಕೆ ಬಿನ್ನವಿ

ಸೆಸು । ಬಲ್ಲರ ಬಲ್ಲಹ ಪಾವನವಹ ನಿನ್ನ । ಮೆಲ್ಲಡಿದಳದೊಳು ಮಿನುಗುವ ರೇಖೆ। ಗಳಲ್ಲಿ ಧೂಳಿರೆ ತೊಡೆದನುಗೆಯ್ವುದು ಲೇಸು ॥ ೨॥

ಬೈದೊಡೆ ಬೈದರ ಬಾಯಿ ನೊಂದಪುದು ॥ ಪಲ್ಲವಿ ॥

ಚ॥ ಬೈದೊಡೆ ಬೈದರ ಬಾಯಿ ನೊಂದಪುದೆಮು । ಗಾದ ಕೋಪತೆಯಾವುದ ದಕೆ ಬಿನ್ನವಿಸೆನು । ಯಾದವನಾರಾಯಣ ನಿನ್ನ (ದಿವ್ಯ) ಶ್ರೀ । ಪಾದ ಸೋಂಕಿದ ರನ್ನ ಪಾವುಗೆ ಮಾಸಿರೆ । ಆದರದಿಂದದನನುಗೆಯ್ವುದು ಲೇಸು ॥ ೩ ॥

ವಚನ ॥ ಈ ಅಂನೆಯ ತ್ರಿಪದಿಯೊಳ್ ಜ್ಞಾನಿಗಳ್ಗೆ ಭಯಂ ಪುಟ್ಟುವುದ ರ್ಕಂ ಪುಟ್ಟಿದ ಭಯಂ ಪರಿಹಾರಮಪ್ಪುದರ್ಕಂ ಕಾರಣಂಗಳಂ ಸಿರವಿಸುವರ್.

॥ ರಾಗ—ಕಾಂಬೋಧಿ ॥ ತಾಳ ತ್ರಿವುಡೆ ॥

ತನ್ನ ನೆನೆವುದು ಜೀವ ತಲ್ಲಣಿಪುದು । ಕೂಡೆ ನಿನ್ನ ನೆನೆವುದೊಯ್ಯನೆ ನೆಲೆಗೆ ನಿಲ್ಲುವುದು ॥ ಪಲ್ಲವಿ ॥

ಚ ॥ ಪುದಿದ ತೊವಲು ಕಂಡ ಮಿದುಳೆಲುನರಗಳಿಂ ।
ದೊದವಿದೊಡಲ ನೆನೆದೋಜಲುವುದು ।
ಹೃದಯಮಧ್ಯದಿ ನಿಂತು ಹಿತವನೆಸಗುವ ನಿನ್ನ ।
ನೆರ್ದೆಗೊಳಿಸುತೊಯ್ಯನೆ ಹೆಕ್ಕಳಿಸುವುದು ॥ ೧ ॥

ಉಲಿಸೊಂಕುಸವಿರೂಪೊಳುಗಂಪಿಗೆಜಗುವ ।
ಪಲವು ಕರಣಗಳಳೆಗಲಸುವುದು ।
ಸಲುವ ವಿಷಯ ನಿನ್ನ ಚರಣಕರ್ಪಿತಮೆಂಬ ।
ನೆಲೆಯ ತಿಳಿದೊಡನೆ ನಲವೇಱುವುದು ॥ ೨ ॥

ಮರಳಿ ಮರಳಿ ತಾನು ಮಾಡುವ ಪಾಪಂಗಳ ।
ಜಱುಬ ನೆನೆದು ಮಿಗೆ ಬೆದಱುವುದು ।
ನರಪತಿ ಯದುಕುಲನಾಥ ತೇರೇಱು ನೀ ।
ನೊಜುದೊಂದು ನುಡಿಯಱುತುರ್ಬಿ ಕೊರ್ಬುವುದು ॥ ೩ ॥ — ೬ —

ವಚನ ॥ ಇಂತು ನಿರ್ಭಯದೊಳಿರ್ಪ ತಮ್ಮ ಮನೋರಥಂಗಳ್ ನೀಯೋಜನೆಯ ತ್ರಿಪದಿಯೊಳ್ ನಿರವಿಸುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ಐಸಿರಿಯೆನಗೆಂದಿಗಪ್ಪುದೊ । ನಿನ್ನ ದಾಸಾನುದಾಸರ ದಾಸನೆನಿಪುದೊಂದೈ ॥ ಪಲ್ಲವಿ ॥

ಚ॥ ನಿನ್ನ ಮೈಮೆಗೇಳುತ ನಿನ್ನನೇ ಪೊಗಳುತ ।
ನಿನ್ನ ನೆನ್ನೆರ್ದೆಯೊಳು ನೆಲೆಗೆಯ್ಯುತ ।
ನಿನ್ನ ಕಣ್ಗೊಳಿಸುತ ನಿನ್ನನೇ ಪೂಜಿಸುತ ।
ನಿನ್ನ ಚೆನ್ನಡಿಗಳನೆನ್ನ ಮುಡಿಯೊಳಾನುವೆ ॥ ೧

ಒಮ್ಮೆ ವೀಳೆಯುವೀಯುತೊಮ್ಮೆ ಪನ್ನೀರ್ಗುಡು ।
ತೊಮ್ಮೆ ನಲ್ವಡಿಗವನೊದವಿಸುತ ।
ಒಮ್ಮೆ ಚವರವೀಸುತೊಮ್ಮೆ ಪಾವುಗೆಯಿಡು ।
ತೊಮ್ಮೆ ಬಿರುದುಗಳನುಗ್ಗಡಿಸುತ ನಡೆವೆ ॥ ೨

ಎನ್ನೆಳಕದ ಕೆಳೆಯೆಂದೆರೆಹೊರೆಯಿಲ್ಲ ।
ದೆನ್ನ ನಿನಗೆ ಕಾಣ್ಕೆಯಿತ್ತು ಸೊರ್ಕಿ ।
ಎನ್ನಾಳ್ದ ಚಿಕದೇವೇಂದ್ರವಲ್ಲಭ ಕೃಷ್ಣ ।
ಯೆನ್ನ ಭಾರವನೆಲ್ಲಮಿಳುಪಿ ಸೊಗದೊಳಿರುವೆ ॥ ೩ —೭—

ಅನ್ಯಾಪದೇಶಸಪ್ತಪದಿ ಸಂಪೂರ್ಣಂ.

— ಸಪ್ತಪದಿ — IV.

ಮುನ್ನಾದೇವೇಂದ್ರನಿನ್ನಂದುಱಿಪಿದ ಪಲವುಂ ಬೆಟ್ಟುಗಳ್ ಬಿಂಜಮೆಂಬೀ ।
ಗನ್ನಂ ಗೊಂಡಾಳ್ದ ನಿಂದಪ್ರತಿಮನೊಳೆ ಸುರಂಗಾಗ್ನಿಸಾನ್ನಿಧ್ಯದೊಳ್ ಗಾ ॥
ಢನ್ನೇಹಂಬೆತ್ತು ಬಲ್ಪಿಂ ನಡೆದುರ್ಬಿದಿರ್ಗಾಲದೊಳ್ ಬಾಳ್ವರಂತಾಗಿ ಕೈವಾ ।
ಳ್ಪನ್ನಂ ನುರ್ಗಾಗಿ ಬೀಳ್ವರ್ ಸುರರಱಿಯದರಾದುರ್ಗದಾಳೊಳ್ಬುಗೆತ್ತರ್ ॥

ಚುರ್ಬ್ಬಿ ಸುರಂಗದೆಳ್ದು ನೆಲಗೋಂಟೆಯನೇಱಿದರಾತಿಗಳ್ ದಿವಂ ।
ಗರ್ಚ್ಚಿತೆ ಕೋಡುಗೋಂಟೆಗುದುರ್ಗಿಂದ್ರನ ಬೀಡುಗೆತ್ತು .... ॥
..............ವೆಗಳಲ್ಲಿದಿರುಮಂತವರಂ ಯಮದೂತರೆಂದು ತಾಂ ।
ಚೆರ್ಚಿವರಾದುರ್ಗಮದ್ದಗಿರಿಯೊಳ್ ಮಿಗೆ ಬಲ್ಪುಗೆಬಂದಿಗಾಱ ಕೇಳ್ ॥

ವಚನ ॥ ಪಿಂತಣ ಮೂಱುಂ ಸಪ್ತಪದಿಯೊಳ್ ಪ್ರಪತ್ತಿಯೇ ಮೋಕ್ಷೋಪಾಯಮೆಂದು ಪೇೞ್ದರ್. ಈನಾಲ್ಕನೆಯ ಸಪ್ತಪದಿಯೊಳ್ ಶ್ರೀಮನ್ನಾರಾಯಣನುಪಾಯಾಂತರನಿಷ್ಠರ್ಗೆ ದುರ್ಲಭನಾದೊಡಂ ಪ್ರಸನ್ನರ್ಗೆ

ಸುಲಭನೆಂಬುದಂ ಪೇೞ್ದು ದೃಢೀಕರಿಸುವರ್. ಅದಱೊಳೊರ್ಮೊದಲ ಪಂಚಪದಿಯೊಳ್ ಸ್ವಾಮಿಯ ಸ್ವರೂಪರೂಪಗುಣವಿಭವಾದಿಗಳನಿತುಮಂ ಭಾವಿಸಿ ತಿಳಿವ ಉಪಾಯಾಂತರನಿಷ್ಠೆಯರಿದಾದೊಡಮವನಾಳ್ದನುಂ ತಾನಾಳುಮೆಂದು ತಿಳಿದು ಪ್ರೀತಿಗೂಡಿ ನಂಬಿರ್ಪ ಪ್ರಪತ್ತಿನಿಷ್ಠೆ ಸುಲಭನೆಂಬುದಂ ತಿಳಿಪುವರ್.

॥ ರಾಗ—ಯರಕಲಕಾಂಬೋಧಿ ॥ ತಾಳ—ಝಂಪೆ ॥

ನಿನ್ನ ನೆಲೆಯಱಿಯಲೆನ್ನಳವೆ । ನೀ । ನೆನ್ನಿನಿಯನೆನ್ನಾಳ್ದನೆಂಬಿನಿತಲ್ಲದೆ ॥ ಪಲ್ಲವಿ ॥

ಚ ॥ ಅಱಿಯರು ಗಡಱಿತೆವೆಂಬವರು ।
ನಿನ್ನನಱಿವರು ಗಡಱಿಯೆವೆಂಬರು ।
ಈಯಱಿತಱಿಯದಿರ್ಪ ಪೊಸತೆಱನ ನೀನೆ ಬಲ್ಲೆ ॥ ೧

ಕಿಱಿಯ ಗಡ ಕಿಱಿಯರೊಳಗೆಲ್ಲ ।
ನೀನು ಪಿರಿಯ ಗಡ ಪಿರಿಯರೊಳಗೆಲ್ಲ ।
ಈಕಿಱಿಪಿರಿಯತನದೊಂದು ಕೀಲ ನೀನೆ ಬಲ್ಲೆ ॥ ೨

ಇಂತಿರ್ಪನೆನಸಲ್ಲದು ಗಡ ।
ನೀನಿಂತಲ್ಲವೆನಸಲ್ಲದು ಗಡ ।
ಮೇಣಿಂತಪ್ಪುದಿಂತಲ್ಲವೆಂಬುದನು ನೀನೆ ಬಲ್ಲೆ ॥ ೩

ಎಲ್ಲರೊಳಗಿರ್ಪ ಗಡ ನೀನು ।
ನಿನ್ನೊಳೆಲ್ಲ ಜಗಮಿರ್ಪುದು ಗಡೇನು ।
ಇಂತೆಲ್ಲರೊಳು ನೀ ನಿನ್ನೊಳೆಲ್ಲವಿದ ನೀ ಬಲ್ಲೆ ॥ ೪

ಸುರರಿಗೆಲ್ಲರಿಗೊಡೆಯನು ಗಡ ।
ನೀ ನರನ ಕೆಯ್ಯಾಳೆನಿಸಿದೆ ಗಡ ।
ಸ್ವಾಮಿ ತಿರುಮಲಾರ್ಯರಿಗೊಲಿದ ದೇವ ನೀನೆ ಬಲ್ಲೆ ॥ ೫ —೧—

ವಚನ ॥ ಈಯೆರಡನೆಯ ತ್ರಿಪದಿಯೊಳ್ ಸರ್ವೇಶ್ವರಂ ಕರ್ಮಯೋಗಾದಿನಿಷ್ಠರಂ ಪೊರೆವೆಡೆಯೊಳವರವರ ಕರ್ಮಾನುಗುಣವಾಗಿ ನಡೆಸವೇೞ್ಕೆಂಬ ನೀತಿಗೊಳಗಾಗಿರ್ದೊಡಂ ಪ್ರಪನ್ನರ ವಿಷಯದೊಳ್ ಕೃಪಾಪರವಶನಾಗಿ ನೀತಿಯಂ ಮೀಱ್ದು ಸಲಪುವನೆಂಬುದಂ ನಿರವಿಸುವರ್.

॥ ರಾಗ—ಕಾಂಬೋಧಿ ॥ ಅಟ್ಟತಾಳ ॥

ನೀತಿಯಾವುದು ನಿನಗೆ । ಭಾವಿಸೆಯಪನೀತಿಯಾವುದು ನಿನಗೆ ॥

ನೀತಿಯಾವುದು ಕೃಷ್ಣ ನಿನಗೆ ನಿನ್ನವನೆಂದೋಕು ಪಾಲಿಪುದೆನ್ನನುಳಿದ ಮಾತುಗಳೇಕೆ ॥ ಪಲ್ಲವಿ ॥

ಚ॥ ನಡೆಯುತಕ್ಕುದಲ್ಲದ ಮತ್ತೆ್ಪೂರ್ವರು ನುಡಿಯುತಕ್ಕುದಲ್ಲದ। ದುಡುಕಿನೊಳೆಸಗುವ ದುರುಳುತನದ ಕಿಱುನಡತೆಗಳೆಲ್ಲವ್ರ ನಲವೆನಿಸುತಲಿದೆ ॥ ೧

ಎಡಬಲವನಾರಯ್ಯದೆ ಹಿಂದುಮುಂದೆಣಿಸಿ ಹಿಂದಕೆ ಸಾರದೆ। ಒಡಲು ಮಱೆದು ನೀನುಸಿರ್ದ ಪೊಯ್ಮಾತುಗಳೊಡನೆ ವೇದಂಗಳನೊಂದುವೆರಸುತಿದೆ ॥ ೨

ಪುರುಷಪಶುಗಳೆನಿಪ ಗೊಲ್ಲರೊಳೊಡವೆರೆದು ಬಾೞುವ ನಿನ್ನನು। ಪರಮ ರಕ್ಷಕನೆಂದು ಭಜಿಸಿ ಭಾವಿಸುವರು ತಿರುಮಲೆಯಾರ್ಯಾದಿದೇಶಿಕರೆಂದೆನೆ ॥ ೩

ವಚನ॥ ಈಮೂಱನೆಯ ತ್ರಿಪದಿಯೊಳ್ ಅರ್ಜುನಂಗೆ ಸಾರಥಿಯುಂ ಗೋಪಿಯರ್ಗೆ ವಲ್ಲಭನುಂ ಪಾಂಡವರ್ಗೆ ದೂತನುಮಾದುದಂ ನಿದರ್ಶನಂಗೆಯ್ದು ಭಕ್ತಿವಿಷಯದೊಳ್ ಭಕ್ತಪರವಶನಾಗಿ¹ ನೀತಿಯುಂ¹ ವಿಶಾಲ್ ಸಲಪ್ಪುವನೆಂಬುದಂ ವ್ಯಧೀಕರಿಸುವರ್.

॥ ರಾಗ—ಕಾಂಬೋಧಿ ॥ ಝಂಪೆತಾಳ ॥

ಉತ್ತರೆಯು ಸಿಸುವಿಗುಸಿರಿತ್ತ ಪಾದಕಳುಕುವೆ। ನಿನ್ನ ಸತ್ಯಬ್ರಹ್ಮಚರ್ಯಪ್ರಭುತನಗಳಂತಿರಲಿ ॥ ಪಲ್ಲವಿ ॥

ಚ॥ ಕಡುಗಕೈದುಗಳೊಂದ ಪಿಡಿಯುನೆಂದಿರ್ದುಕೈ।
ವಿಡಿದ ಫಲುಗುಣನು ಕೈಗಿಡಲು ಕಂಡು ॥
ಕಡುಗಿ ಭೀಷ್ಮನ ಶಿರವ ಕಡಿವ ತವಕದಿ ಚಕ್ರ।
ವಿಡಿದ ಸತ್ಯವ ಲೋಕವೆಲ್ಲರಱಿಯುದುದೆ ॥ ೧

ಕೊಳಲೂದಿ ಜಗವ ಮರುಳ್ಗೊಳಿಸಿ ಯಮುನೆಯ ತಡಿಯ।
ಪುಳಿನವನದೆಡೆಯು ಪೂಬೊದಱುಗಳಲಿ।
ಎಳೆಯ ಗೋವಳತಿಯರ ನಳಿತೋಳ ತಕ್ಕೆಬಿಗು।
ಹಿಡಿಯುದಿಹ ಬ್ರಹ್ಮಚರ್ಯವೆಲ್ಲರಱಿಯುದುದೆ ॥ ೨

ದೊರೆತನದ ಮೋಡಿಯುಲಿ ಕರೆದು ಧರ್ಮಜ ನಿನ್ನ।
ಭರದಿ ನಡೆ ಕೌರವನ ಬೞಗೆನ್ನಲು।
ಶಿರದೊಳಾಜ್ಞೆಯು ಧರಿಸಿ ತೆರಳ್ದ ಪಕ್ಷಿಮರಂಗ।
ದೆಱೆಯು ನಿನ್ನರಸುತನವಾರುಮಱಿಯುದುದೆ ॥ ೩

—೩—

ಘಾ—1 ವಿತಿಯಂ.

ವಚನ || ಈ ನಾಲ್ಕನೆಯ ಪಂಚಪದಿಯೊಳ್ ಪ್ರಸನ್ನರ್ ಭಗವತ್ಪರತಂತ್ರರಾಗಿ ಸ್ವಬುದ್ಧಿಯುಂ ಸ್ವಪ್ರಯತ್ನಮುಮಿಲ್ಲದೆ ವಿಕಲಕರಣರಂತೆಯುಂ ಅಚೇತನದಂತೆಯುಮಿರ್ಪುದಱಿಂದಿವರಂ ಕಾಪಿಡದಿರ್ದೊಡೆ ತನಗೂಣೆಯುಂ ಬರ್ಪುದಱಿಂ ತಾನೇ ಕಾಪಿಡುವನೆಂಬುದಂ ನಿರವಿಸುವರ್.

|| ರಾಗ—ಶಂಕರಾಭರಣ || ಅಟ್ಟತಾಳ ||

ತಪ್ಪದಾರದು। ತಿಳಿದು ನೋಡೆ ತಪ್ಪದಾರದು। ತಪ್ಪುನೆಪ್ಪುಗಳ ವಿಕಲ್ಪಿಸದೆಲ್ಲವ।
ನೊಪ್ಪುಗೆಯ್ದೆನ್ನನೊಲಿದು ಪಾಲಿಸು ಕೃಷ್ಣ || ಪಲ್ಲವಿ ||

ಚ || ಆರಯ್ಕೆ ಮುಗ್ಗಿರಿವಂಥನ ತಪ್ಪೋ।
ದಾಱಿದೋಱುವ ದಂಡಧಾರನ ತಪ್ಪೋ।
ಮೇರೆಯಱಿಯದೆನ್ನ ಮೇಲಣ ತಪ್ಪೋ।
ನಾರಾಯಣ ನಿನ್ನ ನಟನೆಯ ತಪ್ಪೋ || ೧

ತೊಂದು ಮೇವ ಪಸುವಿಂಡಿನ ತಪ್ಪೋ।
ಕಂಡು ಕಾಯದ ತುಱುಗಾವನ ತಪ್ಪೋ।
ಗಂಡುವಿಡಾಱುವೆನ್ನ ಗೆಯ್ಮೆಯ ತಪ್ಪೋ।
ಕೊಂಡಾಳುವ ನಿನ್ನ ಕೂರ್ಮೆಯ ತಪ್ಪೋ || ೨

ಬಾವಿಯ ಬಳಸುವ ಪಸುಳೆಯ ತಪ್ಪೋ।
ತಾ ವಂದು ತಡೆಯದ ತಾಯದು ತಪ್ಪೋ।
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ।
ಆವೇಳೆಗಾವುಗೆಯ್ಯದ ನಿನ್ನ ತಪ್ಪೋ || ೩

ಗುಱಿಯ ತಾಕದ ಮೊನೆಗೋಲಿನ ತಪ್ಪೋ।
ಕುಱಿಕೆಸೆಯದ ಬೀರಗುವರನ ತಪ್ಪೋ।
ಒಱುಗೆಯ್ಮೆಗೆಯ್ವೆನ್ನ ಭಾವದ ತಪ್ಪೋ।
ಅಱಿವುದೋಱಿಸದ ನಿನ್ನಾಟದ ತಪ್ಪೋ || ೪

ಓಜೆಗುಂದುವ ವೀಣೆಯುಲಿಪಿನ ತಪ್ಪೋ।
ಬಾಜಿಸುವನ ಕೆಯ್ಯ ಪವಣಿನ ತಪ್ಪೋ।
ರಾಜಶ್ರೀಚಿಕದೇವರಾಯನಿಗೊಲಿದ ಶ್ರೀ।
ರಾಜಗೋಪಾಲ ನಿರಾಕರಿಸದೆ ಪೇೞು || ೫

—೪—

ವಚನ || ಈಐದನೆಯ ತ್ರಿಪದಿಯೊಳ್ ಜಗದೀಶ್ವರಂ ಲೋಗರ್ಗೆ ದುರ್ಲಭನಾದೊಡಂ ತನ್ನಂ ನಂಬಿದವರ್ಗೆ ಸುಲಭನಾಗಿ ಸಿಲ್ಕಿ ಸರ್ವಾಭೀಷ್ಟಮನೀವನೆಂಬುದಂ ನಿರವಿಸುವರ್.

॥ ರಾಗ—ಶಂಕರಾಭರಣ ॥

ಎಲೆಲೆ ಕಳ್ಳಕಳ್ಳನೆಚ್ಚಱಿರೊ । ಎಚ್ಚಱುಗೂಡಿ ಬಱಿಸಂದು ಭರದೊಳು ಬಸಗೆಯ್ಯಿರೊ ॥ ಬಸಕೆ ತಂದು ಪಲವಗೆಯರ್ಥವ ಬರ ನೋಡಿ ಬದುಕಿರೊ ॥ ಪಲ್ಲವಿ ॥

ಚ ॥ ಪೆತ್ತವರನು ಬಿಟ್ಟು ಪೆಱರ ಸೇರಿದ ಕಳ್ಳ ।
ಮತ್ತವರಿಗೆ ತನ್ನ ಮಾಯದೋಱಿದ ಕಳ್ಳ ।
ಬತ್ತಿ ಮೊಲೆಯನೂಡೆಯುಸಿರುಂಡ ಬಲುಗಳ್ಳ ।
ಸುತ್ತುವ ಗಾಳಿಯ ಸೊಂಕಿ ಕೊಲುವ ಕಳ್ಳ ॥ ೧

ತುಡುಕಿ ಪಾಲ್ಬೆಣ್ಣೆಯ ತುಡುತಿಂದ ಬಲುಗಳ್ಳ ।
ಪಿಡಿದೊರಲಿಗೆ ಕಟ್ಟೆ ಪೆಂಪೇಱಿದ ಕಳ್ಳ ।
ಕಡುಗಿ ಕಱುವನಿಟ್ಟು ಕಾಯ್ಗ್ಗಿಡವಿದ ಕಳ್ಳ ।
ಒಡನೆಳವೆಂಡಿರುಳ್ಳುಡೆಯ ಕಳ್ದ ಕಳ್ಳ ॥ ೨

ಇದಿರಿಸೆ ವಿಧಿಶಿವರಿರವುಗಿಡಿಪ ಕಳ್ಳ ।
ಪದಿನಾಲ್ಕು ಲೋಕವ ಬಾಯಾಲುವ ಕಳ್ಳ ।
ಚದುರ ಶ್ರೀ ಚಿಕದೇವಚಂದ್ರನ ಬಿನ್ನಣ ।
ದೊದವಿನ ಪೆರ್ಬಲೆಯೊಳುದೊಡಕಿಗೆ ಬಿದ್ದ ॥ ೩ —೫—

ವಚನ ॥ ಈ ಯಾಱನೆಯ ತ್ರಿಪದಿಯೊಳ್ ಸ್ವಾಮಿಯ ದಯದಿಂದಮೇ ಮೋಕ್ಷಮೆಂದುಂ ಸ್ವಾಮಿಯೊಱಿಗಂಗೆಯ್ವುದೇ ಮೋಕ್ಷಾನಂದಮೆಂದುಂ ಪ್ರೌಢರ್ಗೆ ತಾನೇ ಉಪಾಯಮಪ್ಪನೆಂಬುದಂ ನಿರವಿಸುವರ್.

॥ ರಾಗ—ಮೋಹನ ॥

ನಿನ್ನೊಲಿಗನ ನಾನೆಳಸುವೆ । ಸ್ವಾಮಿ ।
ನಿನ್ನಿಂದಲೇ ಇದ ನೆರವೇಱಿಸುವೆ ॥ ಪಲ್ಲವಿ ॥

ಚ ॥ ಸಿರಿಯಾಣ್ಮ ಕೇಳ್ ನಿನ್ನ ಸೇವೆಗಲ್ಲದ ನಾಡ ।
ಸಿರಿಬಲುಮೆಯ ಕೂರ್ತು ಚಿಂತಿಸೆನು ।
ಇದ । ಭರದಿ ಸಾಧಿಪೆನೆಂದು ಪಲದಾಱಿಯೊಳು ಪರಿ ।
ಪರಿದು ಪಲರ ಬೇಡಿ ಪಡಲಾಱೆನು ಕೃಷ್ಣ ॥ ೧

ಪತನವಪ್ಪುದೆಂಬ ಭಯಪರವಶದೊಳು ।
ಮಿತಿಗೊಂಬ ಸಗ್ಗವ ಕಾಮಿಸೆನು ।
ಗತಿ ನೀನೆಂದೆಣಿಸದ ಕಾಮ್ಯಕರ್ಮದ ವಿ ।
ಪ್ರತಿಪತ್ತಿಯೊಳಾನು ಪಡಲಾಱೆನು ಕೃಷ್ಣ ॥ ೨

ಎಱೆಯ ಶ್ರೀಚಿಕದೇವೇಂದ್ರವರದ ನಿನ್ನ ।
ಮಱೆವ ಕೈವಲ್ಯಕೆ ಮನವಿಡೆನು ॥
ಈಸೆಱೆಯನೆಳಸಿ ನಿನ್ನ ಸೇವೆಯುಳಿದು ಗೆಯ್ವ ।
ಬಱಿಯಾಗದೊಳಾನು ಪಡಲಾಱೆನು ಕೃಷ್ಣ ॥ ೩

— ೭ —

ವಚನ ॥ ಈಯೇೞನೆಯ ಪಂಚಪದಿಯೊಳ್ ತನ್ನಂ ನಂಬಿದವರಂ ವೈರಾಗ್ಯದೊಳಂ ಕರ್ಮಜ್ಞಾನಭಕ್ತಿಗಳೊಳಂ ಪ್ರಪತ್ತಿಯೊಳಂ ಕೊಱತೆಯುಳ್ಳೊಡಮಾಭಾರಮನವರೊಳ್ ಪೊಱಿಸದೆ ತಾನೇ ಪೊತ್ತು ನಿರ್ವಹಿಸಿ ರಕ್ಷಿಸುವನೆಂಬುದಂ ನಿರವಿಸುವರ್.

॥ ರಾಗ—ಕೇತಾರಗೌಳ ॥

ನಡೆಯುದಿರ್ಪವನಲ್ಲ ನಡೆವವನುಮಲ್ಲ । ನಡೆಯದೆ ನಡೆವ ಬಱುನಟಣೆಯುವಗೆನಗೆ ನಲ್ನಡತೆಗಳನಿತ್ತು ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ ॥ ಒಡೆಯನಾಣತಿವೆರಸಿದೂೞಿಗವಿದೆಂದು ಮನ ।
ವಿಡಿದು ಸತ್ಕರ್ಮಗಳನೊಡರಿಸುವೆನೊಮ್ಮೆ ॥
ಒಡಲೊಡವೆ ಪೊಸ್ಪೊಡವಿ ಮಡದಿಮಕ್ಕಳ ಪೊರೆವ ।
ಸಡಗರದೊಳೀವಗೆಯ ಸಡಿಲಿಸುವೆನೊಮ್ಮೆ ॥ ೧

ಅಱಿಯುದಿರ್ಪವನಲ್ಲ ಅಱಿವವನುಮಲ್ಲ । ಅಱಿಯುದಱಿತವನೆನಿಸುವಱಿಮರುಳಿಗೆನಗೆ ನಲ್ಲಱಿವವನುಗೊಳಿಸಿ ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ ॥ ಪೆಱತೆನಿಪ ತತ್ವಗಳ ಬಿತ್ತರವನಾರಯ್ದು ।
ಸೆಱೆಯಿರುವ ಜೀವನನು ಚಿಂತಿಸುವೆನೊಮ್ಮೆ ।
ಬಱಿಯ ವಿಷಯದ ಸವಿಗೆ ಬಸವಳಿದು ಸೊರ್ಕಿ ಮ ।
ಯ್ಮಱೆತು ಬೆಳ್ಪಸೆ ಬೆಱೆತು ಮತಿಗಿಡುವೆನೊಮ್ಮೆ ॥ ೨

ಆಸೆಯಿಲ್ಲದವನಲ್ಲ ಆಸೆಗನುಮಲ್ಲ । ಆಸೆಯಿಲ್ಲೆಂದು ಪಲವಾಸೆಗೆಯ್ವೆನ್ನ ಬಯಲಾಸೆಯನು ಕಳೆದು ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ ॥ ಈಸಕಲವಿಷಯಂಗಳಿರವನೆರ್ದೆಗೊಳಿಸಿ ಬಲು ।
ಪೇಸಿಕೆಯಿದೆಂದೊಡನೆ ಪೆಱದೆಗೆವೆನೊಮ್ಮೆ ॥
ಮೋಸದಿಂದವಱೊಳುಱೆ ಮುಱುಗಿ ಮುಂಗೆಟ್ಟು ಕಡು ।
ಗಾಸಿವಡೆದೆಳವಳಿದು ಖತಿಗೊಳುವೆನೊಮ್ಮೊ ॥ ೩

ನೇಹವಿಲ್ಲದವನಲ್ಲ ನೇಹಿಗನುಮಲ್ಲ । ನೇಹವಿಲ್ಲದ ಪುಸಿಯ ನೇಹಿಗನಿಗೆನಗೆ ನೆರೆನೇಹವನು ಬಳೆಸಿ ನಿನ್ನಾಳೆನಿಪುದೆನ್ನ ॥ ಪಲ್ಲವಿ ॥

ಚ॥ ದೇಹಕರಣಗಳ ಬುದ್ಧಿಯನಿತ್ತವನಿಗೆ ದಾ।
ಸೋಹಮೆಂದಕ್ಕಱೊಳು ಸೊರ್ಕುವೆನದೊಮ್ಮೆ।
ಈಹದನನುಱಿದು ನಾನೆನ್ನದೆಂಬೀತೆಱದ।
ಮೋಹದೊಳು ಕಾಲೂಱಿ ಮೊಗಗೆಡುವೆನೊಮ್ಮೆ॥ ೪

ನಂಬದಿರ್ಪವನಲ್ಲ ನಂಬುವನುಮಲ್ಲ। ನಂಬದೇ ನಂಬಿದವನೆಂಬ ಡಂಬಕಗೆನಗೆ ನಂಬುಗೆಯನಿತ್ತು ನಿನ್ನಾಳೆನಿಪುದೆನ್ನ॥ ಪಲ್ಲವಿ॥

ಚ॥ ನಂಬಿ ಚಿಕದೇವೇಂದ್ರನಾಥಗೋಪಾಲನ ಪ।
ದಾಂಬುಜವ ನಿರ್ಭರದೊಳನುಗೊಳುವೆನೊಮ್ಮೆ।
ಕೊಂಬ ಪುರುಳುಂಬೂಟವೆಂಬ ಬಲೆಸಿಲುಕಿನೊಳು।
ಪಂಬಲಿಸಿ ಪಲವನುಱಿ ಬಸವಳಿವೆನೊಮ್ಮೆ॥ ೫

ಮಹಿಮೆಯ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — V. —

ನೆಱೆದು ಸುರಾಸುರರ್ ಶರಧಿಯಂ ಕಡೆಯುತ್ತಿರೆಯೆಂಟು ದಿಕ್ಕಿನೊಳ್।
ತೆರೆ ಕವಿದೆಯ್ದೆ ಸುರ್ಗುನುಸಿಗೆಯ್ದು ಪೆಱಂಚುವ ಮಂದರಾದ್ರಿವೋಲ್॥
ಕಿಱಿಪಿರಿದೆನ್ನದೆಡ್ಡೆಸೆಯ ಮನ್ನೆಯರೊಱ್ಗಿನೊಳೊಂದೆ ವೇಳೆಯೊಳ್।
ಪರಿತರೆ ಪೊಯ್ದು ಪೊಯ್ದು ಭರದಿಂ ಬಱಿಗೆಯ್ದನಭೇದ್ಯವಿಕ್ರಮಂ॥

ಮೂಗಂ ಕೊಯ್ದನೆವಂತರಾವ್ರವನವಂಗಿತ್ತಸ್ತ್ರಸನ್ಯಾಸಮಂ।
ಲೋಗರ್ ಭಾಪೆನೆ ಪೊಯ್ದು ಚಿತ್ರನಥೆಗೆಯ್ದಾಱೇತಜೇಘೂಟಿಯಂ॥
ಬೇಗಂ ದಾದಜಿಕಾಕಡಾಂಕನೆಣಲಂ ಕೊಯ್ದಲ್ಲ ದೇಶಕ್ಕಮು।
ದ್ವೇಗಂ ಪೋಪಿನವೊಳ್ದನಪ್ರತಿಮವೀರಂ ಮೇದಿನೀಚಕ್ರಮಂ॥

ವಚನ॥ ಈ ಐದನೆಯ ಸಪ್ತಪದಿಯೊಳ್ ಪ್ರಸನ್ನರ್ಗೆ ಶ್ರೀಮನ್ನಾರಾಯಣನಲ್ಲದೆ ಪೆಱತೊಂದು ಗತಿಯಿಲ್ಲವೆಂಬುದಂ ನಿರವಿಸುವರ್.

॥ ರಾಗ—ಯುರಕಲ ಕಾಂಬೋಧಿ॥ ತಾಳ—ರೂಪಕ॥

ಚೆಲ್ಲವಾಡದಿರೆನ್ನ ಸಲಹೊ ಪಶ್ಚಿಮರಂಗ। ವಲ್ಲಭ ವಾಸುದೇವಾ॥

ಬಲ್ಲರ ಮಾತಿನ ಬರವಸದೊಳು ಬಂದೆ। ಬಲ್ಲೆನೆಂದೊದೆದೊಡನುಱಿದು ಪೋಪವನಲ್ಲ॥ ಪಲ್ಲವಿ॥

ಚ॥ ಕಡಲೊಳು ನಡೆವ ಪಡಗಿನ ಕಂಭವ ।
ನಡರಿ ಸೇರಿದ ಪಕ್ಕಿಯಂದದಿಂದಾನು ॥
ಎಡಬಲದೊಳು ಬೇಱೊಂದಿರವೃಗಾಣೆನು ನಿ ।
ನ್ನಡಿಗಳ ಸೇರಿದೆನನ್ಯವನಱಿಯೆನು ॥ ೧

ಮೊಱಗುಸಿಡಿಲುಗಳ ಮೋಹರದೊಳು ಸೊಂದು ।
ಒಱಲಿ ಬಾನೊಳು ಪರಿಪರಿದು ಮುಗಿಲುಗಳಿಂ ॥
ದಿಱಿವ ಮೊಸಲ ನೀರನೆಳಸುತ ಬಾಯ್ಬಿಡು ।
ವೆಳೆಯ ಚಾದಗಗೆ ನಾನೆಣೆಯೆನಿಸಿರ್ಪೆನು ॥ ೨

ನೀತಿಯಾದೊಡಮಪನೀತಿಯಾದೊಡಮದ ।
ನೀಕ್ಷಿಸೆಂದು ಬಂದಿದಿರಾಡಲಱಿಯದೆ ॥
ಭೂತಳಾಧಿಪನೆಂತು ಪೊರೆದೊಡಮವನಡಿ ।
ಗೋತು ಸೇರಿದ ಕುಳವೊಕ್ಕಲಂತಿರ್ಪೆನು ॥ ೩

ಕಾರವೊಗರುಹುಳಿಕಹಿಗಳನಿತ್ತೊಡ ।
ಮೋರಂತೆ ಸವಿದದಱೊಳು ಭೇದವೆಣಿಸದೆ ॥
ಹಾರೈಸಿ ವೈದ್ಯನ ಹವಣನಾರಯ್ವ ಮ ।
ಹಾರೋಗಿಯಂತಾನು ಹದವಱಿದಿರ್ಪೆನು ॥ ೪

ಒಲಿದು ಲಾಲಿಸಿದೊಡಮೊಲ್ಲದಿರ್ದೊಡಮೊಂದೆ ।
ನೆಲೆಯೊಳು ನಲ್ಲನ ನೆರೆನಂಬಿ ಬಾಳುವ ॥
ಕುಲದೊಳು ಪುಟ್ಟಿದ ಕುವರಿಯಂದದೊಳು ನಿ ।
ನ್ನೊಲವ ಕೂರ್ತಿರುವೆ ನಾನುಱಿದುದನಱಿಯೆನು ॥ ೫

ತಡೆಯಲಾಱದ ಕೋಪದಟ್ಟುಳಿಯಿಂದೊಮ್ಮೆ ।
ಬಡಿದು ನೂಕಿದ ತಾಯ ಒಱಿಯಿಂದ ತೊಲಗದೆ ॥
ಎಡೆವಿಡದೞುತವಳೆಱಕವನೆಳಸುವ ।
ಕಡುಗೂಸಿನಂದವ ಕೈವಿಡಿದಿರ್ಪೆನು ॥ ೬

ಪರಿಪರಿ ಫಲಗಳ ಬಗೆಗೊಳಿಸದೆ ನಿನ್ನ ।
ಚರಣವ ಬಯಸುವ ಚದುರರಂತಾನು ॥
ತಿರುಮಲೆಯಾರ್ಯರ ದಿವ್ಯಕೃತಿಯನಿದ ।
ನಿರದೆ ಪಾಡುವೆನು ಕೇಳಿತರವನಱಿಯೆನು ॥ ೭

ಉಪಾಯ ಸಪ್ತಪದಿ ಸಂಪೂರ್ಣಂ.

— ಸಪ್ತಪದಿ — VI. —

ಬಳಸಿಯುಂ ವೊಂದುಗೂಡಿ ಪರಿತಂದ ರಿಪುಕ್ಷಿತಿಪಾಲವರ್ಗಮಂ |
ಘುಳಿಲನೆ ಪೊಯ್ದು ನಿಂದೊಡದು ಪೆರ್ಮೆಯೆಯಪ್ರತಿಮಂಗಿದಿರ್ಕೆದಾ ॥
ಬಳಯುತರಪ್ಪ ಬಲ್ಕುತುಪಶಾಹನನೇಮುಲಶಾಹನಂ ಕರಂ |
ಮುಱುಗಿಸಿ ಮೈಮೆವೆತ್ತನೆನಲೊಪ್ಪುಗುವೀ ಚಿಕದೇವಭೂವರಂ ॥ ೧೩

ತಳ್ವದೆ ಢಿಳ್ಳಿಯಾಳ್ವ ದೊರೆಯುಂ ಕೆಳೆಗೊಂಡವನತ್ತಣಿಂದಮೇ |
ತೋಳ್ವಳೆವೆತ್ತ ಭಾಗನಗರಾಧಿಪನಂ ವಿಜಯಾಪುರೀಶನಂ ॥
ಬಾೞ್ಕೆಣೆನೆಂಬಿನಂ ಪಿಡಿದು ಕೆಯ್ಸೆಱೆಗೊಂಡುೞೆ ಪಾಡುಪಂತದಿಂ |
ಬಾೞ್ವನಭೇದ್ಯವಿಕ್ರಮನೆನಲ್ ಮೆಱೆವಂ ಚಿಕದೇವಭೂವರಂ ॥ ೧೪

ವಚನ ॥ ಈಯಱನೆಯ ಸಪ್ತಪದಿಯೊಳ್ ಪ್ರಸನ್ನರ್ಗೆ ಭಗವದ್ಗು
ಣಾನುಭವಮುಂ ತತ್ಕಿಂಕರವೃತ್ತಿಯುಮಲ್ಲದೆ ಪೆಱತೊಂದು ಭೋಗಮುಂ
ರುಚಿಸದೆಂಬುದಂ ನಿರೂಪಿಸುವರ್.

॥ ರಾಗ— ಕಾಂಬೋಧಿ ॥ ತಾಳ ರೂಪಕ ॥

ನಿನ್ನನಲ್ಲದನ್ಯರನೆಣಿಪೆನೆ । ಆ । ಚೆನ್ನಿಗ ಪಶ್ಚಿಮರಂಗ ಪಟ್ಟಣದ ಚೆಲುವ
ಲಕ್ಷ್ಮೀನಾರಸಿಂಹ ಎನ್ನೊಡೆಯಾ ॥ ಪಲ್ಲವಿ ॥

ಚ ॥ ಜಲರುಹನಾಭ ನೀನು ಸಕಲ । ಜಗದೀಶನೆಂದು ತಿಳಿದು ಮಿಕ್ಕ । ನಳ
ತೆಯ ನೆಲನನಾಳುವ ದೇವರಿಗಾನೆಱಗುವೆನೆಂತು ॥ ಕಳೆದು ಮೂಜಗದ ಕತ್ತಲೆಯೆ
ಲ್ಲವ । ತೊಳಗುವ ಸೂರ್ಯನ ತೋಱಿಕೆಗಲರ್ದು । ಕಳೆವೆತ್ತು ಮೆಱೆವೊಳ್ದಾವರೆ
ಮಿಂಚು । ಬೞುವಿನ ಬೆಳಕಿಗೆ ಬೊಗರೇಱುವ್ವುದೆ ॥ ೧

ಪರಮಾತ್ಮ ನೀನು ಪರತತ್ವವೆಂದು । ಭಾವಿಸಿ ನಿನ್ನ ಬಯಸಿ ಮಿಕ್ಕ । ತರವಳಿ
ದೈವದಾಸೆಗೆ ಸಿಲುಕಿ ದಾಱಿದಪ್ಪುವೆನೆಂತು ॥ ಭರದೊಳು ಕಡಲ ಬಳಿಗೆ ಪರಿವ ।
ಬಲುಮೆಯೊಳೆಸೆವ ಬಿಂಕದ ಪೆರ್ವೊಳೆ । ಉರವ್ವುಗೆಟ್ಟದಿರೊಳು ತೋಱುವ ಕಿಱುಹೊ
ಕ್ಕರಣೆಯ ಬಾವಿಗೆ ಹವಣಿಸುವ್ವುದೆ ॥ ೨

ಸಿರಿರಾಣಿಯರಸ ನಿನ್ನ ದಿವ್ಯ । ಚರಣಾರವಿಂದದೊಳೆಱಗಿ ಮಿಕ್ಕ । ಮರುಳು
ದೈವಗಳ ಮಾಯೆಗೆ ಸಿಲುಕಿ ಮೈಮಱೆದಿರ್ಪೆನೆಂತು ॥ ಸರಸಿಯೊಳಲರ್ದ ಕೆಂದಾವರೆ
ಗೆಱಗಿ । ಸವಿದದಱೊಳುಗೆಂಪ ಸಂತಸದೊಳೊಗುಮಿಗೆ । ಪರವಶಗೊಂಡಿರ್ಪ ತುಂ
ಬಿವಿಂಡು ಕೊಳವಳಿಕೆಗೆ ಮೇಲಿಕ್ಕಿ ಕೂರ್ತೆಱಗುವ್ವುದೆ ॥ ೩

ಪಱವಿನಿತಿಲ್ಲವೆನಿಸಿ ಮೆಱೆವ । ಪಾವನಚರಿತ ನಿನ್ನ ಭಜಿಸಿ । ಬಱಿಕಾನು ಪಲವು
ಬಣಗುದೈವದ ಭಜನೆಗೆಯ್ವೆನೆಂತು ॥ ತಿಳಿನೀರೊಳೆಸೆವ ಮಾನಸಸರಸಿಗೀಱದಲ್ಲಿ ನಲಿದು

ನಲವೇಱುವಂತೆ । ಪುೞಿತು ಪೊಲಸುಗಂಪುವೆತ್ತು ಪಾವಸೆಗೊಂಡ ಕೊಳಚೆವಳ್ಳದೊಳು ಕೊರ್ತೆಱಗುವುದೆ ॥ ೪

ಶ್ರೀವರ ನಿನ್ನ ಕಲ್ಯಾಣಗುಣವ ಭಾವಿಸಿ । (ಯಾನಂದವಡೆದು) ನಿನ್ನ ಬಯಸಿ ಮಿಕ್ಕ । ಗಾವಿಲ ದೈವದ ಗಡಣದಿರವ ಗಣಿಸೆಗೆಯ್ವೆನೆಂತು ॥ ಮಾವಿನಿಂಬಣ್ಣಮನವಾಱೆ(ಸವಿ)ಸವಿದು । ವೈಮಱೆದುರ್ಕಿ ಸೊರ್ಕಿರುವರಗಿಳಿ । ಗಾವಳಿವಡೆದು ಕಾಗೆಗಳೆಱಗುವ । ಬೇವಿನ ಪಣ್ಗಾಸೆವೆತ್ತೆಱಗುವುದೆ ॥ ೫

ಅಂಬುಜಲೋಚನ ಕೇಳು ನಿನ್ನ । ಕೃಪಾಮೃತಪಾನದಿ ತಣಿದು ಮಿಕ್ಕ । ಡೊಂಬಿ ದೈವಂಗಳ ಬೆಂಬಳಿವಿಡಿದು ಪಂಬಲಿಸುವೆನೆಂತು ॥ ಅಂಬರತಲವನಡರಿ ಮುಗಿಲ । ಮುಂಬನಿಯುಂಡು ಸೊರ್ಕುವ ಚಾದಗೆ । ಗುಂಬಚೆಂಬಿನೊಳು ತುಂಬಿರ್ದ ಪೞನೀರ ಕೊಂಬೆನೆಂದೆಳಸಿ ಕೊರ್ತೆಱಗುವುದೆ ॥ ೬

ಶ್ರೀನರಸಿಂಹ ನಿನ್ನಡಿಗೊಲಿದು । ತಿರುಮಲೆಯಾರ್ಯನುಸಿರ್ದ ಸರಸ । ಗಾನವನಾಲಿಸಿ ಮಿಕ್ಕ ದೈವಗಳ ಗನ್ನವ ಕೇಳ್ವೆನೆಂತು ॥ ಜೇನಿಗೆ ಸಾಸಿರವಡಿ ಸೊಗಸೆನಿಸುವ । ತೇಜದೊಳೆಸೆವ ಸೊದೆಯುಂಡು ಸೊರ್ಕಿನಿಂ । ದಾನಂದದೊಳು ಬಾಳುವಮರರಿಳೆಯ ಪುಲು । ಮಾನಸರೂಟವ ಮನಗೊಳಿಸುವರೆ ॥ ೭

ಫಲಸಪ್ತಪದಿ ಸಂಪೂರ್ಣಂ.

— ಸಪ್ತಪದಿ — VII —

ಇಡೆ ಕೆಯ್ಯಿಟ್ಟಯನೊಂದನೇ ಜಡಿದು ನೀನೀಡಾಡುವರ್ ತಮ್ಮ ಕೆ ।
ಯ್ವಿಡಿದೊಳ್ಕೈದುವನೆಲ್ಲಮಂ ರಿಪುನೃಪರ್ ನೀಂ ಖಂಡೆಯಂಗೊಂಡು ಪೊ ॥
ಬ್ಬಿಡುವಾರ್ಪಿಂದಿದಿರೇಱೆ ತಾಮಿದಿರಿಪರ್ ವ್ಯಾನಮ್ರಶೀರ್ಷಂಗಳಿಂ ।
ನುಡಿ ನಿನ್ನಪ್ರತಿಮತ್ವಮೆಂತೊ ಚಿಕದೇವಾ ಬಲ್ಲರೊಳ್ ಬಲ್ಲಹಾ ॥ ೧೫

ಇರದೊಱೆವಾಲಿನೀರ್ಪೊನಲನೀಂಟ ತೃಷಾಭರಮಂ ನಿವಾರಿಪರ್ ।
ಜರಿದು ಪೊದಱ್ದ ನೀಳ್ಮಡಿಯ ಪೆರ್ಮುಗಸುಕಿಂ ಬಿಸಿಲಾರ್ಪನಾಱೆಪರ್ ॥
ಭರವಸದಿಂದೆ ನಂದಿಸುವೆವೆಂದೆರ್ದೆಗಿಚ್ಚನರಾತಿಕಾಂತೆಯರ್ ।
ಪರಿತರೆ ನಿನ್ನ ಬಲ್ವಡೆ ಸೊಗಂಬಡುವರ್ ಚಿಕದೇವಭೂವರಾ ॥ ೧೬

ವಚನ ॥ ಇಂತಾಱುಂ ಸಪ್ತಪದಿಗಳೊಳ್ ದಿವ್ಯಾತ್ಮಗುಣಂಗಳನನುಭವಿಸಿ ಈ ಸಪ್ತಮಸಪ್ತಪದಿಯೊಳ್ ದಿವ್ಯಮಂಗಳವಿಗ್ರಹಗುಣಂಗಳನನುಭವಿಸುವರ್.

ರಾಗ—ಯರಕಲ ಕಾಂಬೋಧಿ ॥ ತಾಳ—ಝಂಪೆ ॥

ಕಂಗೊಳಿಸದಿರಲಾಱಿ ಕಣ್ಣ ಪುಣ್ಯದ ಬೆಳಸ । ಕಂಗೊಳಸದಿರಲಾಱೆನೆ ।
ಪೊಂಗೊಳಲ ನುಡಿಸುತಿೞ್ಬೊತ್ತಿನೊಳು ಪುರವೀಧಿ । ಸಿಂಗರಿಸಿ ಮೆಱೆವ ಹರಿಯು ಸಿರಿಯು ॥ ಪಲ್ಲವಿ ॥

ಚ ॥ ಕ್ರಮದಿ ನಡುತೋಳ್ಮಡಿಗಳೊಂದಿನಿಸು ಕೊಂಕಿನೊಳು ಕಮನೀಯವೆಂದೆನಿಸಿ ಮೆಱೆಯೆ । ಸಮತಳದಿ ನಿಂದಡಿಯು ಮುಂದೆ ಮತ್ತೊಂದಡಿಯು ಸಾರ್ಚಿಯುಂಗುಟುವನೂಱ । ರಮಣೀಯರೇಖೆಯೊಳು ನಿಂದು ಕೊಳಲುಲಿಗೊಳುವ । ರಾಯಗೋವಳನ ತೋಱೆ ನೀಱೇ ॥ ೧

ಬಳಬಳಸಿ ನಲಿನಲಿವ ಬಾಲಕರ ಕೆಯ್ಯ ತಪ್ಪಳೆಯೊಳುಱೆ ಬಣ್ಣಪೇಱ।
ಕೆಳೆವಕ್ಕಳೆಡಬಲದೊಳೊಲಿದೂದುವೆಲೆಸುತ್ತಿನೊಳು ಸರವನೊಂದುವೆರಸಿ ।
ಕೊಳಲ ನುಣ್ದಾರವ ಕೊನರಿಡಿಸಿ ಕುಡಿವರಿಯಿಸುವ । ಕುವರಗೋವಳನ ತೋಱೆ ನೀಱೇ ॥ ೨

ಮತ್ತಕದೊಳೆಸೆವ ಕಾಟ್ಕೊರದ ಪೂನಸೆತಳಿರು ಕತ್ತುರಿಯು ಪೀಲಿ ಚಲಿಸೆ ।
ಸುತ್ತುವೆಳದುಂಬಿಗಳ ಸೊಬಗಿನೊಳು ನಿಱಿಗುರುಳು ಸುೞಿಯೆ ಮೊಗದಾವರೆಯೊಳು ।
ಚಿತ್ತಜಾವೇಶಮಂತ್ರಗಳ ಕೊಳಲಿಂದಳೆವ । ಚೆನ್ನಗೋವಳನ ತೋಱೆ ನೀಱೇ ॥ ೩

ಕಳೆವೆತ್ತ ಕತ್ತುರಿಯು ವೀಣೆಯೊಡನೊಡನುಣ್ಕಿ ಕವಿವ ತನಿಗಂಪಿನಂತೆ । ಬಳೆವ ತಾನದ ಗಮಕಗತಿಯು ಮೈಸಿರಿಗೆ ಮೊಗ ಬಗೆಬಗೆಯು ಭಾವವಡೆಯೆ । ಕೊಳಲಿಗಿಂದುಟಿಯು ಸವಿದೋಱುಗೊಳುದನಿಗೊಳುವ । ಕೊನಬುಗೋವಳನ ತೋಱೆ ನೀಱೇ ॥ ೪

ಗುಡಿಗೊಳುವ ಕುಣಿವ ಕೊಂಕುವ ನಿಮಿರ್ವ ಚಳಕದೊಳು ಕುಡುಪುರ್ವ ಕೋಟಲೆಗೊಳೆ । ಒಡನೊಲೆವ ತೊನೆವ ತೂಗುವ ಭರದಿ ಕನ್ನಪುರ ಜಡಿದು ಕದಪಿನೊಳು ನಲಿಯೆ । ಬೆಡಗು ಮಿಗೆ ಶಿರವನೊಲೆದೊಲೆದು ವೇಣುವ ನುಡಿಪ । ಬಿನದಗೋವಳನ ತೋಱೆ ನೀಱೇ ॥ ೫

ಕವಿವ ಕಡೆಗಣ್ಗೆ ಸೇರುವ ನೀಳ್ಪ ನೆಲೆಗೊಳುವ ಕರಗುವರೆಮುಗಿವ ನಗುವ ।
ನೆವದಿ ತೆರೆಗೊಳುವ ತೇಲುವ ಪೊಳೆವ ಪೊಗರೊಗುವ ನೇಹದಿನಿರಸದಿ ನನೆವ ।
ಸವಿನೋಟದಿಂದ ಕಣ್ಮನವ ಕೈಸೆಱೆಗೊಳುವ । ಚದುರಗೋವಳನ ತೋಱೆ ನೀಱೇ ॥

ಹರವಿರಿಂಚರ ಬಗೆಗೆ ಹವಣೆನಿಸದಾನಂದದಿರವ ಗೊಲ್ಲರ ಬೀಡಿನ । ನೆರೆಹೊರೆಯು ಪಲವು ಮರ ಮೊರಡಿ ಮಿಗ ಪಕ್ಕಿ ಕಱು ತುಱುಗಳಿಗೆ ಸೂಱೆಗೊಳಿಸಿ । ತಿರುಮಲಾರ್ಯರ ಮನವ ನೆಲೆವೀಡುಗೊಂಡೆಸೆವ । ದೇವ ಗೋವಳನ ತೋಱೆ ನೀಱೇ ॥ ೭

ಮೂರ್ತಿಧ್ಯಾನ ಸಪ್ತಪದಿ ಸಂಪೂರ್ಣಂ.

ವೃ ॥ ವಲಿತಾರಾತಿಸಿರಾಬ್ಜಕರಪ್ರತಿಸರಾಲಂಕಾರೆ ಸಂಭಿನ್ನಕೃ ।
ತ್ತಿ ಲಸಚ್ಚಿತ್ರಪಟೀಪರೀತೆ ರಿಪುಹೃತ್ಪಂಕೇರುಹೋತ್ತಂಸಮಂ ॥
ಜುಲೆ ಸೊಂಪಿಂ ಚಿಕದೇವಖಡ್ಗವಧು ಗಾಢೋತ್ಸಾಹದಿಂ ದುರ್ಹೃದಾಂ ।
ತ್ರುಲತಾವಮಾಲೆಯನಿಟ್ಟಳಂದು ಜಯಕಾನ್ತಂಗಾಹವೋದ್ವಾಹದೊಳ್ ॥ ೧೭

ದಳಿತಾರೀಭಶಿರಃಕಪಾಲತತಿಭೃಂಗಾರಂಗಳಂ ವಿದ್ವಿಷ ।
ಗ್ಗಳಶೃಂಗಂಗಳನಂಸಖಂಡಿತಸಿರಾವಂಶಂಗಳಂ ದೇಸಿಯಿಂ ॥
ತಳೆದೊಳ್ಪಿಂ ಚಿಕದೇವಖಡ್ಗವಧು ರಕ್ತಾಸಾರಕಾಶ್ಮೀರದೋಃ ।
ಕುೞಿಯಂ ಸೂಸಿದಳಾಹವೋತ್ಸವದೊಳಾಶಾಕಾಮಿನೀಬೃಂದದೊಳ್ ॥ ೧೮

ಬಲೆಯುತೆ ಲೀಲೆಯೊಳ್ ಕರಚಮತ್ಕೃತಿಯಿಂ ಚಿಕದೇವ ತಾವಕಾ ।
ಸಿಲಲನೆ ಸಂಗರಾಂಗಣದೊಳೊಜ್ಜಸವೆಸ್ ಪೊಸಗೆಲ್ಲವೆಣ್ಣುಮ ।
ಗ್ಗಲಿಸೆ ಗತಾಗತಕ್ರಮದೆ ಜೈತಜಿದಾವಜಿಕಾಕಡಾವಿದು ।
ಱಲಿತಮರಾಟರೊಳ್ಪಡೆಯ ಪಂದಲೆಯಿಂ ತಿರಿಕಲ್ಲನಾಡಿದಳ್ ॥ ೧೯

॥ ಲಯಗ್ರಾಹಿ ॥

ಒಂದು ದೆಸೆಯೊಳ್ ತುರುಕರೊಂದು ಕಡೆಯೊಳ್ ಮೊರಸ
ರೊಂದೆಡೆಯೊಳಾರೆಯರ ಬಿಂದಮೊಳವಿಂ ಜೀ ।
ಱೊಂದು ಬೞಿಯೊಳ್ ತಿಗುಳರೊಂದಿರವಿನೊಳ್ ಕೊಡಗ ।
ರೊಂದು ಕೆಲದೊಳ್ ಮಲೆಪರೊಂದುಪೆರೆದೆಲ್ಲರ್ ॥
ಸಂದಣಿಸಿ ಕಾಳೆಗಕೆ ಮುಂದುವರಿವನ್ನಮದ
ಟಿಂದವರ ಥಟ್ಟುಗಳ ಪಂದಲೆಗಳಂ ದಿ ।
ಗ್ಬೃಂದಬಲಿಯಿತ್ತು ನಲವಿಂದೆ ಚಿಕದೇವನೃಪ ।
ನಂದಮಿಗೆ ಪೆರ್ಜಸಮನೊಂದಿ ಸೊಗವಾಳ್ಗಂ ॥ ೨೦

॥ ಗದ್ಯಂ ॥

ಇದು ಸಕಲಜಗದುದಯವಿಭವಾದಿಲೀಲನುಂ, ಲಕ್ಷ್ಮೀಲೋಲನುಂ, ಅಖಿಲಹೇಯಪ್ರತ್ಯನೀಕನುಂ, ಅಪ್ರಾಕೃತಪ್ರತೀಕನುಂ, ಅವಾಪ್ತಸಮಸ್ತಕಾಮನುಂ, ಅನಂತಕಲ್ಯಾಣಗುಣಗಣಾರಾಮನುಂ, ಸಾರಸಭವಪೂಜಿತನುಂ, ಸನಕಮುನಿಸಭಾಜಿತನುಂ, ಯಮಶಿಖರಿಶಿಖರಾಲಂಕಾರನುಂ, ಯತಿರಾಜಸಂಪತ್ಕುಮಾರನುಂ, ಆಶ್ರಿತರಕ್ಷಾಪರಾಯಣನುಮಪ್ಪ ಯಾದವಗಿರಿ ನಾರಾಯ

ಣನಡಿದಾವರೆಯುಗಳಗದೊಳ್ ಬಳೆದೇಳ್ಗಿದಳೆದ ಯಾದವಕುಲೋದ್ಧಾರಕ
ನುಂ, ಶುಭಗುಣೋದ್ಧಾರಕನುಮಾದ ದೇವರಾಜನೃಪಾಲಪೌತ್ರನುಂ, ಅತ್ರಿ
ಗೋತ್ರಪವಿತ್ರನುಂ, ದೊಡ್ಡದೇವರಾಜ ಗರ್ಭಾಂಬುಧಿಕಲಾಧರನುಂ, ಸಕ
ಲಕಲಾಧರನುಂ, ಅಶ್ವಾರೋಹಣಕಲಾರೇವಂತನುಂ, ಗಜಾರೋಹಣಮಘು
ವಂತನುಂ, ಅಸ್ತ್ರವಿದ್ಯಾಭೃಗುರಾಮನುಂ, ಅಪ್ರತಿಮಧಾಮನುಂ, ಕರ್ಣಾ
ಟಭೂಮಂಡಲಾಧೀಶನುಂ, ದೇವಸಂಕಾಶನುಂ, ಪಶ್ಚಿಮರಂಗಪುರಸಿಂಹಾಸ
ನಾಧಿಷ್ಠಿತನುಂ, ಸುಪ್ರತಿಷ್ಠಿತನುಂ, ದೇವಬ್ರಾಹ್ಮಣಪರಿಪಾಲನೈಕಾನ್ತನುಂ,
ಸಕಲಪ್ರಜಾಕಾನ್ತನುಂ, ಅಸಕೃದಾವರ್ತಿತಷೋಡಶಮಹಾದಾನನುಂ, ಆ
ಶ್ರಿತಸರ್ವಶ್ರೇಯೋನಿದಾನನುಂ, ರಸಿಕಜನಕರ್ಣರಸಾಯನೀಕೃತಸಂಗೀತವಿ
ಸ್ತರನುಂ, ಸಾಹಿತ್ಯವಿದ್ಯಾನಿಕಷಪ್ರಸ್ತರನುಂ, ಪೂರ್ವದಿಗ್ವಿಜಯಯಾತ್ರಾವಿ
ತ್ರಾಸಿತ ಚೇದಿಮಂಗಲೋಪಾನ್ತ ಕಾನ್ತಾರೋಪಗೂಢವ್ಯೂಢಸೇನಾಭಿಗು
ಪ್ತಪಾಂಡ್ಯಸೇನಾಧಿಪ ಸಂಗರಕಿರೀಟ ವೆಂಕಟಕೃಷ್ಣ ಶಿಬಿರಸರ್ವಸ್ವಹರಣಸ
ಮಸಮಯಸಮಾಕ್ರಾನ್ತ ಮಳಲಿ ಪರಮತ್ತಿ ಶಾಲೆಯ ಚೇದಿಮಂಗಲ ಕೊಂ
ಗು ಧಾರಾಪುರಾದಿ ಪಾಂಡ್ಯನೃಪ ದುರ್ಗಮದುರ್ಗಸ್ತೋಮನುಂ, ಸಂಗರ
ಭೀಮನುಂ, ಉದ್ವೃತ್ತಸುರತ್ರಾಣಚಮೂವಿಕ್ಷೋಭಣವಿಚಕ್ಷಣ ವಿಕಟ
ಮರಾಟ ಶಿವಾಜಿ ವಾಜಿಸೇನಾಧಿಪ ಜಯತಜಿಕಾಟಕರ ದಾದಜಿಕಾಕಡ ಪ್ರ
ಮುಖಕಂಠನಾಳೋಚ್ಛಲದ್ರಕ್ತಧಾರಾಸಿಕ್ತಕೃಪಾಣಸಂದರ್ಶನವಿಲೀನಹರ
ಜಿ ಸಂತಜಿ ಮುಖ್ಯಮಹಾರಾಷ್ಟ್ರನೃಪಪ್ರವೇಕನುಂ, ಅಪ್ರತ್ಯನೀಕನುಂ,
ಗಂಭೀರೋದ್ಧತಪರಿಘಾವರಣಭೀಷಣಶತಘ್ನೀ ಶತಸಂಕುಲಮತ್ತ ಮಾವಳಿ
ಸೇನಾವಳೀವರ್ಮಿತಧರ್ಮಪುರೀಪ್ರಸಭಾಕ್ರಮಣಶ್ರವಣನಿರ್ಜನೀಕೃತ ಕೆಂಗೇ
ರಿ ವಾಮಲೂರು ಬೇವುಹಳ್ಳಿ ಬೈರನೆತ್ತ ಕುನ್ನತ್ತೂರ್ ಮುಖ್ಯದುರ್ಗವರ್ಗ
ನಿರಾಯಾಸಾಕ್ರಮಣನಿವೃತ್ತನಿಜಸೈನಿಕಸಮೂಹನುಂ, ಆಹವಕಲಾಶ್ವೇತ
ವಾಹನನುಂ, ದಕ್ಷಿಣದಿಗ್ವಿಜಯಯಾತ್ರಾವಿತ್ರಾಸಿತ ಪಲಾಯಿತ ಪಾಂಡ್ಯಬಲಾ
ನುಧಾವನಶ್ರಾನ್ತನಿಜಬಲವಿಶ್ರಾನ್ತಿಸ್ಥಾನೀಕೃತ ಜಲಧಿವೇಲಾತಮಾಲಾರ
ಣ್ಯನುಂ, ಆನತಜನಶರಣ್ಯನುಂ, ಪಶ್ಚಿಮದಿಗ್ವಿಜಯಪ್ರಸ್ಥಾನ ಭೇರೀರವಾ
ಕರ್ಣನಸಂಭ್ರಾನ್ತದುರ್ದಾನ್ತಹುಶಾನಖಾನಸನಾಥ ಕೆಳದಿನೃಪ ಸಮರ್ಪಿತ
ಸರ್ವಸ್ವನಿರ್ವಾಪಿತಕೋಪನುಂ, ಅಮಿತಪ್ರತಾಪನುಂ, ಉತ್ತರದಿಗ್ವಿಜಯ

ಸಮಯಾಭಿಯಾತ ಕುತುಪಶಾಹ ವಾಹಿನೀವಿಮರ್ದನ ಕ್ಷಣಾಕ್ರಾಂತ ಕಂಡಿಕೆರೆ ಚಿಕ್ಕನಾಯಕನಹಳ್ಳಿ ಹೊನ್ನವಳ್ಳಿ ಸಾರತವಳ್ಳಿ ತುಱುಗೆರೆ ಪ್ರಮುಖ ದುರ್ಗ್ರಹಪ್ರಾಕಾರವಾರನುಂ, ಅಸಹಾಯಶೂರನುಂ, ಜಡಕನದುರ್ಗಹಠಾದ್ಗ್ರಹಣವೇಳಾಸಿಜಾತಸುರಂಗಮುಖಾನಲೋತ್ಕ್ಷಿಪ್ತಗಂಡೋಪಲಪಾತ ನಿರ್ಧೂತ ಬಿಜ್ಜವರ ಮದ್ದಗಿರಿ ಚೆನ್ನರಾಯದುರ್ಗ ವೀರಣದುರ್ಗಾದ್ಯಸಂಖ್ಯ ದುರ್ಗವರ್ಗಾಕ್ರಮಣಾವಸರಾವನತಸಾಮಂತನೃಪಾಲಮೌಳಿಮಣಿಘೃಣೀನೀರಾಜಿತಪದರಾಜೀವನುಂ, ಮಹಾನುಭಾವನುಂ, ಸಾಹಜಿಮುಖಮರಾಟ ನೃಪರಾಜಧಾನೀಕೃತಾಭಂಗುರಬೆಂಗಳೂರ್ ಹರಣ ನಿಷ್ಪ್ರಾಣಿತ ಶಂಭುಜಿ ಸಾಹಜಿ ಸಂತಜಿ ಹರಜಿ ಪ್ರಮುಖ ಮಹಾರಾಷ್ಟ್ರ ನೃಪಾಲಜಾಲನುಂ, ರಿಪುಕುಲಕಾಲನುಂ, ಸಂಗ್ರಾಮರಾಮನುಂ, ಸಾಹಸೋದ್ದಾಮನುಂ, ಪ್ರಾಥಪ್ರತಾಪನುಂ, ಪ್ರಕಟಿತಾಟೋಪನುಂ. ಅಮಿತಪರಾಕ್ರಮನುಂ, ಅಭೇದ್ಯವಿಕ್ರಮನುಂ, ಕರ್ಣಾಟಚಕ್ರವರ್ತಿಯುಂ, ಕಲ್ಯಾಣಕೀರ್ತಿಯುಂ, ಲೋಕೈಕವೀರನುಂ, ವೀರರೊಳ್ಗಂಡನುಂ, ಗಂಡರೊಳ್ಗಂಡನುಂ, ಅಂತೆಂಬರ ಗಂಡನುಮೆನಿಸಿ ನೆಗೞ್ದ ಶ್ರೀಮದಪ್ರತಿಮವೀರನರಪತಿ ಶ್ರೀ ಚಿಕದೇವಮಹಾರಾಜ

ವಿರಚಿತಮಪ್ಪ

ದಿವ್ಯಪ್ರಬಂಧಂಗಳೊಳ್

ಶ್ರೀ ಗೀತಗೋಪಾಲ ಮಹಾಪ್ರಬಂಧದೊಳ್

ಉತ್ತರಭಾಗಂ ಸಂಪೂರ್ಣಂ.

→ ಗೀತಗೋಪಾಲಂ ಸಮಾಪ್ತಂ. ←